# ವಿಶ್ವವಾಣಿ

ವಿಶ್ವಾಸವೇ ವಿಶ್ವ

## ಪಾಂಡ್ಯ ಮಿಂಚು: ಭಾರತಕ್ಕೆ ಭರ್ಜರಿ ಜಯ

ದೆಹಲಿಯಲ್ಲಿ ಗುರುವಾರ ನಡೆದ ನಮೀಬಿಯಾ ವಿರುದ್ಧದ ಟಿ20 ವಿಶ್ವಕಪ್ ಪಂದ್ಯದಲ್ಲಿ ಭಾರತ 93 ರನ್‌ಗಳಿಂದ ಜಯಗಳಿಸಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ (28 ಬಾಲ್ 52 ರನ್, 2 ವಿಕೆಟ್) ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಮಿಂಚಿ ಭಾರತದ ಗೆಲುವಿನ ರೂವಾರಿಯಾದರು.

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

सत्यमेव जयते

ಭಾರತ ಸರ್ಕಾರ
ಜಲಶಕ್ತಿ ಮಂತ್ರಾಲಯ
ಜಲಸಂಪನ್ಮೂಲ ಇಲಾಖೆ,
ನದಿ ಅಭಿವೃದ್ಧಿ ಮತ್ತು ಗಂಗಾ
ಪುನರುಜ್ಜೀವನ ಇಲಾಖೆ

iCDS

ಅಂತಾರಾಷ್ಟ್ರೀಯ ಅಣೆಕಟ್ಟು
ಸುರಕ್ಷತಾ ಸಮ್ಮೇಳನ–2026
ಸುರಕ್ಷಿತ & ಸುಭದ್ರ ಅಣೆಕಟ್ಟುಗಳು–
ವಿಕ್ಸಿತ್ ಭಾರತ್ ಕಡೆಗೆ
ಒಂದು ಪಯಣ

**ಶ್ರೀ ಸಿ.ಆರ್. ಪಾಟೀಲ್**
ಮಾನ್ಯ ಕೇಂದ್ರ ಸಚಿವರು
ಜಲ ಶಕ್ತಿ ಮಂತ್ರಾಲಯ

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ
ಇಲಾಖೆ

**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

# ಅಂತಾರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನ–2026

ನೀತಿ ಸಂವಾದ, ತಾಂತ್ರಿಕ ಮಾಹಿತಿ ವಿನಿಮಯ ಮತ್ತು ಜಾಗತಿಕ ಸಹಕಾರದ ಮೂಲಕ ಅಣೆಕಟ್ಟು ಸುರಕ್ಷತಾ ಕ್ರಮಗಳ ಬಲವರ್ಧನೆ ಉದ್ದೇಶದ ಎರಡು ದಿನಗಳ ಜಾಗತಿಕ ಸಮ್ಮೇಳನ.

**ಫೆಬ್ರವರಿ 13, 2026, ಶುಕ್ರವಾರ**
**ಬೆಳಗ್ಗೆ 9.30 ಗಂಟೆಗೆ**

**ಜೆ. ಎನ್. ಟಾಟಾ ಆಡಿಟೋರಿಯಂ,**
ಭಾರತೀಯ ವಿಜ್ಞಾನ ಸಂಸ್ಥೆ, ಮಲ್ಲೇಶ್ವರಂ, ಬೆಂಗಳೂರು

ಉದ್ಘಾಟನೆ:
**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಅಧ್ಯಕ್ಷತೆ:
**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

## ಮುಖ್ಯ ಅತಿಥಿಗಳು

**ಶ್ರೀ ವಿ. ಸೋಮಣ್ಣ**
ಮಾನ್ಯ ರಾಜ್ಯ ಸಚಿವರು, ಕೇಂದ್ರ ಜಲಶಕ್ತಿ
ಮತ್ತು ರೈಲ್ವೆ ಮಂತ್ರಾಲಯ
ಭಾರತ ಸರ್ಕಾರ

**ಶ್ರೀ ರಾಜ್ ಭೂಷಣ್ ಚೌಧರಿ**
ಮಾನ್ಯ ಕೇಂದ್ರ ಸಚಿವರು
ಜಲಶಕ್ತಿ ಮಂತ್ರಾಲಯ
ಭಾರತ ಸರ್ಕಾರ

**ಕು. ಶೋಭಾ ಕರಂದ್ಲಾಜೆ**
ಮಾನ್ಯ ರಾಜ್ಯ ಸಚಿವರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ
ಉದ್ಯಮಗಳ ಮಂತ್ರಾಲಯ, ಹಾಗೂ ಕಾರ್ಮಿಕ ಮತ್ತು ಉದ್ಯೋಗ
ಮಂತ್ರಾಲಯ, ಭಾರತ ಸರ್ಕಾರ ಹಾಗೂ ಮಾನ್ಯ ಲೋಕಸಭಾ
ಸದಸ್ಯರು, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ

**ಶ್ರೀ ಎನ್.ಎಸ್. ಬೋಸರಾಜು**
ಮಾನ್ಯ ಸಚಿವರು, ಸಣ್ಣ ನೀರಾವರಿ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ಸರ್ಕಾರ

**ಡಾ. ಸಿ.ಎನ್. ಅಶ್ವಥ್ ನಾರಾಯಣ**
ಮಾನ್ಯ ವಿಧಾನಸಭಾ ಸದಸ್ಯರು
ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ, ಬೆಂಗಳೂರು

ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ತಜ್ಞರು, ನೀತಿ ನಿರೂಪಕರು, ಇಂಜಿನಿಯರ್‌ಗಳು, ಸಂಶೋಧಕರು, ಶಿಕ್ಷಣ ತಜ್ಞರು ಮತ್ತು ಪಾಲುದಾರರನ್ನು ಒಟ್ಟುಗೂಡಿಸಿ, ಅಣೆಕಟ್ಟು ಸುರಕ್ಷತೆಗೆ ಸಂಬಂಧಿಸಿದ ಉದಯೋನ್ಮುಖ ಸವಾಲುಗಳು, ನಾವೀನ್ಯತೆಗಳು, ಉತ್ತಮ ಅಭ್ಯಾಸಗಳು ಮತ್ತು ನೀತಿಗಳ ಕುರಿತು ತಾಂತ್ರಿಕ ಮಾಹಿತಿಯ ವಿನಿಮಯಕ್ಕಾಗಿ ಈ ಸಮ್ಮೇಳನವು ಜಾಗತಿಕ ವೇದಿಕೆಯಾಗಲಿದೆ.

ಸಹಯೋಗ

DRIP
Dam Rehabilitation & Improvement Project

ಆಯೋಜನೆ :
DOWR, RD&GR, MoJS and WRD, Govt. of Karnataka

"ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸುವುದು"– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಪ್ರಕಟಣೆ : ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ

₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಶುಕ್ರವಾರ 13.02.2026 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

## ವಿಜಯ್ ಮಲ್ಯಗೆ ಲಾಸ್ಟ್ ಚಾನ್ಸ್

ಭಾರತದ ಬ್ಯಾಂಕ್‌ಗಳಿಗೆ ನೂರಾರು ಕೋಟಿ ವಂಚಿಸಿರುವ ಆರೋಪ ಹೊತ್ತ ವಿಜಯ ಮಲ್ಯ ಅವರಿಗೆ ಭಾರತಕ್ಕೆ ವಾಪಸಾಗಿ ಕೋರ್ಟ್ ವಿಚಾರಣೆಯನ್ನು ಎದುರಿಸಿ ಎಂದು ಬಾಂಬೆ ಹೈಕೋರ್ಟ್ ಗುರುವಾರ ಸ್ಪಷ್ಟ ನಿರ್ದೇಶನ ನೀಡಿದೆ. ಇದು ಕೊನೆಯ ಅವಕಾಶ ಎಂದೂ ಕೋರ್ಟ್ ತಿಳಿಸಿದೆ.

### ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿ 3ರಿಂದ 1 ಕಿಮೀ.ಗೆ ಇಳಿಕೆ ವನ್ಯ ಸಂಘರ್ಷದ ಮೂಲ

# ನೈಸರ್ಗಿಕ ಅರಣ್ಯಕ್ಕೆ ಕುಂದು ತಂದಿದ್ದು ಯಾರು?

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ಸಫಾರಿಯನ್ನು ನಿರ್ಬಂಧಿಸಿರುವ ಅರಣ್ಯ ಇಲಾಖೆ ಸಚಿವರಿಗೆ, ಅರಣ್ಯವನ್ನು ಕಾಪಾಡಲು ಪರಿಸರ ಸೂಕ್ಷ್ಮ ಪ್ರದೇಶವನ್ನು ತಗ್ಗಿಸಬಾರದು ಎನ್ನುವ ಸಣ್ಣ ಆಲೋಚನೆಯೂ ಬಂದಂತಿಲ್ಲ. 60 ವರ್ಷಗಳಿಂದ ಇಲ್ಲಿ ಹುಲಿ ದಾಳಿಯ ಗಲಾಟೆ ಏಕಾಏಕಿ ಶುರುವಾಗಲೂ, ಅರಣ್ಯ ಇಲಾಖೆಯ ಕೆಟ್ಟ ತೀರ್ಮಾನವೇ ಕಾರಣ ಎನ್ನಲಾಗುತ್ತಿದೆ.

ಈ ಹಿಂದೆ ಬಂಡೀಪುರ, ನಾಗರಹೊಳೆ ಭಾಗದಲ್ಲಿ ಅರಣ್ಯದ ಅಂಚಿನಿಂದ ಮೂರು ಕಿಮೀ ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ, ಆ ಪ್ರದೇಶದಲ್ಲಿ ಯಾವುದೇ ಕಟ್ಟಡ ಕಾಮಗಾರಿಗೆ ಅಥವಾ ಕೃಷಿಗೆ ಅವಕಾಶ ನೀಡುತ್ತಿರಲಿಲ್ಲ. ಇದರಿಂದ ಪ್ರಾಣಿಗಳು ಕಾಡಿನಿಂದ ಹೊರ ಬಂದರೂ ಮನುಷ್ಯರ ಸಂಪರ್ಕ ಸಿಗುತ್ತಿರಲಿಲ್ಲ. ಆದರೆ ಸಚಿವ ಸಂಪುಟ ಉಪಸಮಿತಿ ಈ ನಿರ್ಬಂಧವನ್ನು ಮೂರು ಕಿಮೀ ನಿಂದ ಒಂದು ಕಿಲೋ ಮೀಟರ್‌ಗೆ ಇಳಿಸಿದೆ.

ಸಂಪುಟ ಉಪಸಮಿತಿಯ ಈ ತೀರ್ಮಾನದಿಂದ ಕಾಡಿನ ಸಮೀಪ ಕಟ್ಟಡ ಕಾಮಗಾರಿಗಳ ಭಾರಿ ಪ್ರಮಾಣದಲ್ಲಿ ನಡೆಯುತ್ತಿವೆ. ಇದರಿಂದ ನೈಸರ್ಗಿಕ ಅರಣ್ಯ ಹಾಗೂ ವನ್ಯಜೀವಿಗಳಿಗೆ ಸಮಸ್ಯೆಯಾಗುತ್ತಿದೆ. ಇಂತಹ ಸೂಕ್ಷ್ಮ ವಿಷಯವನ್ನು ತಜ್ಞರು, ಸ್ಥಳೀಯರೊಂದಿಗೆ ಚರ್ಚಿಸದೇ ಏಕಾಏಕಿ ತೀರ್ಮಾನ ಕೈಗೊಂಡಿರುವ ಅರಣ್ಯ ಇಲಾಖೆ, ಇದೇ ರೀತಿ ಸಫಾರಿ ನಿರ್ಬಂಧಿಸುವ ಬಾಲಿಶ ತೀರ್ಮಾನವನ್ನು ಕೈಗೊಂಡಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

**ಕಾಡಂಚಿನಲ್ಲಿ ಶುಂಠಿ ಹಾವಳಿ:** ಪರಿಸರ ಸೂಕ್ಷ್ಮ ಪ್ರದೇಶದ ಪ್ರಮಾಣವನ್ನು ತಗ್ಗಿಸಿದ್ದರಿಂದ ಕೇರಳ ಹಾಗೂ ಕರ್ನಾಟಕದವರು ಬಂಡೀಪುರ ಹಾಗೂ ನಾಗರಹೊಳೆ ಅಭಯಾರಣ್ಯಕ್ಕೆ ಹೊಂದಿ ಕೊಂಡಂತೆ ಜಮೀನು ಖರೀದಿಸಿ, ಶುಂಠಿ ಖರೀದಿಸುತ್ತಿದ್ದಾರೆ. ಒಮ್ಮೆ ಶುಂಠಿ ಬೆಳೆದರೆ, ಮತ್ತೊಮ್ಮೆ ಅದೇ ಜಮೀನಿನಲ್ಲಿ ಬೆಳೆಯಲು ಸಾಧ್ಯವಿಲ್ಲ ಎನ್ನುವ ಕಾರಣಕ್ಕೆ ಹೊಸ ಹೊಸ ಜಮೀನುಗಳನ್ನು ಖರೀದಿಸುತ್ತಿದ್ದಾರೆ. ಈ ರೀತಿ ಹೊಸದಾಗಿ ಖರೀದಿಸುವವರು, ಹೆಡಿಯಾಳ, ಸರಗೂರು ಸುತ್ತಮುತ್ತ ಪರಿಸರ ಸೂಕ್ಷ್ಮ ಪ್ರದೇಶದ ಮೇಲೆ ಕಣ್ಣಿಟ್ಟು ಜಮೀನು ಮಾಡುತ್ತಿದ್ದಾರೆ. ಇದು ಮಾನವ-ವನ್ಯಜೀವಿಗಳ ಸಂಘರ್ಷಕ್ಕೆ ಪ್ರಮುಖ ಕಾರಣವಾಗಿದೆ.

ಸ್ಥಳೀಯ ಮಟ್ಟದ ಅಧಿಕಾರಿಗಳಿಗೆ, ರೆಸಾರ್ಟ್, ಹೋಮ್ ಸ್ಟೇ ಮಾಲೀಕರಿಗೆ, ಸ್ಥಳೀಯ ಜನರಿಗೆ ಈ ವಿಷಯ ಗೊತ್ತಿದ್ದರೂ ಅರಣ್ಯ ಇಲಾಖೆಯ ಮೇಲಾಧಿಕಾರಿಗಳು, ಸಚಿವರು ಇದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಭೌಗೋಳಿಕವಾಗಿ ಎದುರಾಗುತ್ತಿರುವ, ಪ್ರಾಟಿಕಲ್ ಸಮಸ್ಯೆಯನ್ನು ಗಮನಿಸದೇ, ದಾಳಿ ನಡೆಯುತ್ತಿರುವ ಸ್ಥಳದಿಂದ 60 ಕಿಮೀ ದೂರದಲ್ಲಿರುವ ಸಫಾರಿಗೆ ನಿರ್ಬಂಧಿಸುವ ಕೆಟ್ಟ ತೀರ್ಮಾನ ಕೈಗೊಳ್ಳುವುದಷ್ಟೇ, ತಮ್ಮ ತೀರ್ಮಾನವೇ ಸರಿ ಎನ್ನುವ ಭಂಡತನ ಪ್ರದರ್ಶನ ಮಾಡುತ್ತಿರುವುದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.

### ಅರಣ್ಯದೊಳಗೆ ಜೆಸಿಬಿಗೇನು ಕೆಲಸ?

ಮಾನವ-ವನ್ಯಜೀವಿಗಳ ಸಂಘರ್ಷ ತಡೆಗೆ ಎನ್ನುವ 'ಬಾಲಿಶ' ಕಾರಣ ನೀಡಿ ಸಫಾರಿಯನ್ನು ಸ್ಥಗಿತಗೊಳಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳೇ ಅಭಯಾರಣ್ಯ, ದಟ್ಟ ಕಾನನದೊಳಗೆ ಜೆಸಿಬಿಗಳನ್ನು ಬಿಟ್ಟು ಕೆಲಸ ಮಾಡಿಸುತ್ತಿದ್ದಾರೆ. ಹಾಗೇ ನೋಡಿದರೆ, ನೈಸರ್ಗಿಕವಾಗಿ ಅರಣ್ಯವಿರುವಂತೆ ನೋಡಿಕೊಳ್ಳುವುದಷ್ಟೇ ಸಿಬ್ಬಂದಿಯ ಕೆಲಸ. ಅರಣ್ಯದೊಳಗೆ ಬೀಳುವ ಮರಗಳನ್ನು ತೆರವುಗೊಳಿಸುವ ಅಥವಾ ಸಾಯುವ ಪ್ರಾಣಿಗಳನ್ನಾಗಿ ಎತ್ತುವ 'ಅಧಿಕಾರ'ವೂ ಅರಣ್ಯ ಇಲಾಖೆಯ ಸಿಬ್ಬಂದಿಗಳಿಲ್ಲ. ಹೀಗಿರುವಾಗ, ಅರಣ್ಯದೊಳಗೆ 'ಜೆಸಿಬಿ'ಗಳನ್ನು ಬಿಟ್ಟು ಕೆಲಸ ಮಾಡಲು ಅಧಿಕಾರ ನೀಡಿದ್ಯಾರು? ಈ ರೀತಿ ಜೆಬಿಸಿಗಳನ್ನು ಬಳಸಿಕೊಂಡು ಮಾಡಿರುವ ಕೆಲಸಗಳಿಂದಲೇ ವನ್ಯಜೀವಿಗಳಿಗೆ ಬೇಕಿರುವಂತಹ ಸ್ಥಳ ಇಲ್ಲವಾಗಿದೆ ಎನ್ನುವ ಆರೋಪವಿದೆ.

---

## ಮೆಟ್ರೊ ರೆಡ್‌ಲೈನ್‌ಗೆ ಕೇಂದ್ರ ರೆಡ್ ಸಿಗ್ನಲ್

**ಬೆಂಗಳೂರು:** ಹೆಬ್ಬಾಳ- ಸರ್ಜಾಪುರ ಮೆಟ್ರೋ ಯೋಜನೆಗೆ ಸಂಬಂಧಿಸಿದ ಡಿಪಿಆರ್ ಅನುಮೋದನೆಗೆ ಕೇಂದ್ರ ಸರಕಾರ ಆಕ್ಷೇಪ ವ್ಯಕ್ತಪಡಿಸಿದೆ.

ನಮ್ಮ ಮೆಟ್ರೋ ರೆಡ್ ಲೈನ್ ಯೋಜನೆಯ ಡಿಪಿಆರ್‌ಗೆ ಕೇಂದ್ರ ಸರಕಾರ ಆಕ್ಷೇಪ ವ್ಯಕ್ತಪಡಿಸಿದ್ದು, 28,405 ಕೋಟಿ ವೆಚ್ಚದ ಈ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಡಬಲ್ ಡೆಕ್ಕರ್ ಯೋಜನೆಗೆ ಕೇಂದ್ರ ಸರಕಾರ ತಡೆಯೊಡ್ಡಿದೆ. ಮೆಟ್ರೋ ಮಾರ್ಗದುದ್ದಕ್ಕೂ ಡಬಲ್ ಡೆಕ್ಕರ್ ಮಾರ್ಗ ನಿರ್ಮಿಸಿದರೆ, ಪ್ರಯಾಣಿಕರು ರಸ್ತೆ ಮಾರ್ಗದಲ್ಲಿಯೇ ಸಂಚರಿಸುವ ಸಾಧ್ಯತೆ ಇದೆ. ಇದರಿಂದ ಮೆಟ್ರೋ ಆದಾಯಕ್ಕೆ ಧಕ್ಕೆ ಬರಬಹುದು ಎಂದು ಕೇಂದ್ರ ನಗರ ಯೋಜನಾ ಸಚಿವಾಲಯ ಆಕ್ಷೇಪ ವ್ಯಕ್ತಪಡಿಸಿದೆ ಎನ್ನಲಾಗಿದೆ. ಯೋಜನೆ ಮರುಪರಿಶೀಲಿಸುವಂತೆ ರಾಜ್ಯ ಸರಕಾರಕ್ಕೆ ಸೂಚನೆ ನೀಡಿದ್ದು, ಕಾಮಗಾರಿ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

## ಬಿಎನ್‌ಪಿ ಮುನ್ನಡೆ

**ಢಾಕಾ:** ನೆರೆಯ ಬಾಂಗ್ಲಾದೇಶದಲ್ಲಿ ಗುರುವಾರ 299 ಸಂಸತ್ ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಶೇಕಡ 50ರಷ್ಟು ಮತದಾನವಾಗಿದೆ. ಇದರ ಬೆನ್ನಿಗೇ ಮತ ಎಣಿಕೆಯೂ ಆರಂಭವಾಗಿದೆ. ತಾರಿಖ್ ರೆಹಮಾನ್ ನಾಯಕತ್ವದ ಬಾಂಗ್ಲಾದೇಶ ನ್ಯಾಶನಲಿಸ್ಟ್ ಪಕ್ಷ (ಬಿಎನ್‌ಪಿ) 175 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದ್ದು ಆಡಳಿತ ಚುಕ್ಕಾಣಿ ಹಿಡಿಯುವತ್ತ ಮುಂದಡಿ ಇಟ್ಟಿದೆ. ಜಮಾತ್ ಎ ಇಸ್ಲಾಮಿ 26 ಸ್ಥಾನಗಳಲ್ಲಷ್ಟೇ ಮುನ್ನಡೆ ಪಡೆಯಲು ಶಕ್ತವಾಗಿದೆ. 2024ರಲ್ಲಿ ನಡೆದ ರಾಷ್ಟ್ರವ್ಯಾಪಿ ಪ್ರತಿಭಟನೆಗಳಲ್ಲಿ ಆಗಿನ ಪ್ರಧಾನಿ ಶೇಖ್ ಹಸೀನಾ ಅವರನ್ನು ಪದಚ್ಯುತಗೊಳಿಸಿದ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ. ಅವರ ಪಕ್ಷಕ್ಕೆ ಸ್ಪರ್ಧಿಸಲು ಅವಕಾಶ ಸಿಕ್ಕಿಲ್ಲ.

## ಅಣೆಕಟ್ಟೆ ಸುರಕ್ಷತೆ ಇಂದು ಸಮ್ಮೇಳನ

**ಬೆಂಗಳೂರು:** ನಮ್ಮ ಸರಕಾರ ಅಧಿಕಾರಕ್ಕೆ ಬಂದು ಸಾವಿರ ದಿನಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲೇ ಬೆಂಗಳೂರಿನಲ್ಲಿ

ಎರಡು ದಿನಗಳ ಅಂತಾರಾಷ್ಟ್ರೀಯ ಅಣೆ ಕಟ್ಟು ಸುರಕ್ಷತಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆಬ್ರವರಿ 13 ಹಾಗೂ 14ರಂದು ಭಾರತೀಯ ವಿಜ್ಞಾನ ಸಂಸ್ಥೆಯ ಜೆ.ಜೆ ಟಾಟಾ ಸಭಾಂಗಣದಲ್ಲಿ ನಡೆಯುವ ಎರಡು ದಿನಗಳ ಸಮ್ಮೇಳನಕ್ಕೆ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದರು. ಭಾರತದಲ್ಲಿ 6,628 ಅಣೆಕಟ್ಟುಗಳಿದ್ದು, ಕರ್ನಾಟಕ 231 ಅಣೆಕಟ್ಟುಗಳನ್ನು ಹೊಂದಿದೆ. ಅಣೆಕಟ್ಟುಗಳ ಸುರಕ್ಷತೆ ಬಗ್ಗೆ ಸಮ್ಮೇಳನದಲ್ಲಿ ಚರ್ಚಿಸಲಿದೆ ಎಂದರು.

## ಬಿಎಂಟಿಸಿಗೆ ಬರಲಿವೆ 1750 ಎಲೆಕ್ಟ್ರಿಕ್ ಬಸ್

**ಬೆಂಗಳೂರು:** ಕೇಂದ್ರ ಸರಕಾರದ ಪಿಎಂ-ಇ-ಡ್ರೈವ್ ಯೋಜನೆಯ ಡಿಯಲ್ಲಿ ಬಿಎಂಟಿಸಿಗೆ ಮೊದಲ ಹಂತದಲ್ಲಿ 1750 ಹೊಸ ಬಸ್‌ಗಳು ಬರಲಿವೆ. ಸದ್ಯ ಬಿಎಂಟಿಸಿಯಲ್ಲಿರುವ 6800ಕ್ಕೂ ಅಧಿಕ ಬಸ್‌ಗಳು ಪ್ರಯಾಣಿಕರಿಗೆ ಸಾಲುತ್ತಿಲ್ಲ. ಎನ್ನುವ ಮಾತುಗಳು ಕೇಳಿ ಬಂದಿದ್ದು, ಹೀಗಾಗಿ ಕೇಂದ್ರ ಸರಕಾರದ ಪಿಎಂ-ಇ-ಡ್ರೈವ್ ಯೋಜನೆ ಅಡಿಯಲ್ಲಿ ಬಿಎಂಟಿಸಿಗೆ ಮೊದಲ ಹಂತದಲ್ಲಿ 1750 ಎಸಿ ಮತ್ತು ನಾನ್ ಎಸಿ ಎಲೆಕ್ಟ್ರಿಕ್ ಬಸ್‌ಗಳನ್ನು ಮಂಜೂರು ಮಾಡಿದೆ.

## ಫನ್‌ತರಂಗ

- ರಘುಪತಿ ಶೃಂಗೇರಿ -

ಕನ್ನಡ ಚಲನಚಿತ್ರ 'ನಾನ್ ವೆಜ್' ರಾಜ್ಯಾದ್ಯಂತ ಬಿಡುಗಡೆ

---

### ಚಿನ್ನಸ್ವಾಮಿಯಲ್ಲಿಯೇ ಆರ್‌ಸಿಬಿ ಪಂದ್ಯ ನಡೆಯುವ ನಿರೀಕ್ಷೆ

# ಐಪಿಎಲ್‌ಗೆ ಸಂಪುಟ ಅಸ್ತು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ವರ್ಷ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತದ ಬಳಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸ್ತಬ್ಧವಾಗಿದ್ದ ಕ್ರಿಕೆಟ್ ಚಟುವಟಿಕೆ ಪುನರಾರಂಭವಾಗುವುದಕ್ಕೆ ಸಚಿವ ಸಂಪುಟ ಸಭೆ ಅಸ್ತು ಎನ್ನುವ ಮೂಲಕ ಆರ್‌ಬಿಸಿ ಅಭಿಮಾನಿಗಳಿಗೆ ಸಿಹಿ ಸುದ್ದಿ ಸಿಕ್ಕಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಕಾನೂನು ಸಚಿವ ಎಚ್.ಕೆ.ಪಾಟೀಲ್, ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಐಪಿಎಲ್ ಕ್ರಿಕೆಟ್ ಆಡಲು ಅನುಮತಿ ನೀಡಲು ಸರಕಾರ ಒಪ್ಪಿದ್ದು, ಆರ್‌ಸಿಬಿಗೆ ಆಟವಾಡಲು ಅನುಮತಿ ನೀಡಿದೆ. ತಜ್ಞರ ಸಮಿತಿಯು ನೀಡಿದ ವರದಿಯಂತೆ ಕ್ರಿಕೆಟ್ ಆಟವಾಡಲು ಅನುಮತಿ ನೀಡಲಾಗಿದೆ ಎಂದರು.

ಈಗಾಗಲೇ ಮೈಕೆಲ್ ಡಿ'ಕುನ್ಹಾ ವರದಿಯ ಶಿಫಾರಸು ಜಾರಿಗೊಳಿಸಲು ಕೆಎಸ್‌ಸಿಎ ಮುಂದಾಗಿದೆ. ವರದಿಯಲ್ಲಿ ಶಿಫಾರಸು ಮಾಡಿರುವಂತೆ ಮೂಲ ಸೌಕರ್ಯ ಒದಗಿಸುವ ಕೆಲಸ ಮಾಡಲಾಗುತ್ತಿದೆ. ಐಪಿಎಲ್ ಪಂದ್ಯಗಳನ್ನು ಆಯೋಜಿಸಲು ಅನುಮತಿ ನೀಡಬಹುದು ಎಂದು ತಜ್ಞರ ಸಮಿತಿ ನೀಡಿದ್ದ ವರದಿಯ ಆಧಾರದ ಮೇಲೆ ಈ ನಿರ್ಧಾರ ಮಾಡಲಾಗಿದೆ. ಐಪಿಎಲ್ ಜೊತೆ ಜೊತೆಗೆ ಮೂಲ ಸೌಕರ್ಯ ಕಾಮಗಾರಿಗಳು ನಡೆಯಬೇಕು. ತಜ್ಞರ ಉಸ್ತುವಾರಿಯಲ್ಲಿ ಈ ಕಾಮಗಾರಿಗಳು ನಡೆಯುತ್ತಿದ್ದು, ಮೂರು ಹಂತದಲ್ಲಿ ಸ್ಟೇಡಿಯಂನ ಮಾರ್ಪಾಡಿಗೆ ಸೂಚನೆ ನೀಡಲಾಗಿದೆ. ಈಗಾಗಲೇ ಮೊದಲ ಹಂತದ ಕಾಮಗಾರಿಗೆ ಕೆಪಿಎಸ್‌ಸಿ ಚಾಲನೆ ನೀಡಿದೆ. ಅಂಬುಲೆನ್ಸ್ ಓಡಾಟಕ್ಕೆ ಜಾಗ, ಪಾರ್ಕಿಂಗ್ ವ್ಯವಸ್ಥೆ, ತುರ್ತು ನಿರ್ಗಮನ, ಅಗಲವಾದ ಗೇಟ್‌ಗಳು, ಮಹಿಳೆಯರಿಗೆ ಪ್ರತ್ಯೇಕ ಮಾರ್ಗ ಸೇರಿ ಎಲ್ಲಾ ಮಾರ್ಗಸೂಚಿಗಳನ್ನು ಸರಿಪಡಿಸುವ ಕೆಲಸ ನಡೆಯುತ್ತಿದೆ.

**ರೇಸ್‌ಕೋರ್ಸ್ ಕುಣಿಗಲ್‌ಗೆ:** ಬೆಂಗಳೂರಿನಿಂದ ತುಮಕೂರಿಗೆ ರೇಸ್‌ಕೋರ್ಸ್ ಸ್ಥಳಾಂತರವಾಗಲಿದ್ದು, 110 ಎಕರೆ ಜಾಗವನ್ನು 29 ವರ್ಷದ ಗುತ್ತಿಗೆ ಆಧಾರದ ಮೇಲೆ ಟರ್ಫ್ ಕ್ಲಬ್‌ಗೆ ನೀಡಲಾಗಿದೆ. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಸುಪರ್ದಿಯಲ್ಲಿರುವ ತುಮಕೂರು ಜಿಲ್ಲೆಯ ಕುಣಿಗಲ್ ಸ್ಟಡ್ ಫಾರಂಗೆ ರೇಸ್‌ಕೋರ್ಸ್ ಸ್ಥಳಾಂತರವಾಗಲಿದೆ. ಈಗಿರುವ ರೇಸ್ ಕೋರ್ಸ್ ಪ್ರದೇಶವನ್ನು ಅದೇ ರೀತಿ ಉಳಿಸಿಕೊಳ್ಳಲು ಸರಕಾರ ಉದ್ದೇಶಿಸಿದ್ದು, ಈಗಾಗಲೇ ಗುತ್ತಿಗೆ ಅವಧಿ ಮುಗಿದಿದ್ದು ನ್ಯಾಯಾಲಯದ ಆದೇಶದಂತೆ 2010 ರಿಂದ ತೆರವುಗೊಳಿಸಬೇಕಾಗಿತ್ತು ಎಂದರು.



ಮತಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಂಬಂಧ ಕ್ಯಾಬಿನೆಟ್‌ನಲ್ಲಿ ಗಂಭೀರವಾಗಿ ಚರ್ಚಿಸಲಾಗಿದೆ. ಕಾನೂನು ಇಲಾಖೆ ಈ ವಿಷಯದ ಬಗ್ಗೆ ವಿವರವಾಗಿ ಅಧ್ಯಯನ ಮಾಡಲಿದೆ. ಇದರಲ್ಲಿ ಸಾಕಷ್ಟು ವಿಷಯಗಳ ಬಗ್ಗೆ ಕೆಲ ಗೊಂದಲಗಳಿವೆ. ಹೀಗಾಗಿ ಕಾನೂನು ಇಲಾಖೆ ಎಲ್ಲಾ ಸಾಧಕ ಬಾಧಕದ ಬಗ್ಗೆ ಅಧ್ಯಯನ ನಡೆಸಿ ವರದಿ ಕೊಡಲಿದೆ. ಬಳಿಕ ತೀರ್ಮಾನ ಕೈಗೊಳ್ಳಲಾಗುತ್ತದೆ.

ಎಚ್.ಕೆ ಪಾಟೀಲ್, ಕಾನೂನು ಸಚಿವ

### ಪ್ರಮುಖಾಂಶ

- ಶಕ್ತಿ ಯೋಜನೆಯಡಿ ಬಸ್ಸುಗಳಲ್ಲಿ ಪ್ರಯಾಣಿಸುವ ಮಹಿಳೆಯರಿಗೆ ಉಚಿತ ಸ್ಮಾರ್ಟ್‌ಕಾರ್ಡ್
- ಸರಕಾರಿ ಶಾಲಾ ಮಕ್ಕಳ ಶೂ ಮತ್ತು ಸಾಕ್ಸ್ ಖರೀದಿಗೆ 104 ಕೋಟಿ ರು. ಮೀಸಲು
- ದಾವಣಗೆರೆ ಹೊನ್ನಾಳಿ ಶೀತಲಗೃಹಕ್ಕೆ 10.32 ಕೋಟಿ ರು. ಮಂಜೂರು
- ಜಿಲ್ಲಾ ಹಾಗೂ ತಾಲೂಕು ಆಸ್ಪತ್ರೆಗಳ ಅಭಿವೃದ್ಧಿ ಕೆಲಸಕ್ಕೆ 71.40 ಲಕ್ಷ ರು.
- ವಿಜಯಪುರದ ತಿಕೋಟದಲ್ಲಿ 12.40 ಶೀತಲೀಕರಣ ಘಟಕಕ್ಕೆ ಅನುಮೋದನೆ
- ಕಲ್ಯಾಣ ಕರ್ನಾಟಕ ಹಾಗೂ ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿಗೆ 71.41 ಕೋಟಿ
- ಬಾಗಲಕೋಟೆಯಲ್ಲಿ 11.12 ಕೋಟಿ ರು ನಬಾರ್ಡ್ ನೆರವಿನೊಂದಿಗೆ ಜೀನ್ ಬ್ಯಾಂಕ್

---

### ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣ । ವಿಮಾನ ನಿಲ್ದಾಣದಲ್ಲಿ ಸಿಐಡಿ ವಶಕ್ಕೆ

# ಬೈರತಿ ಬಸವರಾಜ್ ಲಾಕ್

**ಬೆಂಗಳೂರು:** ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಹಾಗೂ ಮಾಜಿ ಸಚಿವ ಬೈರತಿ ಬಸವರಾಜ ಅವರನ್ನು ಸಿಐಡಿ ಪೊಲೀಸರು ಗುರುವಾರ ಸಂಜೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದಿದ್ದಾರೆ.

ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಶಾಸಕರಿಗೆ ಸುಪ್ರೀಂ ಕೋರ್ಟ್‌ಲ್ಲಿ ನಿರೀಕ್ಷಣಾ ಜಾಮೀನು ನಿರಾಕರಿಸಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಸುಪ್ರೀಂಕೋರ್ಟ್‌ನಲ್ಲಿ ಜಾಮೀನು ಅರ್ಜಿ ವಜಾಗೊಂಡ ನಂತರ ಬಂಧನದ ಭೀತಿಯಿಂದ ಬೈರತಿ ಬಸವರಾಜ ಅವರು ಗುಜರಾತ್‌ನ ಅಹಮದಾಬಾದ್‌ನಲ್ಲಿ ತಲೆಮರೆಸಿಕೊಂಡಿದ್ದರು. ಅವರು ಅಹಮದಾಬಾದ್‌ನಿಂದ ಇಂಡಿಗೋ (6ಇ683) ವಿಮಾನದ ಮೂಲಕ ಬೆಂಗಳೂರಿಗೆ ಬರುತ್ತಿರುವ ಖಚಿತ ಮಾಹಿತಿ ಪಡೆದ ಸಿಐಡಿ ಅಧಿಕಾರಿಗಳು ವಿಮಾನ ನಿಲ್ದಾಣದಲ್ಲಿ ಬಲೆ ಬೀಸಿದ್ದರು. ವಿಮಾನ ನಿಲ್ದಾಣದ ಟರ್ಮಿನಲ್ 1ರ ಒಳಭಾಗಕ್ಕೆ ಸಿಐಡಿ ಅಧಿಕಾರಿಗಳಿಗೆ ಪ್ರವೇಶವಿಲ್ಲದ ಕಾರಣ, ದೇವನಹಳ್ಳಿ ಎಸಿಪಿ ಹರ್ಷ ಅವರು ಶಾಸಕರನ್ನು ವಶಕ್ಕೆ ಪಡೆದು ಹೊರಕ್ಕೆ ಕರೆತಂದರು. ಶಾಸಕ ಬೈರತಿ ಬಸವರಾಜ್ ಅವರನ್ನು ಸಿಐಡಿ ಕಚೇರಿಗೆ ಕರೆದೊಯ್ಯಲಾಯಿತು. ಇಂದು ಕೋರ್ಟ್‌ಗೆ ಹಾಜರುಪಡಿಸಿ ಪೊಲೀಸ್ ವಶಕ್ಕೆ ಪಡೆಯಲಿದ್ದಾರೆ.

ಗುರುವಾರ ಬೆಳಗ್ಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೊಯಮಲ್ಯ ಬಾಗ್ಚಿ ಅವರ ಪೀಠವು ಬೈರತಿ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು. ನೀವು ಸಾರ್ವಜನಿಕ ಸೇವಕರು, ಧೈರ್ಯದಿಂದ ವಿಚಾರಣೆ ಎದುರಿಸಿ ಎಂದು ಕಿವಿಮಾತು ಹೇಳಿದ ನ್ಯಾಯಾಲಯ, ಪ್ರಕರಣದ ಪ್ರಮುಖ ಆರೋಪಿ ಜಗದೀಶ್ ಜತೆ ಶಾಸಕರು ಸಂಪರ್ಕದಲ್ಲಿದ್ದರು ಎಂಬ ಕರೆ ದಾಖಲೆಗಳನ್ನು ಗಂಭೀರವಾಗಿ ಪರಿಗಣಿಸಿತು. ನಿಯಮಿತ ಜಾಮೀನು ಕೋರಿ ಅರ್ಜಿ ಸಲ್ಲಿಸಲು ಮಾತ್ರ ನ್ಯಾಯಾಲಯ ಅವರಿಗೆ ಅವಕಾಶ ನೀಡಿದೆ.

### ಲುಕ್‌ಔಟ್ ನೋಟಿಸ್ ಕೊಟ್ಟಿದ್ದ ಸಿಐಡಿ

ಬಂಧಿತ ಶಾಸಕರನ್ನು ವಿಮಾನ ನಿಲ್ದಾಣದಿಂದ ನೇರವಾಗಿ ಬೆಂಗಳೂರಿಗೆ ಕರೆತರಲಾಗಿದ್ದು, ಮುಂಜಾಗ್ರತಾ ಕ್ರಮವಾಗಿ ವಿಕ್ಟೋರಿಯಾ ಅಥವಾ ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು. ವೈದ್ಯಕೀಯ ವರದಿ ಬಂದ ನಂತರ ಸಿಐಡಿ ಕಚೇರಿಯಲ್ಲಿ ಹೆಚ್ಚಿನ ವಿಚಾರಣೆ ನಡೆಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ. ಕಳೆದ ಹಲವು ತಿಂಗಳಿಂದ ನಾಪತ್ತೆಯಾಗಿದ್ದ ಬೈರತಿ ಬಸವರಾಜ್ ಬಂಧನಕ್ಕೆ ಸಿಐಡಿ ಪೊಲೀಸರು ಲುಕ್‌ಔಟ್ ನೋಟಿಸ್ ಸಹ ಹೊರಡಿಸಿದ್ದರು.

### ಏನಿದು ಪ್ರಕರಣ

2025 ಜುಲೈ 15ರಂದು ಹಲಸೂರು ಕೆರೆ ಸಮೀಪದ ಮನೆಯೊಂದರ ಎದುರು ನಡೆದ ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ವಿರುದ್ಧ ಭಾರತಿ ನಗರ ಪೊಲೀಸ್ ಎಫ್‌ಐಆರ್ ದಾಖಲಾಗಿತ್ತು. ಕೊಲೆಯಾದ ಶಿವಪ್ರಕಾಶ್ ಅವರ ತಾಯಿ ವಿಜಯಲಕ್ಷ್ಮಿ ನೀಡಿದ ದೂರಿನ ಆಧಾರದ ಮೇಲೆ ಐವರ ವಿರುದ್ಧ ಎಫ್‌ಐಆರ್ ದಾಖಲಿಸಿ ಕೊಂಡು ಪೊಲೀಸರು ತನಿಖೆ ನಡೆಸಿದ್ದರು. ಜುಲೈ 24 ರಂದು ಬಿಕ್ಲು ಶಿವನ ಬರ್ಬರ ಹತ್ಯೆ ಪ್ರಕರಣವನ್ನು ರಾಜ್ಯ ಸರಕಾರವು ಸಿಐಡಿ ತನಿಖೆಗೆ ವಹಿಸಿ ಆದೇಶ ಹೊರಡಿಸಿತ್ತು. ಈ ಪ್ರಕರಣದಲ್ಲಿ ಬಿಜೆಪಿ ಶಾಸಕ ಬೈರತಿ ಬಸವರಾಜ್ ಐದನೇ ಆರೋಪಿಯಾಗಿದ್ದು, ಸಾಕಷ್ಟು ದಿನಗಳಿಂದ ಪೊಲೀಸರಿಗೆ ಸಿಗದೇ ತಲೆ ಮರೆಸಿಕೊಂಡಿದ್ದರು.

---

## ಧೋನಿಗೆ 10 ಲಕ್ಷ ಶುಲ್ಕ

**ಚೆನ್ನೈ:** 2013ರ ಐಪಿಎಲ್ ಬೆಟ್ಟಿಂಗ್ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿಗೆ ಮದ್ರಾಸ್ ಹೈಕೋರ್ಟ್ ಶಾಕ್ ನೀಡಿದ್ದು, 10 ಲಕ್ಷ ರೂ ಶುಲ್ಕ ವಿಧಿಸಿದೆ. 2013ರ ಐಪಿಎಲ್ ಬೆಟ್ಟಿಂಗ್ ಹಗರಣದಲ್ಲಿ ತಮ್ಮ ಹೆಸರನ್ನು ತಳುಕು ಹಾಕಿದ್ದಕ್ಕಾಗಿ ನಿವೃತ್ತ ಐಪಿಎಸ್ ಅಧಿಕಾರಿ ಜಿ. ಸಂಪತ್‌ಕುಮಾರ್ ವಿರುದ್ಧ ದಾಖಲಿಸಿರುವ 100 ಕೋಟಿ ರೂ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದ ದಾಖಲೆಗಳ ಭಾಷಾಂತರಕ್ಕಾಗಿ 10 ಲಕ್ಷ ರೂ ಶುಲ್ಕ ಪಾವತಿಸುವಂತೆ ಮಾಜಿ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಅವರಿಗೆ ಮದ್ರಾಸ್ ಹೈಕೋರ್ಟ್ ನಿರ್ದೇಶನ ನೀಡಿದೆ.

### ದಾಖಲಾದ 24 ಗಂಟೆಯೊಳಗೆ ವಿವರ ನೀಡಲು ಶಿಕ್ಷಣ ಸಂಸ್ಥೆಗಳಿಗೆ ಕೇಂದ್ರ ಸೂಚನೆ

# ವಿದೇಶಿ ವಿದ್ಯಾರ್ಥಿಗಳ ಪ್ರವೇಶ ವಿವರ ನೀಡಲು ಕೇಂದ್ರ ಸೂಚನೆ

**ದೆಹಲಿ:** ವಿದೇಶಿ ವಿದ್ಯಾರ್ಥಿ ಪ್ರವೇಶ ಪಡೆದ 24 ಗಂಟೆಯ ಒಳಗಡೆ ಎಲ್ಲಾ ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಗೊತ್ತುಪಡಿಸಿದ ನೋಂದಣಿ ಅಧಿಕಾರಿಗಳಿಗೆ ಕಡ್ಡಾಯವಾಗಿ ವರದಿ ಮಾಡಬೇಕೆಂದು ಕೇಂದ್ರ ಸರಕಾರ ನಿರ್ದೇಶನ ನೀಡಿದೆ.

ರಾಜ್ಯಗಳು ಮತ್ತು ಸಂಬಂಧಿತ ಸಂಸ್ಥೆಗಳಿಗೆ ಕಳುಹಿಸಿದ ಹೊಸ ನಿರ್ದೇಶನದಲ್ಲಿ ರಾಷ್ಟ್ರೀಯ ಭದ್ರತೆಯ ಹಿತದೃಷ್ಟಿಯಿಂದ ಕಟ್ಟುನಿಟ್ಟಾಗಿ ಈ ಆದೇಶವನ್ನು ಪಾಲಿಸಬೇಕೆಂದು ಸೂಚನೆ ನೀಡಿದೆ. ಕಳೆದ ವರ್ಷ ಜಾರಿಗೆ ಬಂದ ವಲಸೆ ಮತ್ತು ವಿದೇಶಿಯರ ಕಾಯ್ದೆ 2025ರ

ನಿಬಂಧನೆಗಳ ಅಡಿಯಲ್ಲಿ ಈ ಆದೇಶವನ್ನು ಹೊರಡಿಸಲಾಗಿದೆ.

ಭಾರತದಲ್ಲಿ ಅಧ್ಯಯನ ಮಾಡುತ್ತಿರುವ ವಿದೇಶಿ ವಿದ್ಯಾರ್ಥಿಗಳ ಮೇಲ್ವಿಚಾರಣಾ ಕಾರ್ಯವಿಧಾನಗಳನ್ನು ಬಲಪಡಿಸಲು ಮತ್ತು ನವೀಕರಿಸಿದ ದಾಖಲೆಗಳನ್ನು ನಿರ್ವಹಿಸಲು ಇದೊಂದು ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ

ಪ್ರಕ್ರಿಯೆಯ ಭಾಗವಾಗಿ ವಿದೇಶಿ ವಿದ್ಯಾರ್ಥಿಗಳ ದಾಖಲು ಅವಧಿಯಲ್ಲಿಯೇ ಶೈಕ್ಷಣಿಕ ಸಂಸ್ಥೆಗಳು ನಿಗದಿತ ನಮೂನೆಯನ್ನು ಭರ್ತಿ ಮಾಡಬೇಕಾಗುತ್ತದೆ, ನಂತರ ನಮೂನೆಯನ್ನು 24 ಗಂಟೆಗಳ ಒಳಗೆ ಸರಕಾರಿ ಪೋರ್ಟಲ್‌ಗೆ ಅಪ್‌ಲೋಡ್ ಮಾಡಬೇಕು. ಸಂಸ್ಥೆಗಳು ವಿದ್ಯಾರ್ಥಿಯ ವೀಸಾ ಸಂಖ್ಯೆ, ಹೆಸರು, ಸಂಪರ್ಕ ಮಾಹಿತಿ ಮತ್ತು ಇತರ ಸಂಬಂಧಿತ ವಿವರವನ್ನು ಒದಗಿಸಬೇಕು. ಇದರ ಜೊತೆಗೆ ಶೈಕ್ಷಣಿಕ ದಾಖಲೆಗಳು ಮತ್ತು ಕಾರ್ಯಕ್ಷಮತೆಗೆ ಸಂಬಂಧಿಸಿದ ವಿವರಗಳನ್ನು ಒದಗಿಸುವಂತೆ ಸರಕಾರವು ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ.

## ಐ.ಟಿ. ಷೇರು ಕುಸಿತ

**ಮುಂಬೈ:** ಕೃತಕ ಬುದ್ಧಿಮತ್ತೆಯ ಹೊಸ ಟೂಲ್‌ಗಳ ಕಾರಣದಿಂದ ಐಟಿ ಉದ್ಯಮಕ್ಕೆ ತೀವ್ರ ಧಕ್ಕೆಯಾಗಲಿದೆ ಎಂಬ ವರದಿಗಳ ನಡುವೆ ಗುರುವಾರ ದೇಶದ ಷೇರು ಪೇಟೆಯಲ್ಲಿ ಮಾಹಿತಿ ತಂತ್ರಜ್ಞಾನ ವಲಯದ ಷೇರುಗಳ ಮೌಲ್ಯವು ತೀವ್ರವಾಗಿ ಕುಸಿದಿದೆ. ಮುಂಬೈ ಷೇರುಪೇಟೆ ಸೂಚ್ಯಂಕ ಬಿಎಸ್‌ಇ ಸೆನ್ಸೆಕ್ಸ್ 558 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ಎನ್‌ಎಸ್‌ಇ ನಿಫ್ಟಿ 146ರಷ್ಟು ಕುಸಿದಿವೆ. ಟೆಕ್ ಮಹೀಂದ್ರ, ಇನ್ಫೋಸಿಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಗಳ ಷೇರುಗಳು ಗರಿಷ್ಠ ಶೇ 6ರವರೆಗೆ ಇಳಿಕೆ ಕಂಡಿವೆ.

---

### ಕೇರಳ, ಪ.ಬಂಗಾಳ ಹೊರತುಪಡಿಸಿ ಉಳಿದೆಡೆ ಮುಷ್ಕರಕ್ಕೆ ಆಂಶಿಕ ಪ್ರತಿಕ್ರಿಯೆ

# ಭಾರತ ಬಂದ್ ನೀರಸ

**ದೆಹಲಿ:** ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ, ರೈತ ವಿರೋಧಿ ಮತ್ತು ದೇಶವಿರೋಧಿ ನೀತಿಗಳನ್ನು ಖಂಡಿಸಿ ಹಾಗೂ 4 ಹೊಸ ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಗುರುವಾರ ಕರೆ ನೀಡಿದ್ದ ದೇಶವ್ಯಾಪಿ ಮುಷ್ಕರಕ್ಕೆ (ಭಾರತ ಬಂದ್) ಹೆಚ್ಚಿನ ರಾಜ್ಯಗಳಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದ್ದರೆ, ಉಳಿದ ರಾಜ್ಯಗಳಲ್ಲಿ ಬಂದ್ ಪರಿಣಾಮ ಬೀರಲಿಲ್ಲ. ಬ್ಯಾಂಕಿಂಗ್, ವಿಮೆ ಹಾಗೂ ಗಣಿಗಾರಿಕೆ ವಲಯಗಳಲ್ಲಿ ಮುಷ್ಕರದ ಬಿಸಿ ತಟ್ಟಿದೆ ಎಂದು ವರದಿಗಳು ತಿಳಿಸಿವೆ. ಅಸ್ಸಾಂ, ತಮಿಳುನಾಡು, ಪುದುಚೇರಿ, ಒಡಿಶಾ ಮತ್ತು ಬಿಹಾರ ಸೇರಿದಂತೆ ಹಲವು ರಾಜ್ಯಗಳಿಂದ ಮುಷ್ಕರಕ್ಕೆ ಬೆಂಬಲ ವ್ಯಕ್ತವಾಗಿದೆ ಎಂದು ತಿಳಿಸಿದ್ದಾರೆ.

**ಕೇರಳದಲ್ಲಿ ಜನಜೀವನ ಸ್ತಬ್ಧ:** ಕೇರಳದಲ್ಲಿ ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಜನಜೀವನ ಸ್ಥಗಿತಗೊಂಡಿತು. ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳು ರಸ್ತೆಗಿಳಿಯದ ಕಾರಣ ಸಾರಿಗೆ ವ್ಯವಸ್ಥೆ ವ್ಯತ್ಯಯಗೊಂಡಿತು. ಸರಕಾರಿ ಕಚೇರಿಗಳಲ್ಲಿ ಹಾಜರಾತಿ ವಿರಳವಾಗಿದ್ದು, ವಾಣಿಜ್ಯ ಮಳಿಗೆಗಳು ಮುಚ್ಚಿದ್ದವು. ಖಾಸಗಿ ವಾಹನಗಳನ್ನು ತಡೆದ ಘಟನೆಗಳೂ ವರದಿಯಾಗಿವೆ.

**ರಾಜ್ಯದಲ್ಲೂ ಪ್ರತಿಭಟನೆ:** ರಾಜ್ಯದಲ್ಲಿ ಮುಷ್ಕರಕ್ಕೆ ಬೆಂಬಲ ವ್ಯಕ್ತವಾಗಿದ್ದು, ಸುಮಾರು 2 ಲಕ್ಷಕ್ಕೂ ಹೆಚ್ಚು ಕೈಗಾರಿಕಾ ಕಾರ್ಮಿಕರು ಮುಷ್ಕರದಲ್ಲಿ ಭಾಗಿಯಾಗಿವೆ ಎಂದು ಕಾರ್ಮಿಕ ಸಂಘಟನೆಗಳು ತಿಳಿಸಿವೆ.

### 14 ಕಡೆ ಏಕಕಾಲದಲ್ಲಿ ದಾಳಿ । 23 ಕೋಟಿ ರು. ಗೂ ಹೆಚ್ಚು ಮೌಲ್ಯದ ಅಕ್ರಮ ಆಸ್ತಿ ಪತ್ತೆ

# ನಾಲ್ವರು ಭ್ರಷ್ಟರು ಲೋಕಾ ಬಲೆಗೆ

**ಬೆಂಗಳೂರು:** ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ನಾಲ್ವರು ಭ್ರಷ್ಟ ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ ನಡೆಸಿದೆ.

ಗುರುವಾರ ಬೆಳ್ಳಂಬೆಳಗ್ಗೆ ಲೋಕಾಯುಕ್ತ ಅಧಿಕಾರಿಗಳು ಮಿಂಚಿನ ವೇಗದಲ್ಲಿ ಬೆಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ದಾವಣಗೆರೆಯಲ್ಲಿ ಏಕಕಾಲಕ್ಕೆ ದಾಳಿ ನಡೆಸಿ, ನಾಲ್ವರು ಭ್ರಷ್ಟ ಅಧಿಕಾರಿಗಳನ್ನು ಬಲೆಗೆ ಕೆಡವಿ 23 ಕೋಟಿ ರು. ಹೆಚ್ಚು ಮೌಲ್ಯದ ಅಕ್ರಮ ಆಸ್ತಿಪಾಸ್ತಿ ಪತ್ತೆ ಹಚ್ಚಿದ್ದಾರೆ. ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಪುರುಷೋತ್ತಮ ದಾಸ್ ಹೆಗಡೆ, ವಸತಿ ಶಿಕ್ಷಣ ಸಂಸ್ಥೆಯ ಸೂಪರಿಡೆಂಟ್ ಎಂಜಿನಿಯರ್ ಎಚ್.ಎಂ.ಜನಾರ್ದನ್, ದಾವಣಗೆರೆಯ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅರ್ಜುನ ಹಾಗೂ ಧಾರವಾಡದ ಭೂದಾಖಲೆಗಳ ಸರ್ವೇಯರ್ ಸೋಮಲಿಂಗಪ್ಪ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಗಳಾಗಿದ್ದಾರೆ.

ಲೋಕೋಪಯೋಗಿ ಮುಖ್ಯ ಎಂಜಿನಿಯರ್ ಪುರುಷೋತ್ತಮ ದಾಸ್ ಕಚೇರಿ ಮನೆ ಸೇರಿ 14 ಕಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಇವರ ವಿರುದ್ಧ ಆದಾಯ ಮೀರಿ ಅಪಾರ ಪ್ರಮಾಣದ ಆಸ್ತಿಗಳಿಸಿರುವ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ಬರೋಬ್ಬರಿ 12.84 ಕೋಟಿ ಮೌಲ್ಯದ ಚರಾಸ್ತಿಯ ಮಾಹಿತಿ ಪತ್ತೆಯಾಗಿದೆ. ಇದರಲ್ಲಿ ನಗದು, ಚಿನ್ನಾಭರಣ, ಬ್ಯಾಂಕ್ ಬ್ಯಾಲೆನ್ಸ್, ಸೇರಿ ಚರ ಮತ್ತು ಸ್ಥಿರಾಸ್ತಿಗಳು ಸೇರಿವೆ.

ಬೆಸ್ಕಾಂ ಎಂಜಿನಿಯರ್ ಆರ್.ಎಚ್ ಅರ್ಜುನ್ ಅವರ ಮನೆ ಹಾಗೂ ಕಚೇರಿ ಮೇಲೂ ಲೋಕಾ ಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿದೆ. ದಾವಣಗೆರೆಯ ಬೆಸ್ಕಾಂನ ಸಿವಿಲ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಜುನ್ ಮೇಲೆ ಲೋಕಾಯುಕ್ತ ಎಸ್ಪಿ ಎಂ.ಎಸ್ ಕೌಲಾಪುರ ನೇತೃತ್ವದ ತಂಡ ದಾಳಿ ನಡೆಸಿದೆ. ಇವರಿಗೆ ಸೇರಿದ 5 ಸ್ಥಳಗಳಲ್ಲಿ 2.49 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ. ಶಿವಮೊಗ್ಗದ ವಿಜಯನಗರ ಹಾಗೂ ಗೋಪಾಲಗೌಡ ಬಡಾವಣೆಯಲ್ಲಿರುವ ಅವರ ನಿವಾಸಗಳ ಮೇಲೆ ಅಧಿಕಾರಿಗಳ ತಂಡ ದಾಳಿ ಮಾಡಿದೆ. ಸಾಗರ, ಆನಂದಪುರ ಸಮೀಪದ ತಳಲೆ ಗ್ರಾಮದಲ್ಲಿರುವ ಅರ್ಜುನ ಅವರಿಗೆ ಸೇರಿದ 2.5 ಎಕರೆ ಮತ್ತು 4.5 ಎಕರೆ ವಿಸ್ತೀರ್ಣದ ಬೃಹತ್ ಫಾರ್ಮ್ ಹೌಸ್‌ಗಳ ಮೇಲೂ ಅಧಿಕಾರಿ ಗಳು ದಾಳಿ ನಡೆಸಿದ್ದಾರೆ. ಧಾರವಾಡದಲ್ಲಿ ಸರ್ವೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಸೋಮಲಿಂಗಪ್ಪ ಸಿದ್ದನಗೌಡರ್ ಅವರ ನಿವಾಸಗಳ ಮೇಲೆ ದಾಳಿ ನಡೆದಿದೆ.

### ಯಾರಲ್ಲಿ ಎಷ್ಟು ಸಂಪತ್ತು ಪತ್ತೆ?

| | |
|---|---|
| ಪುರುಷೋತ್ತಮ ದಾಸ್ ಹೆಗಡೆ | 12.84 ಕೋಟಿ ರು. |
| ಎಚ್.ಎಂ. ಜನಾರ್ದನ್ | 5.77 ಕೋಟಿ ರು. |
| ಅರ್ಜುನ | 2.49 ಕೋಟಿ ರು. |
| ಸೋಮಲಿಂಗಪ್ಪ | 2.64 ಕೋಟಿ ರು. |

### ಕಂತೆ ಕಂತೆ ನೋಟು, ಅಧಿಕಾರಿಗಳೇ ದಂಗು

ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳಿಕೆ ಆರೋಪದ ಮೇಲೆ ಲೋಕಾಯುಕ್ತ ಪೊಲೀಸರು ರಾಜ್ಯದ ಹಲವೆಡೆ ಕಾರ್ಯಾಚರಣೆ ಕೈಗೊಂಡಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀಕ್ಷಕ ಎಂಜಿನಿಯರ್ ಎಚ್.ಎಂ. ಜನಾರ್ದನ ಸೇರಿದ ಸ್ಥಳಗಳನ್ನು ಪರಿಶೀಲನೆ ನಡೆಸಿದಾಗ ಆತನ ಸ್ನೇಹಿತನ ಮನೆಯಲ್ಲಿ ಬರೋಬ್ಬರಿ 1.70 ಕೋಟಿ ನಗದು ಪತ್ತೆಯಾಗಿದೆ. ಜನಾರ್ದನ ತಮ್ಮ ಅಧಿಕೃತ ಆದಾಯಕ್ಕಿಂತ ಸುಮಾರು ಶೇ. 216ರಷ್ಟು ಹೆಚ್ಚಿನ ಆಸ್ತಿ ಹೊಂದಿದ್ದಾರೆ. 3.20 ಕೋಟಿ ರು. ಮೌಲ್ಯದ ಸ್ಥಿರಾಸ್ತಿ ಪತ್ತೆಯಾಗಿದ್ದು, 2.40 ಕೋಟಿ ರು. ಮೌಲ್ಯದ 3 ಐಷಾರಾಮಿ ಮನೆಗಳು, 66.84 ಲಕ್ಷ ರು. ಮೌಲ್ಯದ 34 ಎಕರೆ ಕೃಷಿ ಭೂಮಿ, 12.77 ಲಕ್ಷ ರು. ಮೌಲ್ಯದ ನಿವೇಶನದ ದಾಖಲೆಗಳು ಲಭ್ಯವಾಗಿವೆ. 2.57 ಕೋಟಿ ರು. ಮೌಲ್ಯದ ಚರಾಸ್ತಿ ಪತ್ತೆಯಾಗಿದ್ದು, ಸ್ನೇಹಿತನ ಮನೆಯಲ್ಲಿ 1.70 ಕೋಟಿ ರು. ಪತ್ತೆಯಾಗಿದ್ದು, ಅದನ್ನು ಜಪ್ತಿ ಮಾಡಲಾಗಿದೆ. 7.08 ಲಕ್ಷ ರು. ಮೌಲ್ಯದ ಚಿನ್ನಾಭರಣ, 20 ಲಕ್ಷ ರು. ಮೌಲ್ಯದ ವಾಹನಗಳು ಸಿಕ್ಕಿವೆ. ಅಧಿಕಾರಿಯ ಬಳಿ ಒಟ್ಟು ಆದಾಯ ಮೀರಿದ ಆಸ್ತಿಯ ಮೌಲ್ಯ 4.42 ಕೋಟಿ ರು. ಇದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಸೊಂಪಾದ ಪುಟಗಳು

ಕುರ್ಚಿಯು ಹೋಗಿ ಮುಟ್ಟಬೇಕಾದ ಜಾಗವಾಗಿದ್ದು ಹೇಗೆ?

ಶಿಶಿರಕಾಲ
ಶಿಶಿರ್ ಹೆಗಡೆ 6

ನಾವು ಮರೆಯುತ್ತಿರುವ ಹಳೆಯ ತಿನಿಸುಗಳು!

ಶಶಾಂಕಣ
ಶಶಿಧರ ಹಾಲಾಡಿ 7

## ದಾರಿದೀಪೋಕ್ತಿ

ಯಾವ ಕೆಲಸ ಅಥವಾ ಪರಿಸ್ಥಿತಿಯ ಮೇಲೆ ನಿಮಗೆ ನಿಯಂತ್ರಣ ಇರುವುದಿಲ್ಲವೋ, ಅದರ ಮೇಲೆ ಒತ್ತಡ ಹೇರುತ್ತಾ ಸಮಯವನ್ನು ವ್ಯರ್ಥ ಮಾಡಬಾರದು. ಕಾರಣ ನೀವು ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗುವುದಿಲ್ಲ.

## ವಕ್ರತುಂಡೋಕ್ತಿ

ಸಾಲ ವಾಪಸ್ ಕೊಟ್ಟವನು ದೇವರಿದ್ದಂತೆ, ಯಾಕೆಂದರೆ ಅವನು ನಮಗೆ ಕಾಣಿಸಿಕೊಳ್ಳುವುದೇ ಅಪರೂಪ.

## ನಾಯಕತ್ವದ ಬಗ್ಗೆ ಹೈಕಮಾಂಡ್ ಜತೆ ಸುದೀರ್ಘ ಚರ್ಚೆ, ಸ್ಪಷ್ಟನೆಗೆ ಪಟ್ಟು

# ರಾಗಾ-ಡಿಕೆ ಭೇಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಬದಲಾವಣೆ ವಿಷಯ ಮುನ್ನಲೆಗೆ ಬಂದಾಗಿನಿಂದ ಹೈಕಮಾಂಡ್ ಭೇಟಿಗೆ ನಡೆಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ 'ಸುದೀರ್ಘ' ಪ್ರಯತ್ನಕ್ಕೆ ಕೊನೆಗೂ ಫಲ ಸಿಕ್ಕಿದ್ದು, ಈ ಬಾರಿಯ ದೆಹಲಿ ದಂಡಯಾತ್ರೆ ಯಲ್ಲಿ ಡಿ.ಕೆ. ಶಿವಕುಮಾರ್ ಅವರು ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ನಾಯಕತ್ವದ ಬಗ್ಗೆ ಚರ್ಚಿಸಿದ್ದಾರೆ.

ಎರಡು ದಿನಗಳಿಂದ ದೆಹಲಿ ಪ್ರವಾಸದಲ್ಲಿರುವ ಡಿ.ಕೆ. ಶಿವಕುಮಾರ್ ಅವರು, ಗುರುವಾರ ಸೋನಿಯಾ ಗಾಂಧಿ ನಿವಾಸದಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿ ನಾಯಕತ್ವಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಈ ವೇಳೆ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ 'ಬೇಡಿಕೆ' ಇರಿಸಿದ್ದು, 'ನೋಡೋಣ' ಎನ್ನುವ ಮಾತು ರಾಹುಲ್ ಗಾಂಧಿ ಕಡೆಯಿಂದ ಬಂದಿದೆ ಎನ್ನಲಾಗಿದೆ.

ಭೇಟಿಯ ವೇಳೆ ನಾಯಕತ್ವ ಬದಲಾವಣೆ ಸೇರಿದಂತೆ, ರಾಜ್ಯ ಕಾಂಗ್ರೆಸ್‌ನಲ್ಲಿ ಇತ್ತೀಚಿನ ದಿನದಲ್ಲಿ ನಡೆಯುತ್ತಿರುವ ಬೆಳವಣಿಗೆ, ಪೂರ್ಣಾವಧಿ ನಾಯಕತ್ವಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಆಪ್ತರ ನಿರಂತರ ಹೇಳಿಕೆ, ಶಾಸಕರ ವಿದೇಶ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಡಿ.ಕೆ. ಶಿವಕುಮಾರ್ ಮಾತನ್ನು ಆಲಿಸಿರುವ, ರಾಹುಲ್ ಗಾಂಧಿ ಯಾವುದೇ ಸ್ಪಷ್ಟ ಪ್ರತಿಕ್ರಿಯೆ ನೀಡಿಲ್ಲ ಎಂದು ಹೇಳಲಾಗಿದೆ.

ಅಸ್ಸಾಂ ವಿಧಾನಸಭಾ ಚುನಾಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರ ಜತೆ ಸೋನಿಯಾಗಾಂಧಿ ಅವರ ನಿವಾಸದಲ್ಲಿ ಮೊದಲಿಗೆ ಪ್ರಿಯಾಂಕಾ ಗಾಂಧಿ ನಂತರ ಸೋನಿಯಾಗಾಂಧಿ ಅವರನ್ನು ಭೇಟಿ ಮಾಡಿ ಚರ್ಚಿಸಿದ ಡಿ.ಕೆ. ಶಿವಕುಮಾರ್, ಅಸ್ಸಾಂ ಚುನಾವಣೆಯ ಚರ್ಚೆ ಬಳಿಕ ರಾಹುಲ್ ಗಾಂಧಿ ಅವರ ಜತೆ ರಾಜ್ಯ ರಾಜಕೀಯದ ಬಗ್ಗೆ ಚರ್ಚೆ ನಡೆಸಿದರು. ರಾಹುಲ್ ಗಾಂಧಿ ಅವರೊಂದಿಗೆ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಚರ್ಚಿಸುವಾಗ ಸೋನಿಯಾ, ಪ್ರಿಯಾಂಕಾ ಇಬ್ಬರೂ ಇದ್ದರು ಎಂದು ತಿಳಿದುಬಂದಿದೆ.

**ಪಕ್ಷ ನಿಷ್ಠೆಯ ಮಾತಾಡಿದ ಡಿಕೆ:** ಈ ಸುದೀರ್ಘ ಸಭೆಯಲ್ಲಿ ನಡೆಸಿ ತಮ್ಮ ಪಕ್ಷ ನಿಷ್ಠೆ, ಪಕ್ಷ ಸೇವೆ ಎಲ್ಲವನ್ನು ಅವರ ಗಮನಕ್ಕೆ ತಂದು ತಮ್ಮ ಶ್ರಮಕ್ಕೆ ಪ್ರತಿಫಲ ನೀಡಿ ಎಂದು ಮನವಿ ಮಾಡಿದರು ಎನ್ನಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಆಗಿರುವ ಅಧಿಕಾರ ಹಂಚಿಕೆಯ ಒಪ್ಪಂದದಂತೆ ನಾವೆಲ್ಲ ನಡೆದುಕೊಳ್ಳಬೇಕಿದೆ. ಅಧಿಕಾರ ಹಂಚಿಕೆಯ ಜಟಾಪಟಿಗೆ ಆದಷ್ಟು ಬೇಗ ತೆರೆ ಎಳೆಯಿರಿ. ಒಂದು ಸ್ಪಷ್ಟ ತೀರ್ಮಾನವನ್ನು ಶೀಘ್ರ ಪ್ರಕಟಿಸಿ ಎಂಬ ಬೇಡಿಕೆ ಇಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಅಧಿಕಾರ ಹಂಚಿಕೆ ವಿಚಾರವಾಗಿ ಹೈಕಮಾಂಡ್‌ನಿಂದ ಸ್ಪಷ್ಟನೆ ಸಿಕ್ಕಿದೆಯೋ? ಇಲ್ಲವೋ ಎನ್ನುವ ವಿಚಾರವನ್ನು ಬಹಿರಂಗವಾಗಿ ಚರ್ಚಿಸುವುದಿಲ್ಲ. ಪಕ್ಷ ತನ್ನದೇ ಆದ ಗುರಿ ಹೊಂದಿದೆ. ಪಕ್ಷದ ಯಶಸ್ಸು, ಹಿತಾಸಕ್ತಿಯ ಹಿತದೃಷ್ಟಿಯಿಂದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೂಕ್ತ ಸಮಯದಲ್ಲಿ ತೀರ್ಮಾನ ಮಾಡುತ್ತಾರೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

### ಶಾಸಕರ ವಿದೇಶ ಪ್ರವಾಸಕ್ಕೆ ಬ್ರೇಕ್

ಈ ನಡುವೆ ಶಾಸಕರ ವಿದೇಶಿ ಪ್ರವಾಸಕ್ಕೆ ಸಂಬಂಧಿಸಿದಂತೆ ಕೆ.ಸಿ. ವೇಣುಗೋಪಾಲ್ ಸೇರಿದಂತೆ ಪಕ್ಷದ ಹೈಕಮಾಂಡ್ ಬಳಿ ಡಿ.ಕೆ.ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಸಮಯದಲ್ಲಿ ಶಾಸಕರ ವಿದೇಶಿ ಪ್ರವಾಸ ಯಾವ ಸಂದೇಶ ರವಾನಿಸಲಿದೆ ಎಂದು ಪ್ರಶ್ನಿಸಿದ್ದರು. ಇದರ ಬೆನ್ನಲ್ಲೇ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಯಾವ ಶಾಸಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸಬೇಡಿ ಎನ್ನುವ ಸಂದೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿದ್ದ ಶಾಸಕರ ವಿದೇಶ ಯಾತ್ರೆಯನ್ನು ಆಯೋಜಿಸಿದ್ದು ಯಾರು ಎನ್ನುವ ಗೊಂದಲಕ್ಕೆ ಈಗಲೂ ಸ್ಪಷ್ಟನೆ ಸಿಕ್ಕಿಲ್ಲ.

# ಶವಪ್ಯಾಕ್‌ಗೆ ಲಂಚ: ಕಿಮ್ಸ್‌ನ ಐವರು ಸಿಬ್ಬಂದಿ ಅಮಾನತು

**ಹುಬ್ಬಳ್ಳಿ:** ಇಲ್ಲಿನ ಕಿಮ್ಸ್ ಆಸ್ಪತ್ರೆಯಲ್ಲಿ ಶವ ಪ್ಯಾಕ್ ಮಾಡಿಕೊಡಲು ಲಂಚ ಪಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಹೊರ ಗುತ್ತಿಗೆ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದ ಮಹಿಳೆಯೊಬ್ಬಳ ಶವವನ್ನು ಪ್ಯಾಕ್ ಮಾಡಲು ಐವರು ಸಿಬ್ಬಂದಿ ಹಣ ವಸೂಲಿ ಮಾಡಿದ್ದರು. ಸಿಬ್ಬಂದಿಯ ಅಮಾನವೀಯ ಕೃತ್ಯಕ್ಕೆ ಮೃತಳ ಕುಟುಂಬಸ್ಥರು ಆಕ್ರೋಶ ಹೊರಹಾಕಿದ್ದರು. ಲಂಚಾವತಾರ ಬಯಲಾದ ಬಳಿಕ ಹಣ ವಸೂಲಿ ಮಾಡಿದ ಐವರು ಡಿ ಗ್ರೂಪ್ ನೌಕರರನ್ನು ಅಮಾನತು ಮಾಡಲಾಗಿದೆ.

**ಏನಿದು ಘಟನೆ?** ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಆಶಾಳ ಅಡವಿಬಾವಿ ನಿವಾಸಿಯಾಗಿರೋ ಗದ್ದೆಮ್ಮಾ (52) ಎನ್ನುವ ಮಹಿಳೆ ಪಿತ್ತಕೋಶದ ಕಲ್ಲುಗಳಿಂದ ಅಸ್ವಸ್ಥರಾಗಿದ್ದರು. ಹೀಗಾಗಿ ಅವರನ್ನು ಕಳೆದ ಜ.31ರಂದು ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಲಾಗಿತ್ತು. ಕಳೆದ ಶನಿವಾರ ಅವರಿಗೆ ಶಸ್ತ್ರಚಿಕಿತ್ಸೆ ಕೂಡ ನಡೆದಿತ್ತು. ಆದರೆ ಗದ್ದೆಮ್ಮಾ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರು. ಅವರ ಶವವನ್ನು ಪ್ಯಾಕ್ ಮಾಡಿ ವಾಹನಕ್ಕೆ ಹಾಕಲು ಅಲ್ಲಿನ ಡಿ ಗ್ರೂಪ್ ಸಿಬ್ಬಂದಿ ಐನೂರು ರು.ಗೆ ಬೇಡಿಕೆ ಇಟ್ಟಿದ್ದರು. ಕೊನೆಗೂ ಬೆನ್ನು ಬಿದ್ದು 200 ರು.ಪಡೆದಿದ್ದರು. ಶವವನ್ನು ವಾಹನಕ್ಕೆ ಹಾಕಿದ ಮೇಲೆ ಮತ್ತೆ 200 ರುಪಾಯಿಗಾಗಿ ಪೀಡಿಸಿದ್ದರು. ಇದರಿಂದ ನೊಂದ ಗದ್ದೆಮ್ಮಾ ಸಂಬಂಧಿ ವಿಡಿಯೊ ಮಾಡಿ ಹರಿಬಿಟ್ಟಿದ್ದರು.

---

## ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಕಾಶಿಪುರ ವೃತ್ತ, ಶಿವಮೊಗ್ಗ-577204

ಐ.ಎಫ್.ಟಿ. ಸಂ:44/25-26 ಎರಡನೇ ಕರೆ/ಮೂರನೇ ಕರೆ ದಿ:10.02.2026

**ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)- ಕೆಡಬ್ಲ್ಯೂ - 1/2/3**

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ-1/2/3 ರ ಅನ್ವಯ ತರೀಕೆರೆ/ಶಿಕಾರಿಪುರ/ಶಿವಮೊಗ್ಗ ಉಪವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ. 3.98 ಲಕ್ಷ ದಿಂದ ರೂ.80.64 ಲಕ್ಷಗಳು.ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್ ಮೆಂಟ್ ನ ವೆಬ್‌ಸೈಟ್ ವಿಳಾಸ: http:/kppp. karnataka.gov.inನಲ್ಲಿ ದಿನಾಂಕ:10.02.2026 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ:17.02.2026 17:00 ಘಂಟೆ.ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

**ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ**

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/25-26/82/02/1823

---

## ಪುರಸಭಾ ಕಾರ್ಯಾಲಯ, ಬೇಲೂರು

E-mail: itstaff_ulb_belur@yahoo.co.in, townmunicipal.belur@gmail.com ದೂರವಾಣಿ: 08177-222221

ಸಂಖ್ಯೆ: ಪು.ಬೇ/ಜೆ.ಇ/ಟೆಂಡರ್-04/CALL-2/2025-26

ದಿನಾಂಕ:10.02.2026

**ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)**

ಮಾನ್ಯ ಮುಖ್ಯ ಮಂತ್ರಿಗಳ ವಿವೇಚನಾ ನಿಧಿಯಡಿ ಎಸ್.ಎಫ್.ಸಿ. ವಿಶೇಷ ಅನುದಾನ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮರು ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ 1)ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 25.02.2026 ಸಂಜೆ 5.30 ಗಂಟೆಗೆ 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 27.02.2026 ಬೆಳಿಗ್ಗೆ 11.30 ಗಂಟೆಗೆ 3)ಆರ್ಥಿಕ ಬಿಡ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 05.03.2026 ಬೆಳಿಗ್ಗೆ 11.30 ಗಂಟೆಗೆ 4)ಕೆಲಸ ಮುಗಿಸಲು ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು) ಕ್ರ.ಸಂ ಕಾಮಗಾರಿ ವಿವರ 1)DMA/2025-26/RD/WORK_INDENT54255/CALL-2 ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)83,41,350/- ಇ.ಎಂ.ಡಿ. ಮೊತ್ತ 2,10,000/- ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://kppp.karnataka.gov.in ನಲ್ಲಿ ಪಡೆಯುಬಹುದಾಗಿರುತ್ತದೆ.

**ಸಹಿ/-ಅಧ್ಯಕ್ಷರು, ಪುರಸಭೆ, ಬೇಲೂರು**

**ಸಹಿ/-(ಬಸವರಾಜು ಟಾಕಪ್ಪ ಶಿಗ್ಗಾಂವಿ) ಕೆ.ಎಂ.ಎ.ಎಸ್ ಮು-ಶ್ರೇಣಿ-1 ಮುಖ್ಯಾಧಿಕಾರಿ, ಪುರಸಭೆ, ಬೇಲೂರು**

ವಾಸಾಸಂಇ/ಹಿಸನಿ/ಹಾಸನ/1058/ಕೆಎಸ್‌ಎಂಸಿಎ/2025-26

---

## ನೆಫ್ರೋ-ಯುರಾಲಜಿ ಸಂಸ್ಥೆ

**(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ. ನೋಂ. ಸಂ.1052/03-04)**

(ಉನ್ನತ ವೈದ್ಯಕೀಯ ವಿಜ್ಞಾನದ ಒಂದು ಸ್ನಾತಕೋತ್ತರ ಸಂಸ್ಥೆ, ರಾಜೀವ್‌ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇದರ ಅಂಗಸಂಸ್ಥೆಯಾಗಿದ್ದು ಭಾರತೀಯ ವೈದ್ಯಕೀಯ ಪರಿಷತ್ತಿನೊಂದಿಗೆ ಗುರುತಿಸಿಕೊಂಡಿದೆ) ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-560 002.

ಇ-ಮೇಲ್: nephrourology.institute@gmail.com

ಸಂಖ್ಯೆ: ನೆಯುಸಂ/ಟೆಂಡರ್/ಪಿಡಿಎಫ್/10/2025-26 ದಿನಾಂಕ: 11.02.2026

**ಟೆಂಡರ್ ಪ್ರಕಟಣೆ**

ನೆಫ್ರೋ-ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-560 002. ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1. Procurement of Peritoneal Dialysis Fluids (Call-II)
2. Providing Outsourced Laundary Services at INU.
3. Printing of Hospital Register & Formats.

**Last Date For Online Submission of Tender is 11.03.2026 at 5.30 P.M**

1. Disposal of Bio-Medical Waste.

**Last Date For Online Submission of Tender is 25.02.2026 at 5.30 P.M**

ಟೆಂಡರ್‌ಗೆ ಸಂಬಂಧಪಟ್ಟಂತೆ, ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ **https://kppp.karnataka.gov.in** ದಲ್ಲಿ ಪಡೆದುಕೊಳ್ಳಬಹುದು.

**ಸೂಚನೆ:** ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ (further information and announcements) ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ **https://nephrourology.karnataka.gov.in** ದಲ್ಲಿ ವೀಕ್ಷಿಸಬಹುದು.

**ಸಹಿ/- ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು.**

---

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)**

ನಿಗಮ ಕಚೇರಿ, ಪೂನಾ ಬೆಂಗಳೂರು ರಸ್ತೆ, ನವನಗರ, ಹುಬ್ಬಳ್ಳಿ, ದೂರವಾಣಿ/ಫ್ಯಾಕ್ಸ್ ನಂ.: (0836) 2322771 / 2324307, ಇ-ಮೇಲ್: seepmc.hescom@gmail.com, ವೆಬ್‌ಸೈಟ್: https://hescom.karnataka.gov.in

**CIN: U31401KA2002SGC030437**

ಸಂಖ್ಯೆ: HESCOM/SEE(IT&MT)/IT1/CCTV/760/2025-26/23609-10 ದಿನಾಂಕ: 12.02.2026

**ಟೆಂಡರ್ ಪ್ರಕಟಣೆ**

(ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ವಿ), ಐಟಿ&ಎಮ್‌ಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಈ ಕೆಳಕಂಡ ಅಲ್ಪಾವಧಿ ಟೆಂಡರ್‌ಅನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

| ಅ.ಕ್ರ. | ಬಿಡ್ ಇಂಡೆಂಟ್ ಸಂಖ್ಯೆ | ಟೆಂಡರ್ ವಿವರಗಳು |
|---|---|---|
| 1 | HESCOM/2025-26/SE0724 | ಹೆಸ್ಕಾಂನ ಕಾರ್ಪೊರೇಟ್ ಕಚೇರಿ ಮತ್ತು ಎಲ್ಲಾ ವಿಭಾಗೀಯ ಉಗ್ರಾಣಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ನಿರ್ವಹಣೆ |
| 2 | HESCOM/2025-26/IND0123 | ಹೆಸ್ಕಾಂ ಕಚೇರಿಗೆ ಅಗತ್ಯವಿರುವ ಕಂಪ್ಯೂಟರ್ ಮತ್ತು ಸಂಬಂಧಿತ ಐಟಿ ಸಾಮಗ್ರಿಗಳ ಪೂರೈಕೆ ಮತ್ತು ಸ್ಥಾಪನೆ. |

ಸದರಿ ಟೆಂಡರ್‌ಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್, **https://kppp.karnataka.gov.in** ರಲ್ಲಿ **ದಿನಾಂಕ: 13.02.2026 ರಂದು** ಅಥವಾ ನಂತರ ಪಡೆಯಬಹುದು.

**ಸಹಿ/- ಅಧೀಕ್ಷಕ ಇಂಜಿನೀಯರರು (ವಿ), (ಐಟಿ & ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ**

ವಾಸಾಸಂಇ/ಧಾರವಾಡ/ದಿಶಾ/1229/2025-26

---

## ಕರ್ನಾಟಕ ನೀರಾವರಿ ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಉದ್ಯಮ)**

**ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಘ.ಬ.ದಂ.ಕಾ.ನಿ. ವಿಭಾಗ-4, ಚಿಕ್ಕೋಡಿ**

ಫೋನ ನಂ:08338 - 272485 Email:ee_knnlgrbc4ckd@rediffmail.com

**ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)**

ಟೆಂಡರ ಪ್ರಕಟಣೆ ಸಂಖ್ಯೆ:KNNL/GRBCC -4/Tender/2025-26/20 Date:- 11-02-2026

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಾಲ್ (https://kppp.karnataka.gov.in) 4701 ಅಡಿಯಲ್ಲಿನ 30 ಕಾಮಗಾರಿಗಳಿಗೆ ಮೇಲ್ಕಾಣಿಸಿದ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಕರೆಯಲಾಗಿರುತ್ತದೆ (Two cover system). **ವಿವರ :**

ಟೆಂಡರ ಪ್ರಕಟಣೆ ಸಂ:20 dtd 11-02-2026, ಕೆ.ಪಿ.ಪಿ. ಪೋರ್ಟಾಲ್ ಇಂಡೆಂಟ ಸಂಖ್ಯೆ:Two Cover System:General: Indent No. 3719, 3897, 3898, 3984, 4039, 4040, 3244/CALL-2, 3250/CALL-2, 3251/CALL-2, 3255/CALL-2, 3162/CALL-4, 3165/CALL-4, 3166/CALL-4, 3163/CALL-4, 3164/CALL-4, 3110/CALL-5, 1983/CALL-6, 2696/CALL-7, 2745/CALL-7, 3155/CALL-4, 3156/CALL-4, 3158/CALL-4, 3161/CALL-4. SC reserved: Indent No. 3985, 3249/CALL-2 & 3261/CALL-2, Category –I : Indent No. 3259/CALL-2 Category–II(A):Indent No. 3899, 3257/CALL-2 & 3260/CALL-2,ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.:21.02/- to 84.72 lakhs, ಇಎಂಡಿ ಮೊತ್ತ ರೂ.:42500/- to 1,69,600/-, ಟೆಂಡರ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ & ಸಮಯ:21-02-2026, Up to 17.00 hrs., ಭರ್ತಿ ಮಾಡಿದ ಟೆಂಡರಗಳನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ:24-02-2026 Up to 16.00 hrs., ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:25-02-2026 Up to 16.30 hrs., ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 26-02-2026 Up to 16.30 hrs.

ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ _https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

**ಸಹಿ/- ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಘಬದಂಕಾನಿ ವಿಭಾಗ-4, ಚಿಕ್ಕೋಡಿ**

DIPR/BGM/RO-NO-1831/KSMCA/2025-26

---

## ವೇಮಗಲ್ -ನರಸಾಪುರ ಯೋಜನಾ ಪ್ರಾಧಿಕಾರ

ಎ-1 ಬ್ಲಾಕ್, ಪುರಹಳ್ಳಿ ಶ್ರೀನಿವಾಸ ಬಿಲ್ಡಿಂಗ್, ನರಸಾಪುರ ರಸ್ತೆ, ವೇಮಗಲ್-563157, ಕೋಲಾರ ತಾಲ್ಲೂಕು

ಇ-ಮೇಲ್: vemgalnarasapura@gmail.com,

ಸಂ:ಸಂಖ್ಯೆ:ವೇ-ನ.ಯೋ.ಪ್ರಾ/ಮ.ಯೋ.ತ/2025-26

ದಿನಾಂಕ:05.02.2026

**"ಸಾರ್ವಜನಿಕ ಪ್ರಕಟಣೆ" ನಮೂನೆ-VI (ನಿಯಮ 32-(A))**

**ವಿಷಯ:** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 10(1) ರ ಅವಕಾಶದಂತೆ ವೇಮಗಲ್-ನರಸಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಕೆಯ ಉದ್ದೇಶ ವ್ಯಕ್ತಪಡಿಸುವ ಬಗ್ಗೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 221 ಬೆಂರೂಪ್ರಾ 2023 (ಇ) ದಿನಾಂಕ: 29.05.2025. ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಪ್ರಕರಣ 4-ಎ ರಡಿಯಲ್ಲಿ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ ಮತ್ತು ನರಸಾಪುರ ಸುತ್ತಮುತ್ತಲಿನ 112 ಗ್ರಾಮಗಳನ್ನು ಒಳಗೊಂಡಂತೆ "ವೇಮಗಲ್-ನರಸಾಪುರ ಸ್ಥಳೀಯ ಯೋಜನಾ ಪ್ರದೇಶ"ವೆಂದು ಘೋಷಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಸಾರ್ವಜನಿಕರ ಗಮನಕ್ಕೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 10(1) ರನ್ವಯ ವೇಮಗಲ್-ನರಸಾಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಸಲು ಉದ್ದೇಶಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಗರ ಪ್ರಾಧಿಕಾರಗಳ ಯೋಜನಾ ನಿಯಮಗಳು 1965, ರ ನಿಯಮ 32(ಎ) ರನ್ವಯ ಸಾರ್ವಜನಿಕರಿಂದ ಸಲಹೆಗಳನ್ನು ಸದಸ್ಯ ಕಾರ್ಯದರ್ಶಿ, ವೇಮಗಲ್ ನರಸಾಪುರ ಯೋಜನಾ ಪ್ರಾಧಿಕಾರ, ಎ-1 ಬ್ಲಾಕ್, ಪುರಹಳ್ಳಿ ಶ್ರೀನಿವಾಸ್ ಬಿಲ್ಡಿಂಗ್, ನರಸಾಪುರ ರಸ್ತೆ, ವೇಮಗಲ್ ಇವರ ಕಛೇರಿಗೆ ಖುದ್ದಾಗಿಯಾಗಲೀ ಅಥವಾ ನೊಂದಾಯಿತ ಅಂಚೆಯ ಮೂಲಕವಾಗಲೀ ಸಲ್ಲಿಸತಕ್ಕದ್ದು, ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ಸಾರ್ವಜನಿಕರು ತಮ್ಮ ಸಲಹೆಗಳನ್ನು ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮೂಲಕ ಈ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ.

**ಸಹಿ/- ಸದಸ್ಯ ಕಾರ್ಯದರ್ಶಿ, ವೇಮಗಲ್ ನರಸಾಪುರ ಯೋಜನಾ ಪ್ರಾಧಿಕಾರ, ವೇಮಗಲ್**

**ಸಹಿ/- ಅಧ್ಯಕ್ಷರು, ವೇಮಗಲ್ ನರಸಾಪುರ ಯೋಜನಾ ಪ್ರಾಧಿಕಾರ, ವೇಮಗಲ್**

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:492/ಕೆಎಸ್‌ಎಂಸಿಎ/2025-26

---

## ಕರ್ನಾಟಕ ಸರಕಾರ
## ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

**ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(48ಇ/39ಇ/):2025-26:ಜೆಇ-1 ದಿನಾಂಕ: 12.02.2026**

**ಟೆಂಡರ್ ಪ್ರಕಟಣೆ / ಅಲ್ಪಾವಧಿ ಟೆಂಡರ್ ಪ್ರಕಟಣೆ**

**(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) / ಸಮಯಾವಧಿ ವಿಸ್ತರಣೆ/2ನೇ ಕರೆ**

**ಲೆಕ್ಕಶೀರ್ಷಿಕೆ:3054-04-105-1-01-200 ಜಿಲ್ಲಾ ಮತ್ತು ಇತರೆ ರಸ್ತೆ ಸೇತುವೆಗಳ ನಿರ್ವಹಣೆ ರಡಿ** ಇಂಡೆಂಟ್ ನಂ.33141 ಮತ್ತು **ಲೆಕ್ಕಶೀರ್ಷಿಕೆ 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ -ಬಂಡವಾಳ ವೆಚ್ಚದಡಿ** ಇಂಡೆಂಟ್ ನಂ: 32548, 32998, 32579, 33183 ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಹಾಗೂ ಇಂಡೆಂಟ್ ನಂ: 32546 ಮತ್ತು 32577 ಈ ಕಾಮಗಾರಿಗಳಿಗೆ 2ನೇ ಕರೆಯಾಗಿ ಟೆಂಡರ್ ಆಹ್ವಾನಿಸಲಾಗಿದೆ. ಹಾಗೂ ಇಂಡೆಂಟ್ ನಂ: 32552, 32551, 31090, 32549, 32550, 31229, 31616, 31758, 31851, 31460, 32510, 32519, 32533 ಈ ಕಾಮಗಾರಿಗಳಿಗೆ **ಸಮಯಾವಧಿ ವಿಸ್ತರಣೆ ಮಾಡಲಾಗಿದ್ದು,** ಈ ಎಲ್ಲಾ ಕಾಮಗಾರಿಗಳಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 21.02.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

**ಲೆಕ್ಕಶೀರ್ಷಿಕೆ:- 4202-01-202-1-05-386 ನಿರ್ಮಾಣ ಯಡಿ** ಇಂಡೆಂಟ್ ನಂ:32046, ಕಾಮಗಾರಿಗೆ ಆಹ್ವಾನಿಸಲಾಗಿದೆ ಮತ್ತು **ಲೆಕ್ಕಶೀರ್ಷಿಕೆ: 3054-04-337-1-10-200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ರಡಿ** ಇಂಡೆಂಟ್ ನಂ: 19899 ಕಾಮಗಾರಿಗೆ 2ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 27.02.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.10.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.100.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-2, KW-3 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ರೂ.5.00ಲಕ್ಷ ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಹಾಗೂ ಕಾಮಗಾರಿಗಳ ಮೀಸಲಾತಿ ವಿವರ, ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

DIPR/DK/KSMCA/1586/25-26 dt.12.02.2026 **ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್**

---

## ಕರ್ನಾಟಕ ಸರ್ಕಾರ ಆಯುಷ್ ಇಲಾಖೆ
## ಜಿಲ್ಲಾ ಪಂಚಾಯತ್, ಹಾಸನ
## ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಆಯುಷ್ ಇಲಾಖೆ, ಹೊಸಲೈನ್ ರಸ್ತೆ, ಹಾಸನ-573201

E-mail: dao.hassan09@gmail.com ದೂರವಾಣಿ ಸಂ:08172-272272

ಸಂ: ಜಿಆಕಹಾ/23/ಔ.ಖ/2025-26 ದಿನಾಂಕ: 09.02.2026

**ಮರು ಇ-ಟೆಂಡರ್ ಪ್ರಕಟಣೆ**

ಹಾಸನ ಜಿಲ್ಲಾ ಆಯುಷ್ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ 2025-26ನೇ ಸಾಲಿಗೆ ಆಯುರ್ವೇದ ಔಷಧಿಗಳನ್ನು ಇ-ಟೆಂಡರ್ ಮುಖಾಂತರ ಖರೀದಿಸಲು ಅರ್ಹ ತಯಾರಕರು/ವಿತರಕರು/ಏಜೆನ್ಸಿ ಅಥವಾ ಖಾಸಗಿಯವರಿಂದ ಅಧಿಸೂಚನೆ ಸಂಖ್ಯೆ: AYD/2025-26/IND0151/CALL-2 ರಲ್ಲಿ ದಿನಾಂಕ:09-02-2026 ರಿಂದ ದಿ: 21.02.2026 ರವರೆಗೆ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.inನಲ್ಲಿ ಅಥವಾ ಜಿಲ್ಲಾ ಆಯುಷ್ ಕಛೇರಿ, ಹಾಸನ ಇಲ್ಲಿ ಸಂಪರ್ಕಿಸಬಹುದು.

**ಸಹಿ/- ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಹಾಸನ ಜಿಲ್ಲೆ.**

ವಾಸಾಸಂಇ/ಹಿಸನಿ/ಹಾಸನ/1060/ಕೆಎಸ್‌ಎಂಸಿಎ/2025-26

---

## ಉಪ ನಿರ್ದೇಶಕರರವರ ಕಛೇರಿ
## ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

ಮೃಗಾಲಯ ರಸ್ತೆ, ಇಂದಿರಾ ನಗರ, ಇಟ್ಟಿಗೆ ಗೂಡು, ಮೈಸೂರು

ಇ-ಮೇಲ್: zoomysore@gmail.com | ವೆಬ್‌ಸೈಟ್: www.mysorezoo.org

**ಸಂಖ್ಯೆ:** ಎಂವೈಜೆಡ್/ಟೆಂಡರ್/2025-26 **ದಿನಾಂಕ:** 10.02.2026

**ಟೆಂಡರ್ ಪ್ರಕಟಣೆ** (ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ )

ಈ ಕಚೇರಿ ಟೆಂಡರ್ ಪ್ರಕಟಣೆಯ ಕಾಮಗಾರಿಗಳನ್ನು **1) ಕೆ.ಡಬ್ಲ್ಯೂ-3ರ Indent No.143/25-26 Dt. 10.02.2026** ಅನ್ವಯ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು. ಟೆಂಡರ್ ಸಲ್ಲಿಸುವ ದಿನಾಂಕವನ್ನು ಹಾಗೂ ಇತರೆ ವಿವರಗಳನ್ನು ಇ-ಪೋರ್ಟಲ್ **(https://kppp.karnataka.gov.in)** ನಲ್ಲಿ ಪಡೆಯಬಹುದು.

**ಸಹಿ/- ಉಪನಿರ್ದೇಶಕರು** ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು.

DIPR/MYS/1653/SA/2025-26

---

## ಕರ್ನಾಟಕ ನೀರಾವರಿ ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಉದ್ಯಮ)**

**ಕಾರ್ಯಪಾಲಕ ಅಭಿಯಂತರವರ ಕಛೇರಿ, ಕನೀನಿನಿ, ತುಂ.ಭ.ಎ.ಕಾ. ವಿಭಾಗ ನಂ.3, ಸಿಂಧನೂರು-584128**

ಸಂ: ಕನೀನಿನಿ/ಕಾನಿಅ-3/ತಾಶಾ-2/CBLIS/O&M/ಟೆಂಡರ್/2025-26/ 2209 ದಿನಾಂಕ: 10.02.2026.

**ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ) (ಇ-ಪ್ರೊಕ್ಯೂರ್ಮೆಂಟ್ ಮುಖಾಂತರ ಮಾತ್ರ)**

ಈ ವಿಭಾಗದ ವ್ಯಾಪ್ತಿಯಲ್ಲಿನ ಲೆಕ್ಕ ಶಿರ್ಷಿಕೆ 2701 ರ ಅಡಿಯಲ್ಲಿ ಕ್ರಮವಾಗಿ Operation and maintenance of Lift Irrigation Scheme ಕಾಮಗಾರಿಗೆ ಈ ಕಛೇರಿಯಿಂದ ಇ-ಪ್ರೋಕ್ಯೂರಮೆಂಟ್ ವೇದಿಕೆ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತೇದಾರರಿಂದ ಶೇಕಡಾವಾರು ಟೆಂಡರಗಳನ್ನು ಆಮಂತ್ರಿಸಲಾಗಿದೆ. ಟೆಂಡರಗಿಟ್ಟ ಮೊತ್ತ ರೂ. 78.32 ಲಕ್ಷಗಳು ಇರುತ್ತದೆ. ಭರ್ತಿ ಮಾಡಿದ ಟೆಂಡರನ್ನು ದಿನಾಂಕ 25.02.2026 ರ ಸಂಜೆ 4-00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ. ಕಾಮಗಾರಿಯ ಹೆಸರು, ಇ.ಎಂ.ಡಿ. ಮೊತ್ತ, ಗುತ್ತೇದಾರರ ದರ್ಜೆ ಹಾಗೂ ಇತರೆ ಎಲ್ಲಾ ವಿವರಗಳನ್ನು ಈ ಕಛೇರಿಯಿಂದ ಕಛೇರಿಯ ಸಮಯದಲ್ಲಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ https://kppp.karnataka.gov.in/#/portal/ portal-home ಪಡೆಯಬಹುದಾಗಿದೆ.

**ಸಹಿ/- ಕಾರ್ಯಪಾಲಕ ಅಭಿಯಂತರರು, ಕನೀನಿನಿ, ತುಂ.ಎ.ಕಾ. ವಿಭಾಗ ನಂ.3, ಸಿಂಧನೂರು.**

DIP/RCR/703/KSMCA/706/2025-26

---

## ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

**ಬೆಳಗುಂಬ ರಸ್ತೆ, ತುಮಕೂರು - 572103**

**ಫ್ಯಾಕ್ಸ್ : 0816-2255761 ದೂರವಾಣಿ : 2272280**

**ಸಂಖ್ಯೆ ಟಿಯುಡಿಎ/ತಾಂತ್ರಿಕೆಇಇ/ಮರು ಟೆಂಡರ್-01/2025-26 ದಿನಾಂಕ: 11-02-2026**

**ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999-2000 ರ ಪ್ರಕಾರ ಹಾಗೂ KW-2, ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ ರೀತ್ಯಾ ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆ ಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (ವೆಬ್ ವಿಳಾಸ : **https//kppp.karnataka.gov.in**) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ನಿಗಧಿಪಡಿಸಿದ ದಿನಾಂಕ ಹಾಗೂ ಸಮಯದೊಳಗೆ ಸಲ್ಲಿಸುವುದು.

| | |
|---|---|
| ಖಾಲಿ ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ | ದಿನಾಂಕ: 11-02-2026 ರಿಂದ ದಿ. 26-02-2026 ವೇಳೆ 17-00 ಗಂಟೆಯವರೆಗೆ |
| ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ | ದಿ. 26-02-2026 ವೇಳೆ 17-30 ಗಂಟೆಯವರೆಗೆ |
| ತಾಂತ್ರಿಕ ಬಿಡ್ ತೆರೆಯುವ ಸಮಯ ಮತ್ತು ದಿನಾಂಕ | ದಿ.02-03-2026 ಬೆಳಿಗ್ಗೆ 11.00 ಗಂಟೆಗೆ |
| ಆರ್ಥಿಕ ಬಿಡ್ ತೆರೆಯುವ ದಿನಾಂಕ | ತಾಂತ್ರಿಕ ಬಿಡ್ ಅನುಮೋದನೆಯ ನಂತರ |

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದು.

**ಸಹಿ/- ಆಯುಕ್ತರು** ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು

DIPR/TUM/RO-256/25-26/Oysters

---

## ಕರ್ನಾಟಕ ಸರ್ಕಾರ
## ಉಪ ನಿರ್ದೇಶಕರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಹಾಸನ ಜಿಲ್ಲೆ, ಹಾಸನ-573201

E-mail: ddpi.edu.karhas@nic.in Ph:08172-268234

ಸಂಖ್ಯೆ:ಲೆಪ2/ಜಿ.ಪಂ.ನಿಧಿ.ಅ.ಸಾ.ಖ/08/2025-26.

ದಿನಾಂಕ:11.02.2026

**ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ**

ಹಾಸನ ಜಿಲ್ಲೆಯ 25 ಸರ್ಕಾರಿ ಪ್ರೌಢ ಶಾಲೆಗಳಿಗೆ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮೆಂಟ್ ಅನುದಾನದಲ್ಲಿ ಇಂಟರ್‍ಯಾಕ್ಟೀವ್ ಪೆನಲ್ ಬೋರ್ಡ್(ಸ್ಮಾರ್ಟ್ ಕ್ಲಾಸ್) ಸಾಮಗ್ರಿಗಳನ್ನು ಖರೀದಿಸಲು ಅರ್ಹ ಸಂಸ್ಥೆ/ಏಜೆನ್ಸಿಗಳಿಂದ ಅಲ್ಪಾವದಿ ಟೆಂಡರ್ ಅನ್ನು KPPP ಮುಖಾಂತರ ಅಂತರ್ಜಾಲ https://kppp.karnataka.gov.in ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಆಸಕ್ತಿ ಇರುವ ಅರ್ಹ ಸಂಸ್ಥೆ/ಏಜೆನ್ಸಿಯವರು ಅರ್ಜಿ ಸಲ್ಲಿಸಲು ಕೋರಿದೆ. ಟೆಂಡರ್ ಅಂದಾಜು ಮೊತ್ತ : 50,00,000/- ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 11.02.2026 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20.02.2026 4-00 P.M ತಾಂತ್ರಿಕ ಅರ್ಜಿಗಳನ್ನು ತೆರೆಯುವ ದಿನಾಂಕ: 23.02.2026, 11.00 A.M ಆರ್ಥಿಕ ಬಿಡ್ ತೆರೆಯುವ ದಿನಾಂಕ 25.02.2026 ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9743237434 ಸಂಪರ್ಕಿಸಬಹುದು.

**ಸಹಿ/- ಉಪ ನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಹಾಸನ ಜಿಲ್ಲೆ, ಹಾಸನ.**

ವಾಸಾಸಂಇ/ಹಿಸನಿ/ಹಾಸನ/1062/ಕೆಎಸ್‌ಎಂಸಿಎ/2025-26

---

## ಕರ್ನಾಟಕ ಸರ್ಕಾರ
## ಕಾರ್ಯಪಾಲಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ

**eepredkpl@gmail.com,**

**ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2025-26/2887 ದಿನಾಂಕ: 11/02/2026**

**ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW- 1, 2, 3 ಮತ್ತು 4ರ ಪ್ರಕಾರ ನಿಯಮ ಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್/ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "kppp.karnataka.gov.in ಪೋರ್ಟಲ್" ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2025-26 ನೇ ಸಾಲಿನ, ಮಾನ್ಯ ಮುಖ್ಯ ಮಂತ್ರಿಗಳ ಮೂಲಕಸೌಕರ್ಯ ಅಭಿವೃದ್ಧಿ ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು "kppp.karnataka.gov.in ಪೋರ್ಟಲ್" ಮುಖಾಂತರ ಭಾಗವಹಿಸಬಹುದು. ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಟೆಂಡರ ಆಹ್ವಾನಿಸಲಾಗಿದೆ.

1) ಕುಕನೂರು ತಾಲೂಕಿನ ಮಂಡಲಗೇರಿ -ಮಾಳೇಕೊಪ್ಪ ರಸ್ತೆ ನಿರ್ಮಾಣ. INDENT NO:21285 CALL-2 ಟೆಂಡರಗಿಟ್ಟ ಮೊತ್ತ ರೂ **79.57 ಲಕ್ಷ** ,ಇಎಂಡಿ **159500.00** 6 ತಿಂಗಳು

2) ಕುಕನೂರು ತಾಲೂಕಿನ ಚಿತ್ತಾಪೂರ ಗ್ರಾಮದಿಂದ ಹಣವಾಳ-ತಾಲೂಕ ಸರಹದ್ದಿನವರೆಗೆ ರಸ್ತೆ ನಿರ್ಮಾಣ. INDENT NO:21176 CALL-2 ಟೆಂಡರಗಿಟ್ಟ ಮೊತ್ತ ರೂ **79.58 ಲಕ್ಷ** ,ಇಎಂಡಿ **159500.00** 6 ತಿಂಗಳು

**ಸಾಮಾನ್ಯ ಸೂಚನೆಗಳು:-** 1)ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪಮಾಣ ಪತ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3)ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ kppp.karnataka.gov.in portal ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ Download ಮಾಡಿಕೊಳ್ಳಬಹುದಾಗಿದೆ.

**ಟೆಂಡರ ವಿವರ:** ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **13.02.2026** ಸಮಯ 10.00 ಗಂಟೆ ನಂತರ ದಿಂದ **20.02.2026** ಸಮಯ 16.00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **13.02.2026** ಸಮಯ 11.00 ಗಂಟೆ ನಂತರ ದಿಂದ: **20.02.2026** ಸಮಯ 16.30 ಗಂಟೆವರೆಗೆ ಟೆಂಡರ್ ತೆರೆಯುವ ದಿನಾಂಕ: **21.02.2026** ಕಚೇರಿ ಸಮಯದಲ್ಲಿ ಕೆಡಬ್ಲ್ಯೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

**ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಕೊಪ್ಪಳ.**

**ಡಿಐಪಿಆರ್/ಕೊಪ್ಪಳ/672/ಕೆಎಸ್‌ಎಂಸಿಎ/2025-26**

---

## ಕರ್ನಾಟಕ ಸರಕಾರ
## ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
## ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ

ದೂರವಾಣಿ : 08472 -220196, midnglb@rediffmail.com/midnglb1@gmail.com

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ-2/2025-26/4924 ದಿನಾಂಕ: 12-02-2026

**:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-2&4) ::**

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 4702 - ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ಗರಿಷ್ಠ ರೂ. 141,22,725.67 ಕನಿಷ್ಠ ರೂ. 40,33,695.99,** 3) ಗುತ್ತಿಗೆದಾರರ ಅರ್ಹತೆ ವಿವರ: 3ನೇ ದರ್ಜೆ ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ. ಪೋರ್ಟಲ್‌ನಂತೆ ಇ.ಎಂ.ಡಿ. ಮೊತ್ತ ಗರಿಷ್ಠ ರೂ. 2,11,900.00 ಕನಿಷ್ಠ ರೂ. 40,400.00, 5) ಪ್ರಿ ಬಿಡ್ ಮೀಟಿಂಗ್ ದಿನಾಂಕ: **23-02-2026 ಸಮಯ 11.00 ಗಂಟೆಯ ವರೆಗೆ,** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **24-02-2026 ಸಮಯ 11.00 ಗಂಟೆಯ ವರೆಗೆ,** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **25-02-2026 ಸಮಯ 17.30 ಗಂಟೆಯ ವರೆಗೆ,** 8) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **26-02-2026 ಸಮಯ 17.30 ಗಂಟೆಯ ವರೆಗೆ,** 9) ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: **27-02-2026 ಸಮಯ 11.00 ಗಂಟೆಯ ವರೆಗೆ,** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ: www. kppp.Karnataka.gov.in

**ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.**

ವಾ.ಸಾ.ಸಂ.ಇ/ಕಲಬುರಗಿ/1078/ಕೆ.ಎಸ್.ಎಂ.ಸಿ.&ಎ/2025-26

---

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)**

**ಟೆಂಡರ್ ಪ್ರಕಟಣೆ**

**(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)**

**ಸಂಖ್ಯೆ: ಅ.ಇಂ(ವಿ)/ಪ್ರ(ಕಾ)ವೃ-ಉ/ಸ.ಕಾ.ಇಂ(ಕಾ)/ಎಫ್-341/2025-26/2666 ದಿನಾಂಕ: 10.02.2026**

ಕವಿಪ್ರನಿನಿಯು ಪ್ರಸರಣ(ಕಾರ್ಯಾಚರಣೆ) ಉತ್ತರ-ವೃತ್ತದಲ್ಲಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

**1).** ಮತ್ತಿಕೆರೆಯ 66/11ಕೆವಿ ಉಪಕೇಂದ್ರದಲ್ಲಿ ಸ್ಟೋರ್ ರೂಮ್ ನಿರ್ಮಾಣ ಕಾಮಗಾರಿ (Extension).**(ಪರಿಶಿಷ್ಟಜಾತಿಯವರಿಗೆ ಮೀಸಲಿಡಲಾಗಿದೆ).** ಅಂದಾಜು ವೆಚ್ಚ: **ರೂ. 15,00,000/-.**

**2).** 220/66ಕೆವಿ "ಎ" ಉಪಕೇಂದ್ರದಲ್ಲಿ ಸ್ಟೋರ್ ರೂಮ್ ನಿರ್ಮಾಣ ಕಾಮಗಾರಿ (Extension). ಅಂದಾಜು ವೆಚ್ಚ: **ರೂ. 15,00,000/-.**

**3).** ಎಸ್.ಆರ್.ಎಸ್. ಪೀಣ್ಯದ 220ಕೆವಿ ಉಪಕೇಂದ್ರದಲ್ಲಿ ಕೇಬಲ್ ಡಕ್ಟ್‌ಗಳು ಮತ್ತು ನಿಯಂತ್ರಣ ಕೇಬಲ್ ಡಕ್ಟ್‌ಗಳಲ್ಲಿ ಸಂಗ್ರಹವಾಗುವ ಮಳೆನೀರನ್ನು ಹೊರಹಾಕಲು ಮಳೆ ನೀರಿನ ಚರಂಡಿಯನ್ನು ಒದಗಿಸುವ ಕಾಮಗಾರಿ. ಅಂದಾಜು ವೆಚ್ಚ: **ರೂ. 20,00,000/-.**

**4).** ಶ್ರೀಗಂಧಕಾವಲ್‌ನ 66/11ಕೆವಿ ಉಪಕೇಂದ್ರದಲ್ಲಿ ನೀರಿನ ಸಂಪ್ ಟ್ಯಾಂಕ್ ನಿರ್ಮಾಣ ಮಾಡುವ ಕಾಮಗಾರಿ. ಅಂದಾಜು ವೆಚ್ಚ: **ರೂ. 8,00,000/-.**

**5).** 66/11ಕೆವಿ ವಿಜಯನಗರ ಎಂ.ಯು.ಎಸ್.ಎಸ್.ನಲ್ಲಿ ನೀರಿನ ಸಂಪ್ ಟ್ಯಾಂಕ್ ನಿರ್ಮಾಣ ಮಾಡುವ ಕಾಮಗಾರಿ. **(ಪ್ರವರ್ಗ 2ಎಗೆ ಮೀಸಲಿಡಲಾಗಿದೆ).** ಅಂದಾಜು ವೆಚ್ಚ: **ರೂ. 8,00,000/-.**

**6).** 220ಕೆವಿ ಸ್ಟೇಷನ್ ಕಾಲೋನಿ ಎಸ್.ಆರ್.ಎಸ್. ಪೀಣ್ಯದಲ್ಲಿ ಅಗತ್ಯ ನೀರು ಸರಬರಾಜು ಪೈಪ್‌ಲೈನ್ ವ್ಯವಸ್ಥೆ ಮತ್ತು ವಿದ್ಯುದ್ದೀಕರಣ ಕಾರ್ಯದೊಂದಿಗೆ ಸಂಪ್ ಟ್ಯಾಂಕ್ ನಿರ್ಮಾಣ ಮಾಡುವ ಕಾಮಗಾರಿ. ಅಂದಾಜು ವೆಚ್ಚ: **ರೂ. 20,00,000/-.**

**ಸೂಚನೆ:** ವಿಷಯದ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in**ಗೆ ಹೈಪರ್‌ಲಿಂಕ್ **'E Procurement KPTCL'** ನಲ್ಲಿ ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in**ನಲ್ಲಿ ದಿನಾಂಕ: **13.02.2026** ರಂದು ಅಥವಾ ತದನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಇತರೆ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಪಡೆಯಬಹುದಾಗಿದೆ.

**ಸಹಿ/- ಅಧೀಕ್ಷಕ ಇಂಜಿನಿಯರ್(ವಿದ್ಯುತ್), ಪ್ರಸರಣ(ಕಾರ್ಯಾಚರಣೆ) ವೃತ್ತ-ಉತ್ತರ, ಕ.ವಿ.ಪ್ರ.ನಿ.ನಿ., ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ, ಬೆಂಗಳೂರು-560024.**

## ಸಮಾಚಾರ ಸಣ್ಣದಲ್ಲ

### ಪ್ರತಿ ಕೆಜಿ ಅಣಬೆಗೆ 15 ಲಕ್ಷ ರುಪಾಯಿ

**ಕೊಪ್ಪಳ:** ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ಆಯೋಜಿಸಿದ್ದ ಹಣ್ಣು ಮೇಳದಲ್ಲಿ ಅಣಬೆ ಗಮನ ಸೆಳೆಯುತ್ತಿದ್ದು, ಪ್ರತಿ ಕೆ.ಜಿಗೆ 15 ಲಕ್ಷ ರು.ಗೆ ಮಾರಾಟಕ್ಕಿಡಲಾಗಿದೆ. ಇದನ್ನು ಹಿಮಾಲಯದ ತಪ್ಪಲಲ್ಲಿ ಸಿಗುವ ಯರ್ಸ ಗುಂಬಾ ಅಣಬೆ ಎಂದು ಗುರುತಿಸಲಾಗಿದ್ದು, ಇದು ಔಷಧಿಯ ಗುಣ ಹೊಂದಿದ್ದು, ನೇಪಾಳದಿಂದ ತಂದು ಪ್ರದರ್ಶನಕ್ಕೆ ಇಡಲಾಗಿದೆ. ಶಿವರಾತ್ರಿ ಅಂಗವಾಗಿ ತೋಟಗಾರಿಕೆ ಇಲಾಖೆಯಿಂದ ಐದು ದಿನಗಳ ಕಾಲ ಹಣ್ಣು, ಅಣಬೆ, ಜೇನುಮೇಳ ನಡೆಯುತ್ತಿದೆ.

### ರೈಲಿನಲ್ಲಿ ತಲ್ವಾರ್ ತೋರಿಸಿ ದರೋಡೆ

**ಶಿವಮೊಗ್ಗ:** ತಾಳಗುಪ್ಪದಿಂದ ಬೆಂಗಳೂರಿಗೆ ತೆರಳುತ್ತಿದ್ದ ರೈಲಿನ ಬೋಗಿಯೊಳಗೆ ದರೋಡೆಕೋರನೊಬ್ಬ ನುಗ್ಗಿ ತಲ್ವಾರ್ ಹಿಡಿದು ದಾಂಧಲೆ ನಡೆಸಿದ್ದಾನೆ. ಮಂಗಳವಾರ ರಾತ್ರಿ, ರಾತ್ರಿ 11 ಗಂಟೆ 50 ನಿಮಿಷಕ್ಕೆ ಶಿವಮೊಗ್ಗದಿಂದ ಹೊರಡಬೇಕಿದ್ದ ರೈಲು ವಿದ್ಯಾನಗರದ ಹಳೇ ನಿಲ್ದಾಣಕ್ಕೆ ಬರುತ್ತಿದ್ದಂತೆ ಬೋಗಿಯೊಳಗೆ ನುಗ್ಗಿದ ಆಗಂತುಕ, ಕೈಯಲ್ಲಿ ಮಾರಕಾಸ್ತ್ರ ಹಿಡಿದು ಪ್ರಯಾಣಿಕರನ್ನು ಹೆದರಿಸಿದ್ದಾನೆ. ತಲ್ವಾರ್ ಬೀಸಿದ್ದರಿಂದ ಕೆಲವು ಪ್ರಯಾಣಿಕರಿಗೆ ಗಾಯಗಳಾಗಿವೆ ಎನ್ನಲಾಗಿದೆ. ಈ ಮಧ್ಯೆ, ದುಷ್ಕರ್ಮಿಯೊಬ್ಬನ ಮೊಬೈಲ್ ಹಾಗೂ ದುಡ್ಡನ್ನು ಎಗರಿಸಿ ಪರಾರಿಯಾಗಿದ್ದಾನೆ. ಶಿವಮೊಗ್ಗ ಟೌನ್ ರೈಲು ಸ್ಟೇಷನ್‌ನಿಂದ ಕೇವಲ 1 ಕಿಲೋ ಮೀಟರ್ ದೂರದಲ್ಲಿರುವ ಈ ನಿಲ್ದಾಣದಲ್ಲಿ ಘಟನೆ ನಡೆದಿದೆ. ರೈಲಿನಲ್ಲಿ ನಡೆದ ದರೋಡೆ ಯತ್ನ ಮತ್ತು ಹಲ್ಲೆ ಪ್ರಕರಣವನ್ನು ರೈಲ್ವೆ ಇಲಾಖೆ ದೃಢಪಡಿಸಿದೆ.

## ದಿನ ವಿಶೇಷ

13 ಫೆಬ್ರವರಿ 2026 ಗುರುವಾರ

| | | |
|---|---|---|
| » ಸೂರ್ಯೋದಯ | : | 06-44 |
| » ಸೂರ್ಯಾಸ್ತ | : | 06-26 |
| » ತಿಥಿ | : | ಏಕಾದಶಿ |
| » ನಕ್ಷತ್ರ | : | ಮೂಲಾ |
| » ಸಂವತ್ಸರ | : | ವಿಶ್ವಾವಸು |
| » ಆಯನ | : | ಉತ್ತರಾಯಣ |
| » ಋತು | : | ಶಿಶಿರ |
| » ಮಾಸ | : | ಮಾಘ |
| » ಪಕ್ಷ | : | ಕೃಷ್ಣಪಕ್ಷ |

## ವಿಶ್ವವಾಣಿ ಕ್ಲಬ್ ಹೌಸ್

13.02.2026

ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ

ಶ್ರೀ. ನಂದೀಶ್ ಪಿ ಕೆ

ವಿಷಯ

ಅರವಿಂದರ ಸಾವಿತ್ರಿ 12

vishwavani.news

## ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಚಾಮರಾಜಪುರಂ, ಮೈಸೂರು**

**ಸಮಸ್ಯೆಯೇನು..? :** ಜಯಲಕ್ಷ್ಮಿ ವಿಲಾಸ ರಸ್ತೆಯಲ್ಲಿನ ಕಸ ವಿಲೇವಾರಿ ಮಾಡುವ ಬಗ್ಗೆ.

- **ಪರಿಹಾರ:** ಮೈಸೂರು ನಗರದ ಚಾಮರಾಜ ಪುರಂನ ಜಯಲಕ್ಷ್ಮೀ ವಿಲಾಸ ರಸ್ತೆಯಲ್ಲಿ ಕಸ ವಿಲೇವಾರಿ ಆಗದಿರುವ ಬಗ್ಗೆ ಸ್ಥಳೀಯರೊಬ್ಬರು ದೂರು ಕೊಟ್ಟಿದ್ದರು. ಈ ಹಿನ್ನೆಲೆ ಸ್ಥಳ ಪರಿಶೀಲನೆ ನಡೆಸಿದ ಪಾಲಿಕೆ ಅಧಿಕಾರಿಗಳು ಕಸ ವಿಲೇವಾರಿ ಮಾಡಿಸಿದ್ದಾರೆ. ಬ್ಲಾಕ್‌ಸ್ಪಾಟ್‌ಗಳಲ್ಲಿ ಕಸ ಹಾಕದಂತೆ ನೋಡಿಕೊಳ್ಳಲು ಅಗತ್ಯ ಕ್ರಮ ವಹಿಸಿದ್ದಾರೆ.

{ ಎಂ.ಬಿ.ಪಾಟೀಲ } ಕೈಗಾರಿಕಾ ಸಚಿವ

ಕೈಗಾರಿಕಾ ನಿವೇಶನಗಳಲ್ಲಿ ಮಹಡಿ ವಿಸ್ತೀರ್ಣ ಅನುಪಾತವನ್ನು (ಎಫ್‌ಎಆರ್) ಕೈಗಾರಿಕಾ ಸ್ನೇಹಿಯಾಗಿ ಮಾರ್ಪಡಿಸಿ ಆದೇಶ ಹೊರಡಿಸಲಾಗಿದೆ. ಈ ಕ್ರಮದಿಂದ ಕೈಗಾರಿಕಾ ಪ್ರದೇಶಗಳಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳು ಗರಿಗೆದರಲಿವೆ.

ರಾಯಭಾರಿಯಾಗಿ ನೇಮಕವಾದ ಬೆನ್ನಲ್ಲೇ ಮೈಸೂರು ಸ್ಯಾಂಡಲ್‌ಗೆ ಭಾರಿ ಬೇಡಿಕೆ | ಹಿಂದಿನ ವರ್ಷವೂ ಇದೇ ವಿವಾದವೆಬ್ಬಿಸಿದ್ದ ಪ್ರತಿಪಕ್ಷಗಳು | ಕರ್ನಾಟಕಕ್ಕಿಂತ ಆಂಧ್ರ, ತೆಲಂಗಾಣ, ತಮಿಳುನಾಡಿನಲ್ಲೇ ಹೆಚ್ಚು ಮಾರಾಟ

# ತಮನ್ನಾ ಕಾಲ್ಗುಣ; ಕೆಎಸ್‌ಡಿಎಲ್‌ಗೆ ಕಾಂಚಾಣ

**ವಿಶ್ವವಾಣಿ ವಿಶೇಷ** ಬೆಂಗಳೂರು

ಸರಿಯಾದ ಸಮಯದಲ್ಲಿ ಸರಿಯಾದ ಆಯ್ಕೆಯಾದರೆ, ಮಾರುಕಟ್ಟೆ ಮೌಲ್ಯವನ್ನು ವರ್ಷದಲ್ಲಿಯೇ ಒಂದಕ್ಕೆ ಎರಡರಷ್ಟು ಮಾಡಬಹುದು ಎನ್ನುವುದಕ್ಕೆ ಕೆಎಸ್‌ಡಿಎಲ್‌ನ ತೀರ್ಮಾನವೇ ಸಾಕ್ಷಿ ಎನ್ನುವುದು ಸ್ಪಷ್ಟ.

ವಿವಿಧ ಭಾಷಾ ನಟಿ ತಮನ್ನಾ ಭಾಟಿಯಾ ಅವರನ್ನು ಮೈಸೂರು ಸ್ಯಾಂಡಲ್ ರಾಯಭಾರಿಯನ್ನಾಗಿ ಮಾಡಿಕೊಂಡಾಗಿನಿಂದ ಕೆಲವರು ಈ ವಿಷಯದಲ್ಲಿ 'ಕೊಂಕಾಡುತ್ತಿದ್ದಾರೆ'. ಆದರೆ ತಮನ್ನಾ ಮೈಸೂರು ಸ್ಯಾಂಡಲ್‌ನ ಮಾರುಕಟ್ಟೆ ಮೌಲ್ಯವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಅಂಕಿ-ಅಂಶದ ಪ್ರಕಾರ 2025-26ನೇ ಸಾಲಿನ ಮೈಸೂರು ಸ್ಯಾಂಡಲ್ ಮಾರಾಟ ಭಾರಿ ಏರಿಕೆಯಾಗಿದ್ದು, ಬರೋಬ್ಬರಿ 1920 ಕೋಟಿ ರು. ವಹಿವಾಟು ನಡೆಸಿದೆ. ಈ ಪ್ರಮಾಣದ ವಹಿವಾಟು ಕರ್ನಾಟಕದ ಗಡಿಯನ್ನು ಮೀರಿ ನಡೆದಿರುವುದು ತಮನ್ನಾ ರಾಯಭಾರಿಯಾಗಿರುವ ಮಾಡಿರುವ ಮೋಡಿ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಶತಮಾನದ ಇತಿಹಾಸವನ್ನು ಮೈಸೂರು ಸ್ಯಾಂಡಲ್ ಹೊಂದಿದ್ದರೂ, ಕರ್ನಾಟಕವೇ ಅದರ ಬಹುದೊಡ್ಡ ಮಾರುಕಟ್ಟೆಯಾಗಿತ್ತು. ಮೈಸೂರು ಸ್ಯಾಂಡಲ್‌ನ 'ಪ್ರೀಮಿಯಂ' ಸೋಪುಗಳು ಹೊರ ದೇಶಗಳಿಗೆ ರಫ್ತಾಗುತ್ತಿದ್ದರೂ, ಉತ್ತರ ಭಾರತ, ಈಶಾನ್ಯ ಭಾರತದ ಜನರಿಗೆ ಅಷ್ಟಾಗಿ ಮೈಸೂರು ಸ್ಯಾಂಡಲ್‌ನ ಬಗ್ಗೆ ಮಾಹಿತಿ ಇರಲಿಲ್ಲ. ಆದರೆ 'ಮಿಲ್ಕಿ ಬ್ಯೂಟಿ' ತಮನ್ನಾ ರಾಯಭಾರಿಯನ್ನಾಗಿ ನೇಮಿಸಿದ ಬಳಿಕ ಮೈಸೂರು ಸ್ಯಾಂಡಲ್ ಸೋಪಿನ ಹೆಸರು ದೇಶಾದ್ಯಂತ ವಿಸ್ತಾರಗೊಳ್ಳುತ್ತಿದೆ. ಇದರಿಂದಲೇ ರಾಯಭಾರಿಯಾಗಿ ನೇಮಕಗೊಂಡ ಒಂದೇ ವರ್ಷದಲ್ಲಿ ಮಾರಾಟ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ.

**ಹೊರ ರಾಜ್ಯದಲ್ಲಿಯೇ ಹೆಚ್ಚಿದ ಬೇಡಿಕೆ:**

ಕೆಎಸ್‌ಡಿಎಲ್ ದೇಶದ ವಿವಿಧ ಭಾಗದಲ್ಲಿ ಮೈಸೂರು ಸ್ಯಾಂಡಲ್ ಉತ್ಪನ್ನಗಳ ಮಾರಾಟ ಹೆಚ್ಚಿಸಲು ಆರು ಶಾಖೆಗಳನ್ನು ಆರಂಭಿಸಿ, ಆ ಶಾಖೆಗಳ ಮೂಲಕ ದೇಶದ ವಿವಿಧ ರಾಜ್ಯಗಳಲ್ಲಿ ಮಾರಾಟ ಮಾಡುತ್ತಿದೆ. ತಮನ್ನಾ ಭಾಟಿಯಾ ರಾಯಭಾರಿಯಾಗಿ ನೇಮಕಗೊಂಡು ವರ್ಷದ ಬಳಿಕ ಮೈಸೂರು ಸ್ಯಾಂಡಲ್‌ನ ಮಾರಾಟ ಕರ್ನಾಟಕಕ್ಕಿಂತ ನೆರೆ ರಾಜ್ಯ ಆಂಧ್ರಪ್ರದೇಶ, ತೆಲಂಗಾಣ ಹಾಗೂ ತಮಿಳುನಾಡಿನಲ್ಲಿಯೇ ಹೆಚ್ಚು ಮಾರಾಟವಾಗಿದೆ. ತಮನ್ನಾ ತಮಿಳು, ತೆಲುವು ಭಾಷೆಯಲ್ಲಿ ತಮ್ಮದೇಯಾದ ಛಾಪು ಮೂಡಿಸಿರುವುದರಿಂದ, ಆಕೆಯ ಹಿಂಬಾಲಕರು ಮೈಸೂರು ಸ್ಯಾಂಡಲ್‌ಗೆ ಸಹಜವಾಗಿಯೇ ಶಿಫ್ಟ್ ಆಗಿದ್ದಾರೆ ಎನ್ನುವುದು ಅಂಕಿ-ಅಂಶದಲ್ಲಿ ಸ್ಪಷ್ಟವಾಗಿದೆ.

ಕೆಲ ವರ್ಷದ ಹಿಂದೆ ಮೈಸೂರು ಸ್ಯಾಂಡಲ್ ಸೋಪು ದಕ್ಷಿಣ ಭಾರತದಲ್ಲಿ ಹೆಸರಾಗಿದ್ದರೂ, ಅದರ ಮಾರುಕಟ್ಟೆ ಉತ್ತರ ಭಾರತ, ಈಶಾನ್ಯ ಭಾರತದಲ್ಲಿರಲಿಲ್ಲ. ಆದರೆ ತಮನ್ನಾ ಭಾಟಿಯಾ ರಾಯಭಾರಿಯಾದ ಬಳಿಕ ಮಾರುಕಟ್ಟೇ ಇಲ್ಲದ ಬಿಹಾರ, ಜಾರ್ಖಂಡ್, ಈಶಾನ್ಯ ರಾಜ್ಯ, ಪಂಜಾಬ್, ಉತ್ತರ ಪ್ರದೇಶ, ರಾಜಸ್ಥಾನವಷ್ಟೇ ಅಲ್ಲದೇ ಜಮ್ಮು-ಕಾಶ್ಮೀರ ಹಾಗೂ ಹಿಮಾಚಲ ಪ್ರದೇಶದಲ್ಲಿಯೂ ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಹೊಸ ಮಾರುಕಟ್ಟೆಗಳು ಸೃಷ್ಟಿಯಾಗಲು ಕೆಎಸ್‌ಡಿಎಲ್‌ನ ತಂತ್ರಗಾರಿಕೆಯ ಜತೆಜತೆಗೆ ತಮನ್ನಾ ಭಾಟಿಯಾರನ್ನು ರಾಯಭಾರಿ ಮಾಡಿಕೊಂಡಿದ್ದು ಕಾರಣ ಎನ್ನಲಾಗಿದೆ.

### 2025-26ರ ಮಾರಾಟದ ಅಂದಾಜು ಲೆಕ್ಕಾಚಾರ

| ಶಾಖೆ | ಮಾರಾಟ ಕೋಟಿ.ರು | ಶೇ. ಮಾರಾಟ ಹೆಚ್ಚಳ |
|---|---|---|
| ಹೈದರಾಬಾದ್ | 872 | ಶೇ.45.56 |
| ಬೆಂಗಳೂರು | 287.30 | ಶೇ.15.01 |
| ಚೆನ್ನೈ | 378 | ಶೇ.19.75 |
| ಕೊಲ್ಕತ್ತ | 175.20 | ಶೇ.9.15 |
| ಮುಂಬೈ | 122 | ಶೇ.6.37 |
| ದೆಹಲಿ | 47.40 | ಶೇ.2.48 |

### ಯಾವ ರಾಜ್ಯದಲ್ಲಿ ಅತಿಹೆಚ್ಚು ಮಾರಾಟ?

| ರಾಜ್ಯ | ಒಟ್ಟು ಮಾರಾಟ (ಕೋಟಿ) | ಶೇಕಡಾವಾರು ಮಾರಾಟ |
|---|---|---|
| ಆಂಧ್ರಪ್ರದೇಶ | 551 | ಶೇ.28.79 |
| ತೆಲಂಗಾಣ | 321 | ಶೇ.16.77 |
| ತಮಿಳುನಾಡು | 362 | ಶೇ.18.91 |
| ಕರ್ನಾಟಕ | 285 | ಶೇ.14.89 |
| ಒಡಿಸ್ಸಾ | 111 | ಶೇ.5.80 |

### ದೇಶಾದ್ಯಂತ ಹೆಚ್ಚಿದ ಬೇಡಿಕೆ

2025ರ ಮೇನಲ್ಲಿ ತಮನ್ನಾ ಭಾಟಿಯಾ ಅವರನ್ನು ಆರು ಕೋಟಿ. ರು.ಗೆ ರಾಯಭಾರಿಯನ್ನಾಗಿ ಕೆಎಸ್‌ಡಿಎಲ್ ನೇಮಿಸಿದ ಬಳಿಕ ದೇಶಾದ್ಯಂತ ಮೈಸೂರು ಸ್ಯಾಂಡಲ್ ಸೋಪಿಗೆ ಬೇಡಿಕೆ ಹೆಚ್ಚಿದೆ ಎನ್ನುವುದು ಅಂಕಿ- ಅಂಶದಲ್ಲಿ ಸ್ಪಷ್ಟವಾಗಿದೆ. ವಿವಾದ ಬಳಿಕ ಮೈಸೂರು ಸ್ಯಾಂಡಲ್ ಮಾರಾಟವನ್ನು ಗಮನಿಸಿದರೆ, ಬರೋಬ್ಬರಿ ಶೇ.45ರಷ್ಟು ಮಾರಾಟ ಹೆಚ್ಚಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಅದರಲ್ಲಿಯೂ ಹೈದರಾಬಾದ್ ಶಾಖೆ ಅಂದರೆ ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಲ್ಲಿಯೇ ಶೇ.45.56ರಷ್ಟು ಮಾರಾಟ ಹೆಚ್ಚಾಗುವ ಮೂಲಕ 870 ಕೋಟಿ ರು. ಮೌಲ್ಯದ ವ್ಯವಹಾರ ನಡೆದಿದೆ. ಇದೇ ರೀತಿ ತಮಿಳುನಾಡು, ಕೇರಳ ಭಾಗದಲ್ಲಿ ಶೇ.19.75ರಷ್ಟು ಹೆಚ್ಚಾಗಿದೆ ಎನ್ನುವುದು ಅಂಕಿ-ಅಂಶದಲ್ಲಿ ಬಯಲಾಗಿದೆ.

## ವಿಶ್ವೇಶ್ವರ ಭಟ್ಟರಿಗೆ ಗಾಂಧಿ ಪುರಸ್ಕಾರ

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರಿಗೆ ಗಾಂಧಿ ಪುರಸ್ಕಾರ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

**ಬೆಂಗಳೂರು:** ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರಿಗೆ ಗಾಂಧಿ ಪುರಸ್ಕಾರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಯೋಗಕ್ಷೇಮ ಮೀಡಿಯಾ ಪ್ರೈವೇಟ್ ಲಿಮಿಟೆಡ್, ವಿಶ್ವಂ ವೈಚಾರಿಕ ವಾಹಿನಿ ಹಾಗೂ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ವತಿಯಿಂದ ಜ.30ರಂದು ತುಮಕೂರಿನ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಗಾಂಧಿ ಸ್ಮರಣಾರ್ಥ ಆಯೋಜಿಸಲಾಗಿದ್ದ ಪತ್ರಿಕಾ ವಿತರಕರ ಬದುಕಿನ ಕುರಿತಾದ ಏಕವ್ಯಕ್ತಿ ರಂಗ ಪ್ರದರ್ಶನ 'ನಸುಕಿನ ನೊಗ' ನಾಟಕದ ಪ್ರದರ್ಶನದ ಸಂದರ್ಭದಲ್ಲಿ ವಿಶ್ವೇಶ್ವರ ಭಟ್ಟರಿಗೆ ಪ್ರದಾನ ಮಾಡಬೇಕಾಗಿದ್ದ ಗಾಂಧಿ ಪುರಸ್ಕಾರ ಪ್ರಶಸ್ತಿಯನ್ನು ಗುರುವಾರ ವಿಶ್ವವಾಣಿ ಕಚೇರಿಯಲ್ಲಿ ನೀಡಲಾಯಿತು. ಪತ್ರಿಕಾ ವಿತರಕರ ಸಂಕಷ್ಟಗಳ ಬಗ್ಗೆ ಚರ್ಚಿಸಿದ ವಿಶ್ವೇಶ್ವರ ಭಟ್ಟರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಮುಂಬರುವ ಬಜೆಟ್‌ನಲ್ಲಿ ಪತ್ರಿಕಾ ವಿತರಕರಿ ಗೆ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪನೆ ಮಾಡಲು ವಿಶ್ವವಾಣಿ ಪತ್ರಿಕೆಯ ಮುಖಾಂತರ ಹಕ್ಕೊತ್ತಾಯ ಮಾಡಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ವಿಶ್ವಂ ವಾಹಿನಿಯ ಸಿಇಒ ಹಾಗೂ ನಸುಕಿನ ನೊಗ ನಾಟಕದ ನಿರ್ದೇಶಕ ನಾಟಕ ಬ್ರಹ್ಮ ಡಾ.ಎಸ್.ಎಲ್.ಎನ್ ಸ್ವಾಮಿ, ವತ್ಸ, ಮಂಡ್ಯ ರವಿ, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷರಾದ ಕೆ.ಶಂಭುಲಿಂಗ, ಕಾರ್ಯದರ್ಶಿ ಜಗದೀಶ್, ತುಮಕೂರು ಜಿಲ್ಲಾ ದಿನಪತ್ರಿಕೆ ಹಂಚಿಕೆದಾರರ ಸಂಘದ ಜಿಲ್ಲಾಧ್ಯಕ್ಷರಾದ ಚಲುವರಾಜು (ರಘು) ಇದ್ದರು.

ಆಳಂದ ಲಾಡ್ಲೆ ಮಶಾಕ್ ದರ್ಗಾದ ಶಿವಲಿಂಗ ಪೂಜೆಗೆ ಅವಕಾಶ

## ಹೈಕೋರ್ಟ್ ತೀರ್ಪು ಎತ್ತಿಹಿಡಿದ ಸುಪ್ರೀಂ

**ಕಲಬುರಗಿ:** ಜಿಲ್ಲೆಯ ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದಲ್ಲಿನ ಶಿವಲಿಂಗಕ್ಕೆ ಮಹಾಶಿವರಾತ್ರಿಯಂದು ಪೂಜೆ ಸಲ್ಲಿಸಲು ಅವಕಾಶ ನೀಡಿದ್ದ ಕಲಬುರಗಿ ವಿಭಾಗೀಯ ಹೈಕೋರ್ಟ್ ಆದೇಶವನ್ನು ಭಾರತದ ಸರ್ವೋಚ್ಚ ನ್ಯಾಯಾಲಯ ಎತ್ತಿಹಿಡಿದಿದೆ. ಪೂಜೆಗೆ ತಡೆ ನೀಡುವಂತೆ ದರ್ಗಾ ಕಮಿಟಿ ಸಲ್ಲಿಸಿದ್ದ ಅರ್ಜಿ ಸುಪ್ರೀಂಕೋರ್ಟ್ ತಿರಸ್ಕರಿಸಿದ್ದು, ಹೈಕೋರ್ಟ್ ಆದೇಶವೇ ಮುಂದುವರಿಯಲಿದೆ ಎಂದು ಸ್ಪಷ್ಟಪಡಿಸಿದೆ.

ಹಿಂದೂ ಮುಖಂಡ ಸಿದ್ದರಾಮಯ್ಯ ಹಿರೇಮಠ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ, ಫೆ.15ರಂದು ನಿರ್ದಿಷ್ಟ ಸಮಯದಲ್ಲಿ ಪೂಜೆ ಸಲ್ಲಿಸಲು ಅನುಮತಿ ಕೋರಿದ್ದರು. ಅರ್ಜಿ ಪರಿಗಣಿಸಿದ ಹೈಕೋರ್ಟ್, ಅರ್ಜಿದಾರರಿಗೆ ಮಾತ್ರ ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ಪೂಜೆ ಸಲ್ಲಿಸಲು ಅವಕಾಶ ನೀಡಿತ್ತು. ಇದನ್ನು ಪ್ರಶ್ನಿಸಿ ದರ್ಗಾ ಕಮಿಟಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದರೂ, ಸಂವಿಧಾನದ 32ನೇ ವಿಧಿಯನ್ನು ಈ ಉದ್ದೇಶಕ್ಕೆ ಬಳಸಲು ಸಾಧ್ಯವಿಲ್ಲ ಎಂದು ಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿಯನ್ನು ತಳ್ಳಿ ಹಾಕಿದೆ.

ಲಾಡ್ಲೆ ಮಶಾಕ್ ದರ್ಗಾದಲ್ಲಿನ ಶ್ರೀ ರಾಘವ ಚೈತನ್ಯರ ಸಮಾಧಿಯ ಮೇಲಿರುವ ಶಿವಲಿಂಗಕ್ಕೆ ಪೂಜೆ ಸಲ್ಲಿಸುವ ವಿಚಾರ ಹಲವು ವರ್ಷಗಳಿಂದ ಕಾನೂನು ವಿವಾದಕ್ಕೆ ಕಾರಣವಾಗಿತ್ತು. ಶಾಂತಿ ಕಾಪಾಡುವ ನಿಟ್ಟಿನಲ್ಲಿ ಆಡಳಿತ ನಿರ್ಬಂಧಗಳನ್ನು ವಿಧಿಸುತ್ತಾ ಬಂದಿದ್ದು, ಇದೀಗ ಸುಪ್ರೀಂಕೋರ್ಟ್ ತೀರ್ಪಿನಿಂದ ಈ ವರ್ಷದ ಮಹಾಶಿವರಾತ್ರಿ ಪೂಜೆಗೆ ಕಾನೂನು ಸ್ಪಷ್ಟತೆ ದೊರೆತಿದೆ.

### ಭದ್ರತೆ ಒದಗಿಸಲು ಜಿಲ್ಲಾಡಳಿತಕ್ಕೆ ಸೂಚನೆ

ಸುಪ್ರೀಂ ಕೋರ್ಟ್ ತೀರ್ಪಿನಿಂದ ಪೂಜೆಗೆ ಇದ್ದ ಕಾನೂನು ಅಡೆತಡೆಗಳು ದೂರವಾಗಿದ್ದು, ಮಹಾಶಿವರಾತ್ರಿಯಂದು ಪೂಜೆ ನೆರವೇರಲು ಮಾರ್ಗ ಸಿದ್ಧವಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಸೂಕ್ತ ಭದ್ರತಾ ವ್ಯವಸ್ಥೆ ಕೈಗೊಳ್ಳಲು ಸಹ ಮೌಖಿಕ ಸೂಚನೆ ನೀಡಿದೆ.

### ಹದಿನಾಲ್ಕು ಮಂದಿಯಿಂದ ಜಿಲ್ಲಾಡಳಿತಕ್ಕೆ ಮನವಿ

ಮಹಾಶಿವರಾತ್ರಿಯಂದು ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದಲ್ಲಿನ ರಾಘವ ಚೈತನ್ಯ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಅವಕಾಶ ನೀಡುವಂತೆ ಜಿಲ್ಲಾಡಳಿತಕ್ಕೆ ಷ.ಬ್ರ. ವೀರಭದ್ರ ಶಿವಾಚಾರ್ಯರು ಕಡಗಂಚಿ, ಹರ್ಷಾನಂದ ಗುತ್ತೇದಾರ್, ಗುರುಶಾಂತ್ ಟೆಂಗಳಿ, ರಾಕೇಶ್ ಜಮಾದಾರ್, ಶಿವರಾಜ ಬಾಳಿ, ಅಶೋಕ್ ಬಗಲಿ, ಮಲ್ಲಿಕಾರ್ಜುನ ಸಾವಳಗಿ, ಶಿವಪುತ್ರ ನಡಿಗೇರಿ, ಮಲ್ಲಿಕಾರ್ಜುನ ಕಂದಗೋಳ, ವೀರಣ್ಣ ಭೀಮಪ್ಪ ಹತ್ತರಗಿ, ರಾಜು ಚೌಹಾಣ್, ಹಣಮಂತರಾವ್ ಪಾಟೀಲ್, ರವಿ ಮೌಲಪ್ಪ ಮದನಕರ್, ಮಲಕಣ್ಣಾ ಹಿರೇಪುಜಾರಿ ಸೇರಿ ಒಟ್ಟು 14 ಮಂದಿ ಅರ್ಜಿದಾರರು ಮನವಿ ಸಲ್ಲಿಸಿದ್ದಾರೆ.



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಭೇಟಿಯಾಗಿ, ತೆಂಗು ಸೇರಿದಂತೆ ನಾಡಿನ ರೈತರ ಸಮಸ್ಯೆಗಳನ್ನು ಬಗೆಹರಿಸುವಂತೆ ಮನವಿ ಮಾಡಿದರು.

## ಶಾಸಕರ ವಿದೇಶ ಪ್ರವಾಸದ ಬಗ್ಗೆ ಗೊಂದಲ ಸೃಷ್ಟಿಸಬೇಡಿ

**ಕೊಪ್ಪಳ:** ಶಾಸಕರು ವಿದೇಶಕ್ಕೆ ಹೋಗಬಾರದೆಂದು ಕೆಲವರು ಅನಾವಶ್ಯಕ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಶಾಸಕ ರಾಘವೇಂದ್ರ ಹಿಟ್ನಾಳ್ ಹೇಳಿದರು.

ತಪ್ಪು ಮಾಹಿತಿ ಹರಡುವುದು ಸರಿಯಲ್ಲ. ನಾವು ಟೀಮ್ ಆಗಿ ವಿದೇಶಕ್ಕೆ ಹೋಗುವುದಿಲ್ಲ. ಸದನ ಈಗಾಗಲೇ ಮುಗಿದಿದೆ. ಸ್ನೇಹಿತರ ನಡುವೆ ವಿದೇಶ ಪ್ರವಾಸದ ಬಗ್ಗೆ ಕೇವಲ ಚರ್ಚೆ ನಡೆದಿದ್ದು ಅಷ್ಟೆ. ನಾನು ಹೋಗುವುದೇ ಇನ್ನೂ ಖಚಿತವಾಗಿಲ್ಲ. ಹೋದರೆ ತಿಳಿಸುತ್ತೇನೆ ಎಂದರು.

ಸಿಎಂ ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಈ ವಿಚಾರದಲ್ಲಿ ಪರಸ್ಪರ ಮಾತುಕತೆ ನಡೆಸಿದ್ದಾರೆ. ಯಾವುದೇ ಗೊಂದಲ ಇಲ್ಲ. ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡಬೇಡಿ. ಡಿ.ಕೆ.ಶಿವಕುಮಾರ್ ಅವರಿಗೆ ಬೇರೆ ಬೇರೆ ರಾಜ್ಯಗಳ ಉಸ್ತುವಾರಿ ಜವಾಬ್ದಾರಿ ನೀಡಲಾಗಿದೆ. ಆ ಕಾರಣಕ್ಕಾಗಿ ಅವರು ದೆಹಲಿಗೆ ಹೋಗಿರಬಹುದು. ಯತೀಂದ್ರ ಅವರು ಹೈಕಮಾಂಡ್ ಯಾವುದೇ ಸೂಚನೆ ನೀಡಿಲ್ಲ ಎಂದಿದ್ದಾರೆ. ಹೀಗಾಗಿ ಮುಂದಿನ 5 ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿ ಮುಂದುವರಿಯುತ್ತಾರೆ ಎಂದರು.

ಫಲಾನುಭವಿಗಳಿಗೆ ತಲುಪದ 5 ಸಾವಿರ ಕೋಟಿ ಬಗ್ಗೆ ಉತ್ತರಿಸಲು ಸಿಎಂ ಹಿಂದೇಟು: ವಿಜಯೇಂದ್ರ

## ಗೃಹಲಕ್ಷ್ಮಿ ಹಣ ಚುನಾವಣೆಗಳಿಗೆ ಬಳಕೆ

**ಬೆಳಗಾವಿ:** 2025ರ ಜನವರಿ ಮತ್ತು ಫೆಬ್ರವರಿಯ ಗೃಹಲಕ್ಷ್ಮಿ ಯೋಜನೆಯ ಎರಡು ಕಂತುಗಳ ಹಣ 5 ಸಾವಿರ ಕೋಟಿ ಈವರೆಗೆ ಫಲಾನುಭವಿಗಳಿಗೆ ತಲುಪಿಲ್ಲ. ಹಣಕಾಸು ಖಾತೆ ಹೊಂದಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅದರ ಸ್ಥಿತಿಯ ಬಗ್ಗೆ ಉತ್ತರಿಸಲು ಸಾಧ್ಯವಾಗಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತೆಲಂಗಾಣ ವಿಧಾನಸಭಾ ಚುನಾವಣೆಗೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಬಳಸಲಾಗಿದೆ ಎಂಬ ಆರೋಪ ಈ ಹಿಂದೆ ಕೇಳಿಬಂದಿತ್ತು. ಈಗ ಗೃಹಲಕ್ಷ್ಮಿ ಯೋಜನೆಯ 5 ಸಾವಿರ ಕೋಟಿ ನಿಧಿಯನ್ನು ಕೆಲ ಚುನಾವಣೆಗಳಿಗೆ ಬಳಸಲಾಗಿದೆ ಎಂಬ ಅನುಮಾನವಿದೆ ಎಂದು ಆರೋಪಿಸಿದರು.

2025ರ ಡಿಸೆಂಬರ್‌ನಲ್ಲಿ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ, ಗೃಹಲಕ್ಷ್ಮಿ ಯೋಜನೆಯ 5 ಸಾವಿರ ಕೋಟಿ ರುಪಾಯಿ ನಿಧಿ ಫಲಾನುಭವಿಗಳಿಗೆ ತಲುಪದ ವಿಷಯವನ್ನು ಬಿಜೆಪಿ ಶಾಸಕ ಮಹೇಶ ಟೆಂಗಿನಕಾಯಿ ಎತ್ತಿದ್ದರು. ಆದರೆ, ಸಿದ್ದರಾಮಯ್ಯ ಅವರು ಉತ್ತರಿಸಲಿಲ್ಲ. ಇತ್ತೀಚೆಗೆ ಬೆಂಗಳೂರಿನಲ್ಲಿ ಮುಕ್ತಾಯಗೊಂಡ ಅಧಿವೇಶನದಲ್ಲೂ ಈ ವಿಷಯವನ್ನು ಮತ್ತೆ ಪ್ರಸ್ತಾಪಿಸಿದರೂ ಯಾವುದೇ ಉತ್ತರ ಬಂದಿಲ್ಲ. ಮುಖ್ಯಮಂತ್ರಿ ತಕ್ಷಣವೇ ಇದಕ್ಕೆ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನಾಗಿ ಮತ್ತು ಪ್ರತಿಪಕ್ಷದ ಶಾಸಕನಾಗಿ, ನಾನು ಕಾಂಗ್ರೆಸ್ ಸರಕಾರದ ವೈಫಲ್ಯಗಳನ್ನು ಟೀಕಿಸುತ್ತಿದ್ದೇನೆ. ಮುಡಾ ಭೂ ಹಗರಣದಲ್ಲೂ ಸಿದ್ದರಾಮಯ್ಯ ವಿರುದ್ಧ ಬೆಂಗಳೂರಿನಿಂದ ಮೈಸೂರಿನವರೆಗೆ ರ‍್ಯಾಲಿ ನಡೆಸಿದ್ದೇನೆ. ಗೃಹಲಕ್ಷ್ಮಿ ಯೋಜನೆ ವಿಚಾರದಲ್ಲೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಬಗ್ಗೆ ನಮಗೆ ಯಾವುದೇ ಮೃದು ಧೋರಣೆ ಇಲ್ಲ. ಗೃಹಲಕ್ಷ್ಮಿ ಯೋಜನೆ ನಿಧಿ ವಿಷಯ ಇಲ್ಲಿಗೇ ಕೈಬಿಡುವುದಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಕೇಂದ್ರಕ್ಕೆ ನಕಲಿ ದಾಖಲೆಗಳನ್ನು ಸಲ್ಲಿಸಲಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅದರ ವಿರುದ್ಧವೂ ಧ್ವನಿ ಎತ್ತುತ್ತೇವೆ ಎಂದರು.

**ಕುರ್ಚಿ ಉಳಿಸಿಕೊಳ್ಳಲು ಸಿಎಂ ಶಾಸಕರನ್ನು ವಿದೇಶಕ್ಕೆ ಕಳಿಸುತ್ತಿದ್ದಾರೆ:** ತಮ್ಮ ವಿಧಾನಸಭೆ ಕ್ಷೇತ್ರಗಳ ಅಭಿವೃದ್ಧಿಗೆ ಕಾಂಗ್ರೆಸ್ ಶಾಸಕರಿಗೆ ಸಹ ಅನುದಾನ ಸಿಗುತ್ತಿಲ್ಲ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನ ಉಳಿಸಿಕೊಳ್ಳಲು ಶಾಸಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸುತ್ತಿದ್ದಾರೆ. ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಹಣ ಕೊಡುವಂತೆ ಕಾಂಗ್ರೆಸ್‌ನ ಶಾಸಕರು ಗೋಗರೆಯುತ್ತಿದ್ದಾರೆ. ಬಡವರಿಗೆ ಮನೆ ಕಟ್ಟಿಕೊಡಲು ಮತ್ತು ಗಂಗಾ ಕಲ್ಯಾಣ ಯೋಜನೆಗೆ ಅನುದಾನವಿಲ್ಲ. ಮೃತ ಕುರಿ, ಮೇಕೆಗಳಿಗೆ ಅನುಗ್ರಹ ಯೋಜನೆಯಡಿಹಣಕೊಟ್ಟಿಲ್ಲ. ಕುರ್ಚಿ ಉಳಿಸಿಕೊಳ್ಳುವಭರಾಟೆಯಲ್ಲಿ ಸಿಎಂ ಅವರಿಗೆ ಯಾರೂ ಕಾಣುತ್ತಿಲ್ಲ. ಇಂಥ ಕೆಟ್ಟ ಸರಕಾರವನ್ನು ರಾಜ್ಯದ ಇತಿಹಾಸದಲ್ಲೇ ನೋಡಿಲ್ಲ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ರಾಜ್ಯದಲ್ಲಿ ಹಿಂದುಗಳ ತಾಲೂಕುಗಳ ಸಂಖ್ಯೆ ಏರಿಕೆಯಾಗಿದೆ. ಈ ಬಗ್ಗೆ ಪ್ರೊ.ಗೋವಿಂದರಾವ್ ವರದಿಯಲ್ಲಿ ಉಲ್ಲೇಖವಾಗಿದೆ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕದಲ್ಲಿ ಹಿಂದುಳಿದ ತಾಲೂಕುಗಳು ಹೆಚ್ಚಿವೆ. ಹಾಗಾದರೆ ಇವರು ಮೈಸೂರಿಗೆ ಸೀಮಿತ ಮುಖ್ಯಮಂತ್ರಿಯೇ? ಕೇವಲ ನುಡಿದಂತೆ ನಡೆದಿದ್ದೇವೆ ಎಂದು ಬೀಗಿದರೆ ಸಾಲದು. ಇಡೀ ರಾಜ್ಯದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

- ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

### ಫೆ.19ರಂದು ರಾಜ್ಯ ಕಾರ್ಯಕಾರಿಣಿ

ಫೆಬ್ರವರಿ 19ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ನಡೆಯಲಿದೆ. ಸಂಘಟನೆ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ವಿಧಾನ ಪರಿಷತ್ ಸದಸ್ಯ ಸ್ಥಾನ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಗಳ ಕುರಿತು ಚರ್ಚೆಗಳು ನಡೆಯಲಿವೆ. ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ, ಹಿರಿಯ ಸಚಿವರು ಪಾಲ್ಗೊಳ್ಳಲಿದ್ದಾರೆ ಎಂದು ವಿಜಯೇಂದ್ರ ತಿಳಿಸಿದರು.

**ಜಿಲ್ಲಾ ಆಯುಷ್ ಕಛೇರಿ**

ಬೃಂದಾವನ ಬಡಾವಣೆ, ಕೆ.ಆರ್.ಎಸ್.ರಸ್ತೆ, ಮೈಸೂರು-570 020.
ದೂರವಾಣಿ: 0821-2512962, ಇ-ಮೇಲ್: dao.mysore09@gmail.com

ಸಂ: ಜಿಆಕಮೈ/61/ಹೊಗು/2025-26 ದಿನಾಂಕ: 10.02.2026

**ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ**

ಜಿಲ್ಲಾ ಆಯುಷ್ ಕಛೇರಿ, ಮೈಸೂರು ಇಲ್ಲಿಗೆ 2025-2026ನೇ ಸಾಲಿನಿಂದ ಸರ್ಕಾರದಿಂದ **ಮಾನ್ಯತೆ ಪಡೆದ ಮಾನವ ಸಂಪನ್ಮೂಲ ಸಂಸ್ಥೆ ವತಿಯಿಂದ 31 ಜನ ಗ್ರೂಪ್ 'ಡಿ' ಹೊರಗುತ್ತಿಗೆ ಸಿಬ್ಬಂದಿ ಸೇವೆಯನ್ನು ಇ-ಟೆಂಡರ್ ಮೂಲಕ ಆಸ್ಪತ್ರೆ /ಚಿಕಿತ್ಸಾಲಯಗಳಿಗೆ** ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ, ಟೆಂಡರ್ ಅವಧಿ ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಇರುತ್ತದೆ.

ಟೆಂಡರ್ ವಿವರಗಳಿಗಾಗಿ ವೆಬ್‌ಸೈಟ್: http://www.kppp.karnataka.gov.in ಗಮನಿಸುವುದು. ಟೆಂಡರ್ ವಿವರಗಳನ್ನು ಅಪ್ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 24.02.2026ರ ಸಂಜೆ 5.30 ಗಂಟೆವರೆಗೆ** ಕಾಲಾವಕಾಶವಿರುತ್ತದೆ. ಹಾಗೂ ಟೆಂಡರ್ ತೆರೆಯುವ **ದಿನಾಂಕ: 26.02.2026ರಂದು ಪೂರ್ವಾಹ್ನ 12.00 ಗಂಟೆಗೆ** ನಿಗದಿಪಡಿಸಿದೆ. ವಾರ್ಷಿಕ ಟೆಂಡರ್ ಮೊತ್ತವು **ರೂ. 75.00 ಲಕ್ಷಗಳು** (ರೂ ಎಪ್ಪತ್ತೈದು ಲಕ್ಷ ಮಾತ್ರ) ಮತ್ತು ಇ.ಎಂ.ಡಿ ಮೊತ್ತ **ರೂ.1.50 ಲಕ್ಷಗಳು** (ರೂ. ಒಂದು ಲಕ್ಷದ ಐವತ್ತು ಸಾವಿರ ಮಾತ್ರ)ಗಳನ್ನು ನಿಗದಿಪಡಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಜಿಲ್ಲಾ ಆಯುಷ್ ಕಛೇರಿ, ಎಸ್.ಬಿ.ಐ. ಬ್ಯಾಂಕ್ ಎದುರು, ಬೃಂದಾವನ ಬಡಾವಣೆ, ಮೈಸೂರು-20 ಇಲ್ಲಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿದೆ.

**ಸಹಿ/- ಜಿಲ್ಲಾ ಆಯುಷ್ ಅಧಿಕಾರಿ**
ಜಿಲ್ಲಾ ಆಯುಷ್ ಕಚೇರಿ, ಮೈಸೂರು.

DIPR/MYS/1646/SA/2025-26

**ಕಾವೇರಿ ನೀರಾವರಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಉದ್ಯಮ)**

ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪುವಿ/ಪಿಬಿಸಿ/ಟೆಂಡರ್ ಪ್ರಕಟಣೆ ಸಂಖ್ಯೆ: 20/2025-26, ದಿನಾಂಕ: 11-2-2026

**ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ)**
( ಐಟಂವಾರು : ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರುರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಐಟುವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2 ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ರೂ 55.00 ದಿಂದ 100.00 ಲಕ್ಷಗಳಿದ್ದು, ಈ ಕಾಮಗಾರಿಗೆ ನಿಗದಿತ ದರ್ಜೆ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಕರೆಯಲಾಗಿದೆ.

ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂಮೆರ್ಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: 19-2-2026 ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: 20-2-2026 ರ ಅಪರಾಹ್ನ 4.30 ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂಮೆರ್ಂಟ್ ಪೋರ್ಟಲ್ ವೆಬ್‌ಸೈಟ್ ವಿಳಾಸ: http://kppp.Karnataka.gov.in. ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗೆ ಇ-ಪ್ರೊಕ್ಯೂಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ. ಕಾರಣಾಂತರಗಳಿಂದ ಯಾವುದೇ ಬದಲವಣೆಗಳಾದಲ್ಲಿ ಕೆಪಿಪಿಪಿ ಪೋರ್ಟಲ್ ನಲ್ಲಿ ಮಾತ್ರ ಪತ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

**ಕಾರ್ಯಪಾಲಕ ಇಂಜಿನಿಯರ್**
**ಹಾರಂಗಿ ಪುನರ್ವಸತಿ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ**
**ಕುಶಾಲನಗರ, ಸೋಮವಾರಪೇಟೆ ತಾ.,ಕೊಡಗು ಜಿಲ್ಲೆ - 571234**

## ಸಂಪಾದಕೀಯ

# ಶಾಶ್ವತ ಪರಿಹಾರ ಮಾರ್ಗ ಬೇಕು

ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಬೆಟ್ಟ ಪ್ರದೇಶದಲ್ಲಿ ಚಿರತೆಗಳ ಕಾಟದಲ್ಲಿ ಹೆಚ್ಚಳವಾಗಿರುವುದು ತಲೆನೋವಿನ ಸಂಗತಿ. ಬಾಲಕನೊಬ್ಬನ ಮೇಲೆ ಚಿರತೆಯು ದಾಳಿ ನಡೆಸಿದ ಪ್ರಕರಣದಿಂದ ಮೈಕೊಡವಿಕೊಂಡು ಎದ್ದಿರುವ ಅರಣ್ಯ ಮತ್ತು ಪೊಲೀಸ್ ಇಲಾಖೆಗಳು ಈ ಭಾಗದ ಬಸವನ ಕಾಡು ಸೇರಿದಂತೆ ಹಲವೆಡೆ ಗಸ್ತುಹಾಕುವ ಕ್ರಮಕ್ಕೆ ಮುಂದಾಗಿವೆ. ಇದು ನಿಜಕ್ಕೂ ಶ್ಲಾಘನೀಯ ಸಂಗತಿ. ಆದರೆ, ಏಕಪ್ರಕಾರವಾಗಿ/ಸತತವಾಗಿ ಹೀಗೆ ಸಿಬ್ಬಂದಿಯನ್ನು ಗಸ್ತುಕಾರ್ಯಕ್ಕೆ ನಿಯೋಜಿಸುವುದು ಕಾರ್ಯಸಾಧುವೇ/ಸಾಧ್ಯವೇ? ಇದಕ್ಕೂ ಮಿಗಿಲಾದ ಪರ್ಯಾಯ ದಾರಿಗಳೇನಾದರೂ ಇವೆಯೇ? ಎಂಬುದರ ಕುರಿತೂ ವಿಚಾರ-ವಿನಿಮಯ ನಡೆಯಬೇಕಿದೆ. ತೀರ್ಥಯಾತ್ರೆಗೆ ಕಾಡಿನ ಮೂಲಕ ಸಾಗುವವರಿಗೆ ವನ್ಯಜೀವಿಗಳು ಎದುರಾಗುವುದು ಸಹಜ; ಪುರಾಣದ ಕಥೆಗಳನ್ನು ಓದುವಾಗ ಇಂಥ ಸಾಕಷ್ಟು ಪ್ರಸಂಗಗಳು ನಮ್ಮ ಅರಿವಿಗೆ ಬರುವುದಿದೆ. ಆದರೆ, ಅಭಿವೃದ್ಧಿ ಚಟುವಟಿಕೆಗಳ ಹುಕಿಗೆ ಬಿದ್ದು ಮನುಷ್ಯನು ತಮ್ಮ ಸಹಜನೆಲೆಯನ್ನು ಅತಿಕ್ರಮಿಸಿರುವುದರ ಕಾರಣವಾಗಿಯೂ ವನ್ಯಪ್ರಾಣಿಗಳು ಕಂಗೆಟ್ಟು ಅಥವಾ ಆಕ್ರೋಶಗೊಂಡು ಹೀಗೆ ಮನುಷ್ಯರ ಮೇಲೆ ಎರಗುತ್ತಿವೆಯೇ? ಎಂಬ ಆಯಾಮದಲ್ಲೂ ನಾವೀಗ ಆಲೋಚನೆ ಮಾಡಬೇಕಾಗಿ ಬಂದಿದೆ. ಅರಣ್ಯಗಳಿಗೆ ತಾಗಿಕೊಂಡಂತಿರುವ ಊರುಗಳಲ್ಲಿ ಆನೆ, ಹುಲಿಗಳ ದಾಳಿಗಳು ನಡೆದಿರುವುದನ್ನೂ ನಾವು ಮಾಧ್ಯಮಗಳ ಮೂಲಕ ಕಂಡಿದ್ದೇವೆ. ಹೀಗಾಗಿ, ಮಲೆಮಹದೇಶ್ವರ ಸನ್ನಿಧಾನ ಸೇರಿದಂತೆ, ಜೀವಭಯದಲ್ಲೇ ತೆರಳಬೇಕಿರುವ ತೀರ್ಥಯಾತ್ರಾ ಕ್ಷೇತ್ರಗಳನ್ನು ಗುರುತುಮಾಡಿ ಜನರಿಗೆ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಏನೆಲ್ಲಾ ಶಾಶ್ವತ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದರ ಕಡೆಗೆ ಆಳುಗರು ಗಮನಹರಿಸಬೇಕಿದೆ...

## ಸೊಂಪಾದಕೀಯ

# ಸಿಕ್ಕಿ ಬಿದ್ದ ಸಿಕ್ಕಿಂ 'ದಂ'ಪತಿ

ಬೆಂಗಳೂರು ಅಂದ್ರೆ ಅದಕ್ಕೆ ಗಾರ್ಡನ್ ಸಿಟಿ ಎಂಬ ಹೆಸರಿದೆ ಅನ್ನೋದು ಎಲ್ಲರಿಗೂ ಗೊತ್ತು. ನಮ್ಮ ನಗರ ಟ್ರಾಫಿಕ್ ಜಾಮ್‌ಗೆ ಎಷ್ಟೇ ಹೆಸರುವಾಸಿಯಾಗಿದ್ದರೂ ಅದೇ ಟ್ರಾಫಿಕ್ ಜಾಮಿನಲ್ಲಿ ಅತ್ತಿತ್ತ ಕಣ್ಣಾಡಿಸಿದರೆ ಹಸಿರು ಗಿಡಗಳು ಕಾಣಿಸುವುದು ಗ್ಯಾರಂಟಿ. ಇದೇ ಕಾರಣಕ್ಕೆ ಅದೆಷ್ಟೇ ವೆಹಿಕಲ್‌ಗಳು ರಸ್ತೆ ತುಂಬಾ ಓಡಾಡಿದರೂ ಬೆಂಗಳೂರಿನ ವಾತಾವರಣ ದೆಹಲಿಯಷ್ಟು ಕಲುಷಿತಗೊಂಡಿಲ್ಲ. ಇನ್ನು ಕೇವಲ ರಸ್ತೆಗಳ ಅಕ್ಕ ಪಕ್ಕದಲ್ಲಿ ಅಷ್ಟೇ ಅಲ್ಲದೆ ಬೆಂಗಳೂರಿನ ಜನ ತಮ್ಮ ಮನೆಗಳಲ್ಲಿ ಕೂಡ ಗಿಡಗಳನ್ನು ಬೆಳೆಸುತ್ತಾರೆ. ಎಷ್ಟೇ ಆಧುನಿಕ ಮನೆಗಳಾದರೂ ಕನಿಷ್ಠಪಕ್ಷ ಟೆರೇಸಿನ ಮೇಲೆ, ಬಾಲ್ಕನಿಯಲ್ಲಿ ಪಾಟ್‌ಗಳಲ್ಲಿ ಗಿಡಗಳನ್ನು ಬೆಳೆಸುತ್ತಾರೆ. ಆದರೆ ಸಿಕ್ಕಿಂ ಮೂಲದ ಈ ದಂಪತಿ ಹೀಗೆಯೇ ಗಿಡಗಳನ್ನು ಬೆಳೆಸಿ ಪೊಲೀಸರ ಕೈಗೆ ಸಿಕ್ಕಿ ಬಿದ್ದ ಈ ಕಥೆ ಸುಮಾರು ಒಂದು ವರ್ಷ ಹಿಂದಿನದು. 'ಗಿಡ ಬೆಳೆಸಿದರೆ ಪೊಲೀಸರು ಅರೆಸ್ಟ್ ಮಾಡ್ತಾರಾ?' ಅಂತ ನೀವು ಕೇಳಬಹುದು. ಆದರೆ ಈ ದಂಪತಿ ಬೆಳೆಸಿದ್ದು ಮಾಮೂಲಿ ಗಿಡ ಅಲ್ಲ, ಅದು ಗಾಂಜಾ ಗಿಡ. 'ಫಾಸ್ಟ್ ಫುಡ್' ವ್ಯವಹಾರ ಮಾಡುವ ಈ ದಂಪತಿ 'ಫಾಸ್ಟ್ ದುಡ್' ಮಾಡುವ ಸಲುವಾಗಿ, ಗಾಂಜಾ ಗಿಡ ಮಾರಿ ಹಣ ಸಂಪಾದನೆ ಮಾಡಲು ಈ ಕೆಲಸ ಮಾಡಿದ್ದಾಗಿ ಒಪ್ಪಿಕೊಂಡರು ಎನ್ನಿ. ಅಷ್ಟೇ ಮಾಡಿದ್ದರೆ ಈ ದಂಪತಿ ಬಹುಶಃ ಪೊಲೀಸರ ಅತಿಥಿಗಳಾಗುತ್ತಿರಲಿಲ್ಲ. ಬಾಲ್ಕನಿಯಲ್ಲಿ ಬೆಳೆಸಿರುವ ಗಿಡಗಳನ್ನು ವಿಡಿಯೋ ಮಾಡಿ ಅದನ್ನು ಸೋಶಿಯಲ್ ಮೀಡಿಯಾದಲ್ಲಿ ಹಾಕಿದ್ದರಿಂದ ಅಲ್ಲಿದ್ದ ಗಾಂಜಾ ಗಿಡ ಕೂಡ ಅನೇಕರ ಕಣ್ಣಿಗೆ ಬಿತ್ತು. ಅದನ್ನು ನೋಡಿದ ಕೆಲವರು ಪೊಲೀಸರಿಗೆ ಈ ಬಗ್ಗೆ ಮಾಹಿತಿ ಕೊಟ್ಟರು. ಹಾಗಾಗಿ ಪೊಲೀಸರು ಕೂಡ ಈ ದಂಪತಿಯ ಮನೆಗೆ ಭೇಟಿ ಕೊಟ್ಟರು. ಪೊಲೀಸರು ಬರುವ ಮುನ್ನ ಸಂಬಂಧಿಕರೊಬ್ಬರಿಂದ ಮಾಹಿತಿ ಗೊತ್ತಾಗಿ ಗಾಂಜಾ ಗಿಡಗಳನ್ನು ಕಿತ್ತು ಬೇರೆಡೆ ಹಾಕಿದ್ದರು ಕೂಡ ಪಾಟ್‌ನಲ್ಲಿದ್ದ ಕೆಲವು ಎಲೆಗಳು ಅಲ್ಲಲ್ಲೇ ಬಿದ್ದಿದ್ದರಿಂದ ಈ ದಂಪತಿ ಅರೆಸ್ಟ್ ಆದರು. ಒಟ್ಟಿನಲ್ಲಿ ಈ ದಂಪತಿ ಕಿಕ್ ಕೊಡುವ 'ದಂ' ಆಸೆಗೆ ಬಿದ್ದು ಪೊಲೀಸರಿಂದ ಬಂಧನಕ್ಕೆ ಒಳಗಾಗಿದ್ದು ರಂಜನೀಯ ಸುದ್ದಿಯಾಗಿದ್ದಂತೂ ಹೌದು!

## ಸಂಪಾದಕರ ಸದ್ಯಶೋಧನೆ

# ಎಂ.ಜಿ.ದೇವಸಹಾಯಂ ಗೊತ್ತಾ?

ಎಂ.ಜಿ.ದೇವಸಹಾಯಂ ಹೆಸರು ಹೇಳಿದರೆ ನಿಮಗೆ ಏನು ನೆನಪಿಗೆ ಬರುತ್ತದೆ? ಈ ಪ್ರಶ್ನೆಗೆ ನಿಸ್ಸಂದೇಹದ ಉತ್ತರ- ತುರ್ತುಪರಿಸ್ಥಿತಿಯ ದಿನಗಳು. ನಿಜ, ಆ ದಿನಗಳಲ್ಲಿ ಅವರ ಹೆಸರು ಆಗಾಗ ಕೇಳಿಬರುತ್ತಿತ್ತು. ಕಾರಣ ಅವರು ಆ ಸಮಯದಲ್ಲಿ ಚಂಡೀಗಢದ ಜಿಲ್ಲಾಧಿಕಾರಿ (ಡಿಸಿ) ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿದ್ದರು. ಲೋಕನಾಯಕ ಜಯಪ್ರಕಾಶ್ ನಾರಾಯಣ್ (ಜೆಪಿ) ಅವರನ್ನು ತುರ್ತು ಪರಿಸ್ಥಿತಿಯ ವೇಳೆ ಚಂಡೀಗಢದಲ್ಲಿ ಬಂಧಿಸಿ ಇಡಲಾಗಿತ್ತು. ಆ ಸಂದರ್ಭದಲ್ಲಿ ಜೆಪಿ ಅವರ ಉಸ್ತುವಾರಿಯನ್ನು ನೋಡಿಕೊಳ್ಳುವ ಜವಾಬ್ದಾರಿ ದೇವಸಹಾಯಂ ಅವರ ಮೇಲಿತ್ತು. ಆಗ ಮುಖ್ಯಮಂತ್ರಿ ಬನ್ಸಿಲಾಲ್, ದೇವಸಹಾಯಂ ಅವರನ್ನು ಕರೆದು, ''ಆ ಮನುಷ್ಯ (ಜೆಪಿ) ತನ್ನನ್ನು ದೊಡ್ಡ ನಾಯಕ ಎಂದು ಭಾವಿಸಿದ್ದಾನೆ. ಆತ ಅಲ್ಲಿಯೇ ಬಿದ್ದಿರಲಿ. ಆತ ಯಾರನ್ನೂ ಭೇಟಿ ಮಾಡಲು ಅವಕಾಶ ನೀಡಬೇಡಿ, ಆತನಿಗೆ ಫೋನ್ ಕೂಡ ಕೊಡಬೇಡಿ'' ಎಂದು ಕಟ್ಟಪ್ಪಣೆ ನೀಡಿದ್ದರು. ಸರಕಾರದ ಕಠಿಣ ನಿಯಮಗಳ ನಡುವೆಯೂ ದೇವಸಹಾಯಂ, ಜೆಪಿ ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಅವರು ಕೇವಲ ಒಬ್ಬ ಅಧಿಕಾರಿಯಾಗಿರದೇ, ಜೆಪಿಗೆ ಬೌದ್ಧಿಕ ಸಾಂಗತ್ಯವನ್ನೂ ನೀಡಿದರು. ಆ ದಿನಗಳಲ್ಲಿ ಸರಕಾರಿ ಅಧಿಕಾರಿಗಳು ಕಾಂಗ್ರೆಸ್ ನಾಯಕರ ಚೇಲಾಗಳ ಹಾಗೆ ವರ್ತಿಸುತ್ತಿದ್ದರು. ಜೆಪಿಯವರಿಗೆ ರಹಸ್ಯವಾಗಿ ದೇವಸಹಾಯಂ ನೆರವಾಗುತ್ತಿದ್ದರು. ಜೆಪಿ ಅವರ ಆರೋಗ್ಯ ಹದಗೆಟ್ಟಾಗ, ಅವರಿಗೆ ಸರಿಯಾದ ಚಿಕಿತ್ಸೆ ಕೊಡಿಸಲು ಸರಕಾರದ ಕಟ್ಟುನಿಟ್ಟಿನ ನಿಯಮಗಳನ್ನು ಮೀರಿ ದೇವಸಹಾಯಂ ಶ್ರಮಿಸಿದ್ದರು. ಜೆಪಿ ಅವರು ತಮ್ಮ ದಿನಚರಿಯಲ್ಲಿ ದೇವಸಹಾಯಂ ಅವರ ಪ್ರಾಮಾಣಿಕತೆಯನ್ನು ಶ್ಲಾಘಿಸಿದ್ದರು. ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಒಬ್ಬ ಐಎಎಸ್ ಅಧಿಕಾರಿ ಹೇಗೆ ಮನುಷ್ಯತ್ವವನ್ನು ಉಳಿಸಿಕೊಳ್ಳಬಹುದು ಎಂಬುದಕ್ಕೆ ಇವರು ಮಾದರಿಯಾಗಿದ್ದರು ಎಂದು ಬರೆದಿದ್ದರು. ನಂತರದ ದಿನಗಳಲ್ಲಿ ದೇವಸಹಾಯಂ, ಜೆಪಿ ಕುರಿತು 'JP in Jail: An Unfinished Story' ಎಂಬ ಪ್ರಸಿದ್ಧ ಪುಸ್ತಕವನ್ನೂ ಬರೆದರು. ಅಷ್ಟೇ ಅಲ್ಲ, ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟವನ್ನು 'ಭಾರತದ ಎರಡನೇ ಸ್ವಾತಂತ್ರ್ಯ ಸಂಗ್ರಾಮ' ಎಂದು ಇವರು ಬಣ್ಣಿಸಿ, India's Second Freedom Struggle ಎಂಬ ಇನ್ನೊಂದು ಪುಸ್ತಕವನ್ನು ಸಹ ಬರೆದರು. ದೇವಸಹಾಯಂ ಅವರು ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯವರು. ತಮ್ಮ ವೃತ್ತಿಜೀವನವನ್ನು ಮೊದಲು ಭಾರತೀಯ ಸೇನೆಯಲ್ಲಿ ಆರಂಭಿಸಿದರು. 1964ರಿಂದ 1969ರವರೆಗೆ ಸೇನೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಇವರು, ಭಾರತ-ಪಾಕಿಸ್ತಾನ ಯುದ್ಧದಲ್ಲಿಯೂ ಪಾಲ್ಗೊಂಡಿದ್ದರು. ನಂತರ ಭಾರತೀಯ ಆಡಳಿತ ಸೇವೆಗೆ (ಐಎಎಸ್) ಆಯ್ಕೆಯಾಗಿ ಹರಿಯಾಣ ಕೆಡರ್‌ನಲ್ಲಿ ಅಧಿಕಾರಿಯಾಗಿ ನಿಯೋಜನೆಗೊಂಡರು. ಹರಿಯಾಣದಲ್ಲಿ ಅಧಿಕಾರಿಯಾಗಿದ್ದಾಗ ಅವರು ಭೂ ಸುಧಾರಣೆ, ನಗರಾಭಿವೃದ್ಧಿ ಮತ್ತು ಸಾರಿಗೆ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ತಂದರು. ಮುಖ್ಯವಾಗಿ ಚಂಡೀಗಢದ ಅಭಿವೃದ್ಧಿಯಲ್ಲಿ ಅವರ ಪಾತ್ರ ದೊಡ್ಡದಿದೆ. ಭ್ರಷ್ಟಾಚಾರದ ವಿರುದ್ಧ ರಾಜಿ ಮಾಡಿಕೊಳ್ಳದ ಅವರ ಗುಣವು ಅನೇಕ ಬಾರಿ ರಾಜಕಾರಣಿಗಳ ಕೆಂಗಣ್ಣಿಗೆ ಗುರಿಯಾಗುವಂತೆ ಮಾಡಿತು. ಐಎಎಸ್‌ನಿಂದ ನಿವೃತ್ತರಾದ ನಂತರ ದೇವಸಹಾಯಂ ವಿಶ್ರಮಿಸದೇ ಸಾರ್ವಜನಿಕ ಹೋರಾಟಗಳಲ್ಲಿ ತೊಡಗಿಸಿಕೊಂಡರು. ಭಾರತದ ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ಅವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಮುಖ್ಯವಾಗಿ ಇವಿಎಂ ಯಂತ್ರಗಳ ಕಾರ್ಯವೈಖರಿ ಮತ್ತು ವಿವಿ-ಪ್ಯಾಟ್ ಬಳಕೆಯ ಬಗ್ಗೆ ಅವರು ತಾಂತ್ರಿಕ ಮತ್ತು ಕಾನೂನಾತ್ಮಕ ಪ್ರಶ್ನೆಗಳನ್ನು ಎತ್ತುತ್ತಾ ಬಂದಿದ್ದಾರೆ. ತಮಿಳುನಾಡಿನಲ್ಲಿ ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ನಗರಾಭಿವೃದ್ಧಿಗಾಗಿ ಕೆಲಸ ಮಾಡುವ ಹಲವು ಸಂಘಟನೆಗಳೊಂದಿಗೆ ಅವರು ಗುರುತಿಸಿಕೊಂಡಿದ್ದಾರೆ. ಆಡಳಿತದಲ್ಲಿ ನೈತಿಕತೆ ಇರಬೇಕೆಂದು ಪ್ರತಿಪಾದಿಸುವ ಅವರು, ಸರಕಾರದ ತಪ್ಪು ನೀತಿಗಳನ್ನು ನಿರ್ಭೀತಿಯಿಂದ ಟೀಕಿಸುತ್ತಾರೆ. ದೇವಸಹಾಯಂ ಕೇವಲ ಅಧಿಕಾರಿಯಷ್ಟೇ ಅಲ್ಲ, ಅವರೊಬ್ಬ ಉತ್ತಮ ಲೇಖಕರೂ ಹೌದು. ಇಂಗ್ಲಿಷ್‌ನ ಪ್ರಮುಖ ರಾಷ್ಟ್ರೀಯ ಪತ್ರಿಕೆಗಳಲ್ಲಿ ಅವರು ಆಡಳಿತ, ರಾಜಕೀಯ ಮತ್ತು ನಾಗರಿಕ ಹಕ್ಕುಗಳ ಕುರಿತು ನಿಯತವಾಗಿ ಲೇಖನಗಳನ್ನು ಬರೆಯುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರಕಾರದ 'ಸ್ಮಾರ್ಟ್ ಸಿಟಿ' ಯೋಜನೆಯನ್ನು ಇವರು ತೀವ್ರವಾಗಿ ವಿಮರ್ಶಿಸಿದ್ದಾರೆ. ಅವರು ಇಂದಿಗೂ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದು, ವಯಸ್ಸಿನ ಹಂಗಿಲ್ಲದೇ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿದ್ದಾರೆ.

# ಕುರ್ಚಿಯು ಹೋಗಿ ಮುಟ್ಟಬೇಕಾದ ಜಾಗವಾಗಿದ್ದು ಹೇಗೆ?

**ನಾವು ತೀರಾ ಆದಿಮಾನವನ ಗುಂಪಿನ ಬದುಕಿನ ವಿವರ, ಇತಿಹಾಸ ನೋಡಿದರೆ ಕುರ್ಚಿ ಇಂದಿನಂತೆ ಎಲ್ಲರ ಪೀಠೋಪಕರಣವಾಗುವುದಕ್ಕಿಂತ ಮೊದಲೇ ಗದ್ದುಗೆ, ಸಿಂಹಾಸನವಾಗಿತ್ತು ಎನ್ನುವುದು ತಿಳಿಯುತ್ತದೆ. ಮೇಲೆ ಕೂರುವವರು ಮುಖಂಡ, ಹಿರಿಯ, ರಾಜ, ಪಾರೋ ಇತ್ಯಾದಿ. ಉಳಿದವರೆಲ್ಲ ನೆಲದ ಮೇಲೆಯೇ ಕೂರುತ್ತಿದ್ದರಲ್ಲವೇ. ಅಲ್ಲಿಂದ ಮುಂದೆ ಯಾರು ಎತ್ತರದಲ್ಲಿ ಕೂರುತ್ತಾರೋ ಅವರ ಮಾನ-ಮರ್ಯಾದೆ ಜಾಸ್ತಿ ಎಂದಾಯಿತು. ಯೋಗ್ಯತಾನುಸಾರ ಕುರ್ಚಿ.**

ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ಅವನಿಗೆ ಸುಸ್ತಾಗಿತ್ತು ಅಷ್ಟೇ. ಅವನೇನು ಜಗತ್ತನ್ನು ಬದಲಿಸಿಬಿಡುತ್ತೇನೆ ಎಂದು ಹೊರಟವನಲ್ಲ. ಅವನೊಬ್ಬ ಸಾಮಾನ್ಯ. ಕಾಲ್ನಡಿಗೆ ಅಂದು ಕೊಂಡದ್ದಕ್ಕಿಂತ ದೀರ್ಘವಾಗಿತ್ತು, ಹಾಗಾಗಿ ದಣಿವಾಗಿತ್ತು. ಮೊಣಕಾಲು ಸೋತುಹೋಗಿತ್ತು. ಇನ್ನು ನಡೆಯಲು ಸಾಧ್ಯವೇ ಇಲ್ಲ ಎನ್ನುವಾಗ ಅಲ್ಲಿಯೇ, ಪಕ್ಕದಲ್ಲೊಂದು ಚಿಕ್ಕ ಸಪಾಟು ಬಂಡೆಗಲ್ಲು. ಆ ಕಲ್ಲಿನ ಮೇಲಿನ ಧೂಳು, ಕಸಗಳನ್ನು ಸರಿಸಿ ಕುಳಿತುಕೊಂಡ. ಕಾಲು ನೀಡಿಸಿದ. ಅದೆಷ್ಟು ಆರಾಮ! ನೆಲದ ಮೇಲೆ ಕೂರುವುದಕ್ಕಿಂತ ಈ ರೀತಿ ಕಲ್ಲಿನ ಮೇಲೆ ಸ್ವಲ್ಪ ಎತ್ತರಕ್ಕೆ ಕೂರುವುದು ಹೆಚ್ಚು ಅನುಕೂಲ. ಅಷ್ಟರಲ್ಲಿ ಅವನು ಹಾಗೆ ಕೂತದ್ದನ್ನು ಇನ್ನೊಬ್ಬ ಕಂಡ. ಕುಳಿತುಕೊಳ್ಳಲು ಒಳ್ಳೆಯ ಉಪಾಯ.. ಎರಡನೆಯವನು ಗುಡಿಸಿಲಿನೊಳಗೆ ಚಪ್ಪಡಿ ಕಲ್ಲೊಂದನ್ನು ತಂದಿಟ್ಟುಕೊಂಡ. ಮೂರನೆಯವನು ಅದರ ಬೆನ್ನಿಗೆ ಆನಿಸಿಕೊಳ್ಳಲು ಇನ್ನೊಂದು ಕಲ್ಲನ್ನು ಸರಿಸಿಟ್ಟ. ಇನ್ನೊಬ್ಬ ಅದನ್ನೇ ಸ್ವಲ್ಪ ಎತ್ತರಕ್ಕೆ ಇರಿಸಿದ. ಹೀಗೆ- ಹೇಗೋ ಗೊತ್ತಿಲ್ಲ, ಕುರ್ಚಿಯೆಂಬ ಕುರ್ಚಿಯ ರೂಪಾಂತರಗಳ ಆವಿಷ್ಕಾರವಾಯಿತು!!

ನಾವು ತೀರಾ ಆದಿಮಾನವನ ಗುಂಪಿನ ಬದುಕಿನ ವಿವರ, ಇತಿಹಾಸ ನೋಡಿದರೆ ಕುರ್ಚಿ ಇಂದಿನಂತೆ ಎಲ್ಲರ ಪೀಠೋಪಕರಣವಾಗುವುದಕ್ಕಿಂತ ಮೊದಲೇ ಗದ್ದುಗೆ, ಸಿಂಹಾಸನವಾಗಿತ್ತು ಎನ್ನುವುದು ತಿಳಿಯುತ್ತದೆ. ಮೇಲೆ ಕೂರುವವರು ಮುಖಂಡ, ಹಿರಿಯ, ರಾಜ, ಪಾರೋ ಇತ್ಯಾದಿ. ಉಳಿದವರೆಲ್ಲ ನೆಲದ ಮೇಲೆಯೇ ಕೂರುತ್ತಿದ್ದರಲ್ಲವೇ. ಅಲ್ಲಿಂದ ಮುಂದೆ ಯಾರು ಎತ್ತರದಲ್ಲಿ ಕೂರುತ್ತಾರೋ ಅವರ ಮಾನ-ಮರ್ಯಾದೆ ಜಾಸ್ತಿ ಎಂದಾಯಿತು. ಯೋಗ್ಯತಾನುಸಾರ ಕುರ್ಚಿ.

ಮನೆಯಲ್ಲಿ, ಕಚೇರಿಗಳಲ್ಲಿ, ಕಾರ್ಯಕ್ರಮಗಳಲ್ಲಿ- ವೇದಿಕೆಯ ಮೇಲೆ, ವೇದಿಕೆಯ ಮುಂದೆ- ಕೆಳಗೆ. ಹೆಚ್ಚಿನ ಯೋಗ್ಯತೆಯ ಅತಿಥಿಗಳಿಗೆ ಸೋಫಾ. ಅಗಲದ ಕುರ್ಚಿಯ ಬಿಸಿನೆಸ್ ಕ್ಲಾಸಿನ ವಿಮಾನದ ಪ್ರಯಾಣಕ್ಕೆ ಮೂರ್ನಾಲ್ಕು ಪಟ್ಟು ಹಣ. ಮುಖ್ಯಮಂತ್ರಿಯ ಕುರ್ಚಿ, ಹೆಡ್‌ಮಾಸ್ತರ್ ಕುರ್ಚಿ, ಬಸ್ ಕಂಡಕ್ಟರಿನ ಚಿಕ್ಕ ಟ್ರಂಕ್- ಅದರಮೇಲೆ ತೆಳ್ಳಗಿನ ದಿಂಬು- ಸೀಟು, ಆಸ್ಪತ್ರೆಯ ಕಾರಿಡಾರಿನ ಕುರ್ಚಿ, ನ್ಯಾಯಾಧೀಶರ, ಸ್ವಾಮೀಜಿಗಳ ಪೀಠ, ಆರಾಮಕುರ್ಚಿ, ಸೆಕ್ಯುರಿಟಿ ಗಾರ್ಡಿನ ನೀಲ್‌ಕಮಲ್ ಕುರ್ಚಿ, ಯಕ್ಷಗಾನ ನಾಟಕ ಕಂಪನಿಗಳ ಕುರ್ಚಿ- ಎಲ್ಲಾ ಕುರ್ಚಿಗಳಿಗೂ ಅವುಗಳದ್ದೇ ಆದ ಜೀವವಿದೆ, ಬೆಲೆಯಿದೆ, ಶ್ರೇಣಿಯಿದೆ. ಸಿನಿಮಾ, ಕಾರ್ಯಕ್ರಮ, ಹೋಟೆಲ್ಲು, ಸ್ಟೇಡಿಯಂ, ಥಿಯೇಟರ್, ರೈಲು, ಬದುಕು ಎಲ್ಲೆಡೆಯೂ ನಾವು ಒಳ್ಳೆಯ ಕುರ್ಚಿ ಬಯಸುತ್ತೇವೆ, ಹುಡುಕುತ್ತೇವೆ. ಸನ್ಯಾಸ ಪಡೆದ ಸ್ವಾಮೀಜಿಗಳ ಮಧ್ಯೆ ಯಾರ ಪೀಠ ಎತ್ತರಕ್ಕಿಡಬೇಕು ಎಂಬ ವಿಷಯದಲ್ಲಿ ಮನಸ್ತಾಪ-ಜಗಳವಾಗುತ್ತವೆ, ಶತಮಾನಗಳ ಕಾಲ ವೈಮನಸ್ಸು ಮುಂದುವರಿಯುತ್ತದೆ. ಇಷ್ಟಾಗಿ ಈಗ ಮನುಕುಲಕ್ಕೆ ಕುರ್ಚಿಯದೇ ಸಮಸ್ಯೆ, ಶಾಪ! ಇಂದಿನ ವಿಜ್ಞಾನಿಗಳು, ನರ ಮೂಳೆ ತಜ್ಞರು ಹೇಳುವುದು Sitting is new smoking. ಅವರ ಪ್ರಕಾರ ಇಡೀ ದಿನ ಕುಳಿತುಕೊಳ್ಳುವುದು ದಿನಕ್ಕೆ ನಾಲ್ಕು ಬೀಡಿ-ಸಿಗರೇಟು ಸೇದಿದ್ದಕ್ಕೆ ಸಮಾನವಂತೆ! ಸೌಕರ್ಯಕ್ಕೆ ಹುಟ್ಟಿದ ಕುರ್ಚಿ ಮೊದಲಿನಿಂದಲೂ ಅಧಿಕಾರ, ಘನತೆಯ ವಿಷಯವಾಗಿ ಅನಾದಿ ಕಾಲದಿಂದ ಮುಂದುವರಿದು ಬಂದಿರುವುದು ವಿಚಿತ್ರವಂತೂ ಹೌದಲ್ಲವೇ? ಪತಂಜಲಿಯು 'ಸ್ಥಿರಂ ಸುಖಂ ಆಸನಂ' ಎಂದು ಸುಮ್ಮನಾದ. ಆದರೆ ಅಲ್ಲಿಂದಿಲ್ಲಿಯವರೆಗೂ ಕುರ್ಚಿ ಸ್ಥಿರವೂ ಅಲ್ಲ, ಶಾಶ್ವತದ ವಿಷಯವೂ ಅಲ್ಲ, ಸುಖದ ವಿಷಯವೂ ಅಲ್ಲ. ಕುರ್ಚಿ ಒಂದು destinationಗೆ ಹೋಗಿ ಮುಟ್ಟಬೇಕಾದ ಜಾಗ, ಸ್ಥಾನ. ಕುರ್ಚಿಯು ಕೂತವನನ್ನೇ ಬದಲಿಸಿಬಿಡುತ್ತದೆ!

ಒಮ್ಮೆ ಸ್ವಲ್ಪ ನಿಧಾನಿಸಿ ಯೋಚಿಸಿ ನೋಡಿ. ಅನುಕೂಲಕ್ಕೆ, ಸೌಲಭ್ಯಕ್ಕೆ ಹುಟ್ಟಿದ ಮುಗ್ಧವೆನಿಸುವ ವಸ್ತುಗಳು ಹೀಗೆ ನಮ್ಮನ್ನು ಚಿತ್ರ ವಿಚಿತ್ರವಾಗಿ ಆವರಿಸಿಕೊಂಡುಬಿಡುತ್ತವೆ ಅಲ್ಲವೇ?

ಸಮಯ- ಟೈಮ್ ಕೂಡ ಹಾಗೆಯೇ. ಮನುಷ್ಯನ- ಹೋಮೋ ಸೇಪಿಯನ್ನಿನ ಪೂರ್ಣ ಇತಿಹಾಸ ತೆಗೆದುಕೊಂಡರೆ ಅದರ ಬಹುತೇಕ ಭಾಗ ಯಾರೂ 'ಟೈಮ್ ಎಷ್ಟಾಯ್ತು?' ಎಂದು ಕೇಳಿಯೇ ಇಲ್ಲ. ಅವರಿಗೆಲ್ಲರಿಗೂ 'ಸಮಯ ಎಷ್ಟು' ಎನ್ನುವುದೇ ಅರ್ಥವಿಲ್ಲದ ಪ್ರಶ್ನೆಯಾಗಿತ್ತು. ಬೆಳಕಾದಾಗ ಏಳುತ್ತಿದ್ದರು, ಹಸಿವಾದಾಗ ತಿನ್ನುತ್ತಿದ್ದರು, ಸುಸ್ತಾದಾಗ ಕೆಲಸ ನಿಲ್ಲಿಸುತ್ತಿದ್ದರು, ಕತ್ತಲಾದಾಗ ಮಲಗುತ್ತಿದ್ದರು. ಸಿಂಪಲ್. ಈ ರೀತಿ- ಬೆಳಕಿಗೆ ತಕ್ಕಂತೆ ಇದ್ದ ಮನುಷ್ಯನ ಬದುಕಿನಲ್ಲಿ ಅದ್ಯಾವುದೋ ಒಂದು

ದಿನ, ಗಳಿಗೆ- ಯಾರೋ ಒಬ್ಬ ಪುಣ್ಯಾತ್ಮನಿಗೆ ದಿನವನ್ನು ತುಂಡುತುಂಡಾಗಿ ನೋಡುವ ಕಲ್ಪನೆಯೊಂದು ಹುಟ್ಟಿಕೊಂಡಿತು. ಬಹುಶಃ ಸಂಘಜೀವನದಲ್ಲಿ, ಬದುಕಿನಲ್ಲಿ ಕೆಲಸಗಳ ಸಮನ್ವಯಕ್ಕೆ (coordination) ಅವಶ್ಯಕತೆಯೆನಿಸಿರಬೇಕು. ಬೆಳಗ್ಗೆ ಬರುತ್ತೇನೆ, ಮಧ್ಯಾಹ್ನ ಕೊಡುತ್ತೇನೆ ಎಂಬಿತ್ಯಾದಿ ವ್ಯವಹಾರಕ್ಕೆ ಶುರುವಾಗಿದ್ದಿರಬೇಕು. ಈಗ? ಸಮನ್ವಯಕ್ಕಿದ್ದ ಸಮಯ ಈಗ ಇಡೀ ಮನುಷ್ಯಕುಲವನ್ನೇ ನಿಯಂತ್ರಿಸುತ್ತದೆ.

ದಿನನಿತ್ಯದ ಬಹುಪಾಲು ಕೆಲಸವನ್ನು ಯಾವಾಗ ಆರಂಭಿಸಬೇಕು, ಯಾವಾಗ ಮುಗಿಸಬೇಕು ಎಂದು ನಿರ್ಧರಿಸುವುದು ನಾವಲ್ಲ- ಗಡಿಯಾರ! ಆದರೆ ಇವತ್ತಿಗೂ ಹಳ್ಳಿಗಳಲ್ಲಿ ಹೆಚ್ಚಿನ ಮಾತುಕತೆಗಳು ಯಾಮ-ಜಾವದ ಲೆಕ್ಕದಲ್ಲಿಯೇ ಇರುತ್ತವೆ. ಆದರೆ ಹಳ್ಳಿಯಿಂದ ಪೇಟೆಗೆ, ಪೇಟೆಯಿಂದ ಮಹಾನಗರಕ್ಕೆ ಹೀಗೆ ಆಧುನಿಕತೆಯ ಮೇಲುಸ್ತರಕ್ಕೆ ಏರಿದಂತೆಲ್ಲ, ಮನುಷ್ಯನ ಬದುಕಿನ ಮೇಲಿನ ಸಮಯದ ಹಿಡಿತ ಬಿಗುವಾಗುತ್ತಾ ಹೋಗುತ್ತದೆ. ಯಾಮದ ಲೆಕ್ಕದ ನಮ್ಮೂರಿಗೆ ಸರಕಾರಿ ಬಸ್ಸು, ಗಂಟೆಗಳ ಲೆಕ್ಕದ ನಿಖರತೆಯಲ್ಲಿ ಬಂದುಹೋಗುತ್ತದೆ. ಅತ್ತ ಜಪಾನಿನಲ್ಲಿ ರೈಲು ಸೆಕೆಂಡುಗಳ ನಿಖರತೆಯಲ್ಲಿ ಚಲಿಸುತ್ತದೆ. ಅದರರ್ಥ ರೈಲಿನಲ್ಲಿ ಹೋಗುವ ಪ್ರಯಾಣಿಕರಿಂದ ಹಿಡಿದು ಆ ಇಡೀ ವ್ಯವಸ್ಥೆ ಸೆಕೆಂಡುಗಳ ನಿಖರತೆಗೆ ಹೊಂದಿಕೊಳ್ಳಬೇಕಾಯ್ತು.

ಸಮಯಕ್ಕೆ ತಕ್ಕಂತೆ ನಡೆದುಕೊಳ್ಳದಿದ್ದರೆ 'ಟೈಮ್ ಸೆನ್ಸ್?' ಇಲ್ಲವೇ ಎಂದು ಕೇಳುತ್ತೇವೆ. ಸೆನ್ಸ್- ಸಮಯ ಒಂದು ಭಾವ! ನಾವೆಲ್ಲರೂ ಸಮಯವನ್ನು ನಿರಂತರ ಭಾವನಾತ್ಮಕವಾಗಿ ಅನುಭವಿಸುತ್ತಿರುತ್ತೇವೆ. ಎಷ್ಟು ಹೊತ್ತಿಗೂ ಸಮಯದ ಪರಿವೆಯನ್ನಿಟ್ಟೇ ಬದುಕುತ್ತೇವೆಯಲ್ಲ. ಸಮಯ ನೋಡಿದಾಗಲೆಲ್ಲ ಒಂದೋ ಇನ್ನಷ್ಟು ಸಮಯವಿದೆ ಎಂದೆನಿಸುತ್ತದೆ, ಇಲ್ಲವೇ ತಡವಾಯ್ತು ಎಂದೆನಿಸುತ್ತದೆ. ಕೈಗಾರಿಕೆ ಬೆಳೆದಂತೆ ಶಿಫ್ಟು, ಡೆಡ್‌ಲೈನ್, ಉತ್ಪಾದಕತೆ ಏನೇನೋ ಬೆಳೆದು, ಬದಲಾಗಿ ಈಗ ಸಮಯವನ್ನು 'ಉಳಿತಾಯ' ಮಾಡಬೇಕು. 'ಸದ್ಬಳಕೆ' ಮಾಡಬೇಕು ಎನ್ನುವಲ್ಲಿಗೆ ಬಂದು ಮುಟ್ಟಿದ್ದೇವೆ.

ಅನಂತ ಅಂಬಾನಿಯ ದುಬಾರಿ ಕೋಟಿ ಬೆಲೆಯ ವಾಚಿಗೆ ಉಸೇನ್ ಬೋಲ್ಟ್‌ನ ಓಟದ ವೇಗ ಅಳೆಯಲಿಕ್ಕಾಗುವುದಿಲ್ಲ. ಸಮಯ- ಗಡಿಯಾರ ಇವತ್ತು ಪ್ರತಿಯೊಬ್ಬನನ್ನೂ ಅಳೆಯುತ್ತದೆ. ಅಂಥ ಟೈಮ್- ಸಮಯ ವಿಜ್ಞಾನಿಗಳ ಪ್ರಕಾರ ನಾವಂದುಕೊಂಡಷ್ಟು ಪಾಪದ್ದಲ್ಲ. ಸಮಯ ಕೆಲವು ವಿಶೇಷ ಸ್ಥಿತಿಗಳಲ್ಲಿ 'ಬಾಗುತ್ತದೆ', 'ಹಿಗ್ಗುತ್ತದೆ'. ಐನ್‌ಸ್ಟೀನ್ ಪ್ರಕಾರ ಬೆಳಕಿನಷ್ಟು ವೇಗದಲ್ಲಿ ಪ್ರಯಾಣಿಸಿದರೆ ಪ್ರಯಾಣಿಕನ ಸಮಯ ನಿಧಾನವಾಗುತ್ತದೆ. ಬ್ಲಾಕ್ ಹೋಲ್- ಕಪ್ಪು ರಂಧ್ರದ ಹೊರಮೈ ಪ್ರವೇಶಿಸುತ್ತಿದ್ದಂತೆ ಸಮಯವೇ ನಿಂತುಹೋಗುತ್ತದೆ! ಇದೆಲ್ಲದರ ನಡುವೆ ಅಮೆರಿಕ ಮೊದಲಾದ ದೇಶಗಳಲ್ಲಿ ವರ್ಷಕ್ಕೆರಡು ಬಾರಿ ಸಮಯವನ್ನೇ ಒಂದೆರಡು ತಾಸು ಹಿಂದೆ ಮುಂದೆ ಮಾಡುವ ಪದ್ಧತಿಯಿದೆ!!

ಟೈಮ್ ನೋಡಿ, ಸಮಯದ ಪ್ರಕಾರ ಬದುಕಬೇಕು ಎನ್ನುತ್ತಾರೆ. ಆದರೆ ಕೈಗಡಿಯಾರದ ಪ್ರಕಾರ ನಡೆದುಕೊಳ್ಳ ಬಾರದು ಎನ್ನುವವರೂ ಇದ್ದಾರೆ. ನೀವು ತೂಕ ಇಳಿಸಬೇಕು, ಆರೋಗ್ಯ ಸರಿಮಾಡಿಕೊಳ್ಳಬೇಕು, ಸರಿಯಿಟ್ಟುಕೊಳ್ಳಬೇಕು ಎಂದು ಡಯೆಟಿಷಿಯನ್ ಬಳಿ ಹೋಗಿ- ಅವರು ಹೇಳುವುದು ಸೂರ್ಯಾಸ್ತಕ್ಕಿಂತ ಮೊದಲು ತಿನ್ನಬೇಕು, ಹಸಿವೆಯಾದಾಗಷ್ಟೇ ತಿನ್ನಬೇಕು, ನಡುನಡುವೆ ಒಂದಿಷ್ಟು ಹೊತ್ತು, ದೇಹಕ್ಕೆ ಆಹಾರ ಕೊಡದೆ ಕೃತಕವಾಗಿ ಉಪವಾಸ ಬೀಳಿಸಬೇಕು. ಇನ್ನು ಮಾನಸಿಕ, ನರತಜ್ಞರು ಕತ್ತಲಾದಮೇಲೆ ಬೆಳಕು ಕಡಿಮೆ ನೋಡಬೇಕು, ಮಲಗುವುದಕ್ಕಿಂತ ಮೊದಲು ಮೊಬೈಲ್ ನೋಡಬಾರದು, ನೀಲಿಬೆಳಕು ನೋಡಬಾರದು, ವಿದ್ಯುತ್ ದೀಪ ನಿದ್ರೆಗೆ ಒಳ್ಳೆಯದಲ್ಲ, ಬೆಳಗಿನ ಜಾವ, ಸಂಜೆ ಸೂರ್ಯನ ಬೆಳಕು ಒಂದರ್ಧ ಗಂಟೆ ನೋಡಬೇಕು, ನೋಡಿದರೆ ಸೆರೆಟೋನಿನ್ ಇತ್ಯಾದಿ ಸರಿಯಾಗಿ ಬಿಡುಗಡೆಯಾಗುತ್ತದೆ. ಆಗ ನಿದ್ರೆ ಪರಿಪೂರ್ಣವಾಗುತ್ತದೆ. ಇಂದಿನ ವಿಜ್ಞಾನ ಕಾಡಿನಲ್ಲಿ ಆದಿ ಮಾನವನಂತೆ ಬದುಕುವುದೇ ಅತ್ಯಂತ ಆರೋಗ್ಯಕರ ಎಂದು ಹೇಳುವುದೊಂದು ಬಾಕಿಯಿದೆ. ಇರಲಿ, ಅಲ್ಲಿಗೆ ಸಮಯ- ಟೈಮ್ ಅನ್ನು ನಾವು ಕಂಡುಹಿಡಿದು ಶತಮಾನಗಳೇ ಕಳೆದಿದ್ದರೂ ನಮ್ಮ ದೇಹ ಮಾತ್ರ ಸೂರ್ಯನ ಬೆಳಕಿನ ಲೆಕ್ಕದಲ್ಲಿ ತನ್ನೊಳಗೆ ಬೇರೆಯದೇ ಗಡಿಯಾರ- ಟೈಮ್ ಇಟ್ಟುಕೊಂಡಿದೆ, ಅದರಂತೆ ದೇಹವನ್ನು ನಿರ್ವಹಿಸುತ್ತದೆ. ಈ ಮನುಷ್ಯಕೃತ ಗಡಿಯಾರದ ಸಮಯ ಮತ್ತು ದೇಹದ ಅಂತರ್ ಸಮಯ circadian rhythm ಸ್ವಲ್ಪವೇ ವ್ಯತ್ಯಾಸವಾದಾಗ ನೇರ ಅಡ್ಡಪರಿಣಾಮ.

ನನಗೆ ಎಲ್ಲಿಲ್ಲದಷ್ಟು ವಿಚಿತ್ರವೆನಿಸುವ ಇನ್ನೊಂದು- ಬೂಟು, ಷೂ, ಚಪ್ಪಲಿಗಳದ್ದು. ಯಾವುದೋ ಒಂದು ಕಾಲದಲ್ಲಿ ಕಲ್ಲು ಮುಳ್ಳುಗಳಿಂದ, ಹಾವು ಹರಣೆಗಳಿಂದ, ಚಳಿ, ಸುಡುವ ಬಿಸಿಲು- ಒಟ್ಟಾರೆ ಕಾಲಿನ ರಕ್ಷಣೆಗೆ ಆವಿಷ್ಕಾರವಾಗಿದ್ದು ಪಾದರಕ್ಷೆ. ಎಷ್ಟು ಮಹತ್ವದ ಆವಿಷ್ಕಾರ ಯೋಚಿಸಿ. ಚಪ್ಪಲಿ ಮನುಷ್ಯನಿಗೆ ಚಲನೆ ಕೊಟ್ಟಿತು. ಖಂಡಾಂತರ ನಡೆದು ವಲಸೆ ಹೋಗುವಷ್ಟು ಶಕ್ತಿತುಂಬಿಬಿಟ್ಟಿತು. ಈಗ ಬರಿಕಾಲಲ್ಲಿ ನಾಲ್ಕು ಹೆಜ್ಜೆ ಮಣ್ಣು ದಾರಿಯಲ್ಲಿ ನಡೆದು ನೋಡಿ. ಅಭ್ಯಾಸವಿದ್ದರೆ ಸರಿ- ನೀವು ಪೇಟೆಜೀವಿಯಾಗಿದ್ದಲ್ಲಿ ಕುಂಟುತ್ತ ಹಾರುತ್ತ ಆರು ಹೆಜ್ಜೆ ದಾಟಲಿಕ್ಕಾಗುವುದಿಲ್ಲ. ಆದರೆ ಈಗ ಪಾದರಕ್ಷೆ ರಕ್ಷಣೆಯ ವಿಷಯವಾಗಿಯೇ ಉಳಿದಿಲ್ಲ. ಚಪ್ಪಲಿಗೊಂದು ಜಾಗವಿದೆ ಎನ್ನುತ್ತೇವೆ. ಆದರೆ ಚಪ್ಪಲಿಗಳ ನಡುವೆಯೇ ಅವುಗಳಿಗೆ ಪ್ರತ್ಯೇಕ ಜಾಗಗಳಿವೆ. ಪ್ಯಾರಗಾನ್, ಬಾಟಾ, ನೈಕಿ, ಆದಿದಾಸ್, ಸ್ಕೆಚರ್, ಗುಚ್ಚಿ, ಪ್ರಡಾ, ಬೆಲೆನ್ಸಿಯಾಗ. ಸರಿಯೋ ತಪ್ಪೋ, ಪಾದರಕ್ಷೆ ನೋಡಿ ವ್ಯಕ್ತಿಯನ್ನು ಅಳೆಯುವುದು ಅತ್ಯಂತ ಸಹಜ ಮತ್ತು ಸಾಮಾನ್ಯ ಮನುಷ್ಯ ಗುಣ. ಯಾಕೋ ಗೊತ್ತಿಲ್ಲ.

ನನಗೆ ಬಹಳ ವಿಚಿತ್ರವೆನಿಸುವ ಇನ್ನೊಂದು ವಿಷಯ ಬ್ಯಾಗ್- ಚೀಲ ಬೆಳೆದು ಬಂದ ರೀತಿ. ಅನಾದಿ ಕಾಲದಲ್ಲಿ, ಯಾವುದೋ ಪುಣ್ಯಾತ್ಮನಿಗೆ ವಸ್ತುಗಳನ್ನು ಒಯ್ಯಲು ಚೀಲ ಅವಶ್ಯಕತೆಯೆನಿಸಿತು. ಚೀಲ, ಪಾದರಕ್ಷೆ ಇವೆಲ್ಲ ಯಾವುದೋ ಒಂದು ದಿನ ಆವಿಷ್ಕಾರವಾದ ವಸ್ತುಗಳಲ್ಲ ಎನ್ನುವುದು ಗೊತ್ತು. ಅವು ನಿಧಾನಕ್ಕೆ ಬದಲಾವಣೆಗೊಳ್ಳುತ್ತ ರೂಪ ಪಡೆದವು. ಮೊದಲು ಬೊಗಸೆಗೆ ಎಲೆಯ ಬಳಕೆ, ನಂತರ ಚರ್ಮದ, ಹುಲ್ಲಿನ ಚೀಲ, ಬಟ್ಟೆಯ ಚೀಲ, ಕೈಚೀಲ ಇತ್ಯಾದಿ. ಇತ್ತೀಚೆಗೆ ಶಿಕಾಗೋ ನಗರದಲ್ಲಿರುವ ಲೂಯಿ ವಿಟ್ಟೋನ್ ಅಂಗಡಿಗೆ ಹೋಗಿದ್ದೆ. ಅಲ್ಲಿ ಮಹಿಳೆಯರ ಹ್ಯಾಂಡ್‌ಬ್ಯಾಗ್ ಒಂದನ್ನು ಪ್ರದರ್ಶನಕ್ಕಿಟ್ಟಿದ್ದರು. ನಾಲ್ಕು ಪಾರ್ಲೆ-ಜಿ ಪ್ಯಾಕೆಟ್ ಇಡುವಷ್ಟು ದೊಡ್ಡದು. ಬೆಲೆ? ಮೂರುವರೆ ಸಾವಿರ ಡಾಲರ್ - ಮೂರ್ನಾಲ್ಕು ಲಕ್ಷ ರುಪಾಯಿ. ನಾನು ಕೂಡ ಬ್ರಾಂಡೆಡ್ ವಸ್ತುಗಳನ್ನು ಬಳಸುತ್ತೇನೆ. ಆದರೆ ಹತ್ತಿಪ್ಪತ್ತು ಲಕ್ಷ ರೂಪಾಯಿಯ ಬ್ಯಾಗ್, ಸೂಟ್‌ಕೇಸ್? ಇವುಗಳ ಎದುರು ನಿಂತು ನೋಡುವಾಗ ''ಅಷ್ಟಕ್ಕೂ ಮನುಷ್ಯ ಬ್ಯಾಗ್‌ಗಳನ್ನು ಆವಿಷ್ಕರಿಸಿದ್ದೇಕೆ? ಅವಶ್ಯಕತೆಯೇನು?'' ಎಂಬ ಪ್ರಶ್ನೆ ನೆನಪಾದರೆ ಗಲಿಬಿಲಿಯಾಗುತ್ತದೆ! ವಸ್ತುಗಳು ಅಳತೆಗೋಲುಗಳಾಗಿವೆ. ಡಿಕೆಶಿ ಎರಡೂವರೆ ಲಕ್ಷದ ಲೂಯಿ ವಿಟ್ಟೋನ್ ಶಾಲು ಹೊದೆಯುತ್ತಾರೆ. ಡೊನಾಲ್ಡ್ ಟ್ರಂಪ್ ಹಾಕಿಕೊಳ್ಳುವ ನೀಲಿ ಬಣ್ಣದ ಕೋಟು- ಇಟಾಲಿಯನ್ ಬ್ರಿಯೋನಿಗೆ- ಹತ್ತಿರತ್ತಿರ ಮೂವತ್ತೆರಡು ಲಕ್ಷ ರೂಪಾಯಿ.

ಬಟ್ಟೆ, ಶೂ, ಬೆಲ್ಟು, ಆಭರಣ, ಹ್ಯಾಂಡ್‌ಬ್ಯಾಗ್, ಕೈಚೀಲ, ಮೊಬೈಲ್, ಕನ್ನಡಕ, ಟಿವಿ ಇವೆಲ್ಲವೂ ತಮ್ಮ ತಮ್ಮದೇ ಲೋಕಗಳನ್ನು ಸೃಷ್ಟಿಸಿಕೊಂಡಿವೆ ಎನ್ನುತ್ತಾರೆ. ಒಂದೊಂದರದೂ ಒಂದೊಂದು ಲೋಕ ನಿಜ. ಆದರೆ ಇವು ಭೌತಿಕ ಲೋಕಗಳಲ್ಲ, ಅವೆಲ್ಲವೂ ಸೃಷ್ಟಿಯಾಗಿರುವುದು, ನೆಲೆನಿಂತಿರುವುದು ನಮ್ಮ ನಿಮ್ಮ ಎಲ್ಲರ ಮನಸ್ಸಿನಲ್ಲಿ, ಅಮೂಲ್ಯವೆನ್ನುವ ನಂಬಿಕೆಯ ಮೇಲೆ. ಹಾಗೆ ನೋಡಿದರೆ ಈ ರೀತಿಯ ಕಲ್ಪನೆಯ ಬೆಲೆ- ನಂಬಿಕೆಗಳ ಮೇಲೆಯೇ ನಮ್ಮ ಇಡೀ ವ್ಯವಸ್ಥೆ ನಿಂತಿದೆ. ಸ್ಟಾಕ್ ಮಾರ್ಕೆಟ್‌ನಿಂದ ಸಾಮಾನ್ಯ ರುಪಾಯಿ ನೋಟಿನವರೆಗೆ. ಬೆಲೆ ಇದೆ ಎಂದು ಎಲ್ಲರೂ ನಂಬಿಕೊಂಡರೆ ಮಾತ್ರ ಬೆಲೆ. ನೋಟಿನ ಮೇಲೆ ಬರೆದಿರುತ್ತಾರೆ ನೋಡಿ- I promise to pay the bearer the sum of hundred rupees. ಏನರ್ಥ. ಈ ನೋಟಿಗೆ ನೂರು ರೂಪಾಯಿಯ ಬೆಲೆ ನನ್ನ ಭರವಸೆ. ಆರ್‌ಬಿಐ ಗವರ್ನರ್ ಹೀಗೆ ಬರೆದು ಸಹಿ ಹಾಕುವುದು ಆ ನಂಬಿಕೆಗೆ.

ಸದ್ಯದ ವ್ಯವಸ್ಥೆಯಲ್ಲಿ- ಇಡೀ ಆರ್ಥಿಕತೆ, ಸ್ಟಾಕ್ ಮಾರ್ಕೆಟ್, ಜಾಗತಿಕ ಆರ್ಥಿಕತೆ ಎಲ್ಲವೂ ಭಗವಾನ್ ಭರೋಸಾ- ಕಲ್ಪಿತ ಸಾಮೂಹಿಕ ಭರವಸೆಯ ಮೇಲೆಯೇ ನಿಂತಿದೆ, ನಡೆಯುತ್ತದೆ. ಅವು ಅವೈಜ್ಞಾನಿಕ ಎನ್ನುತ್ತಿಲ್ಲ- ಬದಲಿಗೆ ಗ್ರಹಿಸಬೇಕಾದ ವಿಷಯವೆಂದರೆ ಹಣ, ಅಂಕಿ-ಸಂಖ್ಯೆ ಇವೆಲ್ಲ ಹೇಗೆ ನಮ್ಮನ್ನಾವರಿಸಿವೆ ಎನ್ನುವುದನ್ನು. ಅವು ಬಹುತೇಕ ನಮ್ಮ ಹಿಡಿತದಲ್ಲಿಯೇ ಇಲ್ಲ, ಅವುಗಳ ಹಿಡಿತದಲ್ಲಿ ನಾವಿದ್ದೇವೆ. ಯಾವಾಗ ರಿಸೆಶನ್- ಆರ್ಥಿಕ ಮುಗ್ಗಟ್ಟು ಬರಬಹುದು, ಮಾರ್ಕೆಟ್ ನೆಲಕಚ್ಚಬಹುದು- ಯಾರಿಗೂ ನಿಖರತೆ ಇಲ್ಲ. ಗಾಳಿ ಬೀಸಿದಂತೆ, ಟ್ರಂಪ್, ಮೋದಿ- ಯಾರೋ ಹೇಳಿಕೆ ಕೊಟ್ಟಂತೆ, ಯಾರದೋ ನಂಬಿಕೆ ಬದಲಾದಂತೆ ಈ ಅಂಕಿ-ಸಂಖ್ಯೆಗಳು ಹೆಚ್ಚು ಕಡಿಮೆಯಾಗಿ ಯಾರೋ ಕೆಲಸ ಕಳೆದುಕೊಳ್ಳಬಹುದು, ಇನ್ಯಾರೋ ದುಡ್ಡು, ಉಳಿತಾಯ ಕಳೆದುಕೊಳ್ಳಬಹುದು, ಯಾರೋ ಎಲ್ಲೋ ನಿರ್ಗತಿಕರಾಗಿಬಿಡಬಹುದು!

ಅದೆಲ್ಲ ಇರುವುದೇ ಹೀಗೆ. ಸಮಾಜ ಪ್ರತಿಯೊಂದು ವಸ್ತು, ವಿಷಯ, ನಂಬಿಕೆಗಳಿಗೆ ಒಂದು ಬೆಲೆ ಕಟ್ಟಿರುತ್ತದೆ. ಅದು ಸರಕಾರಿ ನಿಗದಿತ ಬೆಲೆ. ಹಾಗಾಗಿ ಅದುವೇ ನಮ್ಮ ವ್ಯಾವಹಾರಿಕ ಬೆಲೆ ಆಗಬೇಕೆಂದೇನಿಲ್ಲ. ಆದರೆ ನಾವೆಲ್ಲರೂ ಅದ್ಯಾವುದೋ ಒಂದಿಷ್ಟು compulsion ಒತ್ತಾಯದ ನಂಬಿಕೆಗೆ ಗಂಟುಬಿದ್ದು ಬದುಕನ್ನು ಇನ್ನಷ್ಟು ಸಂಕೀರ್ಣವಾಗಿಸಿ ತಲೆಬಿಸಿ ಮಾಡಿಕೊಂಡು ಬದುಕುತ್ತಿರುತ್ತೇವೆ!

# ವರ್ಷದೊಳಗೆ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಕಣ್ಮರೆ?!

**ಕೃತಕ ಬುದ್ಧಿಮತ್ತೆಯ ಟೂಲ್‌ಗಳ ಪರಿಣಾಮ, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಾಂಪ್ರದಾಯಿಕ ಆದಾಯ ಮೂಲಗಳು ಬತ್ತಿಹೋಗುವ, ಆರ್ಡರ್‌ಗಳೇ ಸಿಗದಿರುವ ಭೀತಿ ಉಂಟಾಗಿದೆ. ಐಟಿ ಸೆಕ್ಟರ್ ಎಂದರೆ ಕಾರ್ಮಿಕ ಕೇಂದ್ರಿತ ಹೊರಗುತ್ತಿಗೆಯ ಸೇವೆಗಳನ್ನು ನೀಡುವಂಥದು. ಅವುಗಳೇ ಐಟಿ ಕಂಪನಿಗಳ ಆದಾಯ ಮೂಲ. ಆದರೆ ಎಐ ಟೂಲ್‌ಗಳು ಅಗ್ಗದ ವೆಚ್ಚದಲ್ಲಿ ಸಾಫ್ಟ್‌ವೇರ್ ಕೋಡಿಂಗ್ ಸೇರಿದಂತೆ ಎಲ್ಲ ಕೆಲಸಗಳನ್ನೂ ಮಾಡಬಲ್ಲವು. ಇದರಿಂದ ಐಟಿ ಕಂಪನಿಗಳ ಅಸ್ತಿತ್ವಕ್ಕೇ ಆತಂಕ ಉಂಟಾಗಿದೆ.**

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಸಾಫ್ಟ್‌ವೇರ್ ಎಂಜಿನಿಯರ್ ಎಂದರೆ ಎಲ್ಲರಿಗೂ ಹೆಮ್ಮೆ. ಅವರಿಗೆ ಸಿಗೋ ಸಂಬಳ, ಲಕ್ಸುರಿ ಲೈಫ್‌ಸ್ಟೈಲ್ ಇತರರಿಗೆ ವಿಸ್ಮಯ ಮೂಡಿಸುತ್ತಿತ್ತು. ಆದರೆ ಇದೀಗ ಆಂಥ್ರೊಪಿಕ್, ಜೋಹೊ, ಗೂಗಲ್ ಮುಖ್ಯಸ್ಥರ ಹೇಳಿಕೆಗಳನ್ನು ಕೇಳಿದರೆ ಕಳವಳಕಾರಿಯಾಗಿವೆ. ಒಂದು ವೇಳೆ ಇವರು ಹೇಳುತ್ತಿರುವುದೆಲ್ಲ ನಿಜವಾದರೆ, ಅದು ಕೇವಲ ಟೆಕ್ಕಿಗಳ ಸಮಸ್ಯೆಯಾಗಿ ಉಳಿಯುವುದಿಲ್ಲ; ಆರ್ಥಿಕ, ಸಾಮಾಜಿಕ, ಜನಜೀವನಕ್ಕೇ ಹೊಡೆತ ನೀಡಲಿದೆ. ಏಕೆಂದರೆ, ಕೃತಕ ಬುದ್ಧಿಮತ್ತೆ (ಎಐ) ಟೂಲ್‌ಗಳು ಟೆಕ್ಕಿಗಳ ಕೆಲಸಗಳನ್ನು ತಾವೇ ಮಾಡಲಿವೆ! ಹೀಗಾಗಿ ಐಟಿ ಹೊರಗುತ್ತಿಗೆಯನ್ನೇ ನೆಚ್ಚಿಕೊಂಡಿರುವ ಕಂಪನಿಗಳಿಗೆ ಹೊಡೆತ ಬೀಳಲಿದೆ. ಆದರೆ ಒಂದಂತೂ ವಾಸ್ತವ. ಐಟಿ ಹೊರಗುತ್ತಿಗೆ ಇಂಡಸ್ಟ್ರಿಯ ಸಾಂಪ್ರದಾಯಿಕ ಚಹರೆಯೇ ಬದಲಾಗುತ್ತಿದೆ.

''ಇನ್ನು ಕೇವಲ 6-12 ತಿಂಗಳುಗಳಲ್ಲಿ ಸಾಫ್ಟ್‌ವೇರ್ ಎಂಜಿನಿಯರಿಂಗ್ ಹುದ್ದೆಗಳು ಬಹುತೇಕ ಅನಗತ್ಯವಾಗಲಿವೆ. ಏಕೆಂದರೆ ಹೈಟೆಕ್ ಎಐ ಟೂಲ್‌ಗಳು ಆ ಕೆಲಸಗಳನ್ನು ತಾವೇ ಮಾಡಲಿವೆ'' ಎಂದು ಆಂಥ್ರೊಪಿಕ್ ಕಂಪನಿಯ ಸಿಇಒ ಡರಿಯೊ ಅಮೋಡಿ ಅವರು, ದಾವೋಸ್‌ನ ವರ್ಲ್ಡ್ ಇಕನಾಮಿಕ್ ಫೋರಮ್‌ನಲ್ಲಿ ಎಚ್ಚರಿಸಿದ್ದಾರೆ. ''ಎಐ ಟೂಲ್‌ಗಳು ಪ್ರೋಗ್ರಾಮರ್‌ಗಳಿಗೆ ನೆರವಾಗುವುದು ಮಾತ್ರವಲ್ಲದೆ, ವೇಗವಾಗಿ ಬಹುತೇಕ ಕೋಡಿಂಗ್ ಕೆಲಸಗಳನ್ನು ನಿರ್ವಹಿಸಲಿವೆ. ಸಾಫ್ಟ್‌ವೇರ್ ಕೋಡ್ ಬರೆಯುವುದು, 'ಬಗ್'ಗಳನ್ನು ಬಗೆಹರಿಸುವುದು, ಮನುಷ್ಯರ ನೆರವಿಲ್ಲದೆಯೇ ಸಂಪೂರ್ಣವಾಗಿ ಅಪ್ಲಿಕೇಶನ್‌ಗಳನ್ನು ತಯಾರಿಸುವುದು 'ಎಐ'ಗೆ ಸಾಧ್ಯವಾಗಲಿದೆ. ಟೆಕ್ಕಿಗಳು ಅದನ್ನು ರಿವ್ಯೂ ಮತ್ತು ಫೈನ್ ಟ್ಯೂನ್ ಮಾಡಿದರೆ ಕೆಲಸ ಮುಗಿಯಿತು. ತಾವೇ ಕೋಡಿಂಗ್ ಬರೆಯುತ್ತಾ ಕೂರಬೇಕಿಲ್ಲ'' ಎಂದು ಡಿರಿಯೊ ಅಮೋಡಿ ಹೇಳಿದ್ದಾರೆ. ಇದರ ಬೆನ್ನಲ್ಲೇ ಟೆಕ್ ಜಗತ್ತಿನಲ್ಲಿ ಅಲ್ಲೋಲಕಲ್ಲೋಲವಾಗಿದೆ.

ಕಳೆದ 8-10 ದಿನಗಳಿಂದ ಜಾಗತಿಕ ಮಾಹಿತಿ ತಂತ್ರಜ್ಞಾನ ಕ್ಷೇತ್ರ ತತ್ತರಿಸಿದೆ. ಸ್ಟಾಕ್ ಮಾರ್ಕೆಟ್‌ನಲ್ಲಿ ದಿಗ್ಗಜ ಐಟಿ ಕಂಪನಿಗಳ ಮಾರುಕಟ್ಟೆ ಮೌಲ್ಯದಲ್ಲಿ ಭಾರಿ ಕುಸಿತ ಸಂಭವಿಸಿದೆ. ಭಾರತದ ಐಟಿ ಸೆಕ್ಟರ್ ಕಂಪಿಸಿದೆ. ನಿಫ್ಟಿ ಐಟಿ ಇಂಡೆಕ್ಸ್ ಫೆಬ್ರವರಿಯಲ್ಲಿ 8 ಪರ್ಸಂಟ್‌ಗೂ ಹೆಚ್ಚು ಕುಸಿದಿದೆ. ಕಂಪನಿಗಳಿಗೆ 2.5 ಲಕ್ಷ ಕೋಟಿ ರುಪಾಯಿ ನಷ್ಟವಾಗಿದೆ. ಇದರಿಂದ ಟಿಸಿಎಸ್, ಇನ್ಫೋಸಿಸ್ ಮತ್ತು ವಿಪ್ರೊ ಮೊದಲಾದ ಐಟಿ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ಇಳಿಯುತ್ತಿದೆ. ಅಮೆರಿಕದ ಆಂಥ್ರೊಪಿಕ್ ಐಟಿ ಕಂಪನಿಯ ಹೊಸ ಆಟೊಮೇಷನ್ ಟೂಲ್‌ಗಳು ದಿಗ್ಗಜ ಐಟಿ ಕಂಪನಿಗಳಲ್ಲಿ ನಡುಕ ಸೃಷ್ಟಿಸಿದೆ. ಹೂಡಿಕೆದಾರರು ಭಯಭೀತರಾಗಿ ಷೇರುಗಳನ್ನು ಮಾರಾಟ ಮಾಡುತ್ತಿದ್ದಾರೆ. 'ಎಐ' ಭೀತಿ, ಅಮೆರಿಕದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಹಾವಳಿ ಆಘಾತದ ಅಲೆ ಎಬ್ಬಿಸಿದೆ. 'ಎಸ್ ಆ್ಯಂಡ್ ಪಿ ನಾರ್ತ್ ಅಮೆರಿಕನ್ ಸಾಫ್ಟ್‌ವೇರ್ ಇಂಡೆಕ್ಸ್' ಜನವರಿ ಒಂದೇ ತಿಂಗಳಿನಲ್ಲಿ 15 ಪರ್ಸಂಟ್ ಕುಸಿದಿದೆ. 2008ರ ಜಾಗತಿಕ ಹಿಂಜರಿತದ ಕಾಲದ ಕುಸಿತದ ಬಳಿಕ ಇದು ಗರಿಷ್ಠ ಮಟ್ಟದ ಇಳಿಕೆಯಾಗಿದೆ. ಅಂತಾರಾಷ್ಟ್ರೀಯ ಐಟಿ ಕಂಪನಿಗಳ ಮಾರುಕಟ್ಟೆ ಮೌಲ್ಯದಲ್ಲಿ 2 ಲಕ್ಷ ಕೋಟಿ ಡಾಲರ್ ಕರಗಿದೆ.

ಹಾಗಾದರೆ ಆಗಿದ್ದೇನು? ಕೃತಕ ಬುದ್ಧಿಮತ್ತೆಯ ಟೂಲ್‌ಗಳ ಪರಿಣಾಮ, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಾಂಪ್ರದಾಯಿಕ ಆದಾಯ ಮೂಲಗಳು ಬತ್ತಿಹೋಗುವ, ಆರ್ಡರ್‌ಗಳೇ ಸಿಗದಿರುವ ಭೀತಿ ಉಂಟಾಗಿದೆ. ಹೇಳಿಕೇಳಿ ಐಟಿ ಸೆಕ್ಟರ್ ಎಂದರೆ ಕಾರ್ಮಿಕ ಕೇಂದ್ರಿತ ಹೊರಗುತ್ತಿಗೆಯ ಸೇವೆಗಳನ್ನು ನೀಡುತ್ತವೆ. ಅವುಗಳೇ ಐಟಿ ಕಂಪನಿಗಳ ಆದಾಯ ಮೂಲ. ಆದರೆ ಎಐ




ಟೂಲ್‌ಗಳು ಅಗ್ಗದ ವೆಚ್ಚದಲ್ಲಿ ಸಾಫ್ಟ್‌ವೇರ್ ಕೋಡಿಂಗ್ ಸೇರಿದಂತೆ ಎಲ್ಲ ಕೆಲಸಗಳನ್ನೂ ಮಾಡಬಲ್ಲವು. ಇದರಿಂದ ಐಟಿ ಕಂಪನಿಗಳ ಅಸ್ತಿತ್ವಕ್ಕೇ ಆತಂಕ ಉಂಟಾಗಿದೆ.

ಇತ್ತೀಚೆಗೆ ಅಮೆರಿಕ ಮೂಲದ ಆಂಥ್ರೊಪಿಕ್ ಕಂಪನಿ ಅಭಿವೃದ್ಧಿಪಡಿಸಿರುವ ಎಐ ಟೂಲ್ ಆದ ಕ್ಲಾಡ್ ★(ಇಚ್ಛಿಛಿ)★ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಸುನಾಮಿಯಂತೆ ಅಪ್ಪಳಿಸಿದೆ. ಈ 'ಕ್ಲಾಡ್ ಕೋ ವರ್ಕ್ ಏಜೆಂಟ್ ಎಐ ಟೂಲ್' ಕಾನೂನು, ಸೇಲ್ಸ್, ಮಾರ್ಕೆಟಿಂಗ್, ಡೇಟಾ ಅನಾಲಿಸಿಸ್ ಕ್ಷೇತ್ರದಲ್ಲಿ ತಾನಾಗಿಯೇ ಟಾಸ್ಕ್‌ಗಳನ್ನು ನಿರ್ವಹಿಸಬಲ್ಲದು. ಇದು ಐಟಿ ಕಂಪನಿಗಳ ಷೇರುಗಳ ಕುಸಿತಕ್ಕೆ ಕಾರಣವಾಗಿದೆ. ಬ್ರೋಕರೇಜ್ ಮೋತಿಲಾಲ್ ಓಸ್ವಾಲ್ ಪ್ರಕಾರ ಮುಂಬರುವ ನಾಲ್ಕು ವರ್ಷಗಳಲ್ಲಿ ಎಐ ಪರಿಣಾಮ ಐಟಿ ಕಂಪನಿಗಳ ಆದಾಯದಲ್ಲಿ 9-12 ಪರ್ಸಂಟ್ ಇಳಿಕೆಯಾಗಲಿದೆ.

ಕನ್ನಡಿಗರಾದ ರಾಹುಲ್ ಪಾಟೀಲ್ ಅವರು ಈ ಆಂಥ್ರೊಪಿಕ್ ಕಂಪನಿಯ ಮುಖ್ಯ ತಂತ್ರಜ್ಞಾನ ಅಧಿಕಾರಿ (ಸಿಟಿಒ) ಎಂಬುದು ವಿಶೇಷ. 2025ರ ಅಕ್ಟೋಬರ್‌ನಲ್ಲಿ ಅವರು ಸಿಟಿಒ ಆಗಿ ನೇಮಕವಾಗಿದ್ದರು. ಕ್ಲಾಡ್ ಎಐ ಟೂಲ್ ಅನ್ನು ಅವರೇ ತಯಾರಿಸಿದ್ದು ಅಲ್ಲವಾದರೂ, ತಂಡವನ್ನು ಮುನ್ನಡೆಸುವಲ್ಲಿ ಅವರು ಗಣನೀಯ ಪಾತ್ರ ನಿರ್ವಹಿಸಿದ್ದಾರೆ. ಈ ಕ್ಲಾಡ್ ಕೇವಲ ಚಾಟ್ ಬೋಟ್ ಅಲ್ಲ. ಅದಕ್ಕೂ ಮಿಗಿಲಾದ ಕೆಲಸಗಳನ್ನು ಮಾಡುತ್ತದೆ. ಐಟಿ ಕಂಪನಿಗಳು ಎಐ ಮೂಲಕ 'ವೈಬ್ ಕೋಡಿಂಗ್' ಮಾಡಿ ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಬಹುದು. ಇದರಿಂದ ದುಬಾರಿ ಸಾಫ್ಟ್‌ವೇರ್ ಲೈಸೆನ್ಸ್‌ಗಳು ಮತ್ತು 'ಸೀಟ್ ಬೇಸ್ಡ್' ಲೈಸೆನ್ಸಿಂಗ್ ಪದ್ಧತಿಗಳು ಕಂಪನಿಗಳಿಗೆ ಬೇಕಾಗುವುದಿಲ್ಲ. 2025ರಲ್ಲಿ ಸ್ಲೊವಾಕಿಯಾದ ಎಐ ಸಂಶೋಧಕ ಆಂಡ್ರೆ ಕರ್ಪಾಥಿ ಎಂಬುವರು 'ವೈಬ್ ಕೋಡಿಂಗ್' ಎಂಬ ಎಐ ಸಾಫ್ಟ್‌ವೇರ್ ಮಾದರಿಯನ್ನು ಸಂಶೋಧಿಸಿದ್ದರು. ಇದರ ವಿಶೇಷತೆ ಏನೆಂದರೆ ಸಾಂಪ್ರದಾಯಿಕ ಸಾಫ್ಟ್‌ವೇರ್ ಕೋಡ್ ಬರೆಯದೆಯೂ, ಸಹಜ ಭಾಷೆಯಲ್ಲಿ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಸೃಷ್ಟಿಸಬಹುದು. ಹೀಗಾಗಿ ಐಟಿ ತಂತ್ರಜ್ಞರಲ್ಲದ ಬಳಕೆದಾರರೂ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು (ಆಪ್) ತಯಾರಿಸಬಹುದು!

ಎಐ ಕೋಡಿಂಗ್ ಟೂಲ್‌ಗಳು ಜನಪ್ರಿಯವಾಗುತ್ತಿರುವ ಹಿನ್ನೆಲೆಯಲ್ಲಿ ಭಾರತೀಯ ಐಟಿ ಸರ್ವೀಸ್ ಇಂಡಸ್ಟ್ರಿ ಕೂಡ ನೇರವಾಗಿ ಆತಂಕದಲ್ಲಿದೆ. ಆದರೆ ಅದೊಂದೇ ಕಾರಣವಲ್ಲ. ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಗ್ಲೋಬಲ್ ಕೇಪಬಿಲಿಟಿ ಸೆಂಟರ್‌ಗಳನ್ನು ಹೆಚ್ಚಿಸುತ್ತಿರುವುದು, ಅಮೆರಿಕದ ರಕ್ಷಣಾತ್ಮಕ ನೀತಿ, ಸೈಬರ್ ಸೆಕ್ಯುರಿಟಿ ಸಮಸ್ಯೆಗಳು ಕೂಡ ಸ್ಥಳೀಯ ಐಟಿ ಕಂಪನಿಗಳಿಗೆ ಸವಾಲಾಗಿ ಪರಿಣಮಿಸಿವೆ.

ಎಂಟ್ರಿ ಲೆವೆಲ್‌ನಲ್ಲಿರುವ ಐಟಿ ಜಾಬ್ಸ್, ಬೇಸಿಕ್ ಕೋಡಿಂಗ್, ನಿಯಮಿತ ಡೇಟಾ ಪ್ರೊಸೆಸಿಂಗ್, ಕಸ್ಟಮರ್ ಸಪೋರ್ಟ್, ಆಡಳಿತಾತ್ಮಕ ಕೆಲಸಗಳು ಕಡಿಮೆಯಾಗಬಹುದು. ಆದರೆ ಎಐ ಆಧಾರಿತ ಹೊಸ ಉದ್ಯೋಗಗಳೂ ಸೃಷ್ಟಿಯಾಗಬಹುದು. ಆದ್ದರಿಂದ ಕೌಶಲ ಕಲಿಕೆ ಇಲ್ಲಿ ಮುಖ್ಯವಾಗುತ್ತದೆ. ಇತಿಹಾಸವನ್ನು ಅವಲೋಕಿಸಿದರೆ, ಕೆಲವು ಉದ್ಯೋಗಗಳು ಕಣ್ಮರೆಯಾಗುತ್ತವೆ. ಆದರೆ ಟೆಕ್ನಾಲಜಿಯಲ್ಲಾಗುವ ಪಲ್ಲಟದಿಂದ ಹೊಸ ಕೆಲಸಗಳೂ ಸೃಷ್ಟಿಯಾಗುತ್ತವೆ.

ಈಗ ನೋಡಿ, ಇದುವರೆಗೂ ಹೇಗಿತ್ತು? ಭಾರತದ ಐಟಿ ಹೊರಗುತ್ತಿಗೆಯ ಕಂಪನಿಗಳಾದ ಇನ್ಫೋಸಿಸ್, ಟಿಸಿಎಸ್, ಎಚ್‌ಸಿಎಲ್ ಮೊದಲಾದವುಗಳು ಬಹುರಾಷ್ಟ್ರೀಯ ಕಂಪನಿಗಳಿಗೆ ಐಟಿ ಹೊರಗುತ್ತಿಗೆ ಸೇವೆಯನ್ನು ನೀಡುತ್ತಿದ್ದವು. ಭಾರತದಲ್ಲಿ ಲಕ್ಷಾಂತರ ಟೆಕ್ಕಿಗಳಿಗೆ ಕೆಲಸ ಕೊಟ್ಟಿದ್ದವು. ದೊಡ್ಡ ದೊಡ್ಡ ಔಟ್‌ಸೋರ್ಸ್ ಗುತ್ತಿಗೆಗಳನ್ನು ಪಡೆದು ಬೆಳೆದಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಟ್ರೆಂಡ್ ಬದಲಾಗುತ್ತಿದೆ! ಎಂಎನ್‌ಸಿಗಳು ಭಾರತದಲ್ಲಿಯೇ ತಮ್ಮ ಗ್ಲೋಬಲ್ ಕೇಪಬಿಲಿಟಿ ಸೆಂಟರ್‌ಗಳನ್ನು ನಿರ್ಮಿಸುತ್ತಿವೆ! ಪ್ರತಿಭಾವಂತ ಟೆಕ್ಕಿಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳುತ್ತಿವೆ. ಇದರಿಂದಾಗಿ ಭಾರತದ ಸಾಂಪ್ರದಾಯಿಕ ಥರ್ಡ್ ಪಾರ್ಟಿ ಐಟಿ ಸರ್ವೀಸ್ ಕಂಪನಿಗಳಿಗೆ ಬೇಡಿಕೆ ಕಡಿಮೆಯಾಗುವ ಆತಂಕ ಉಂಟಾಗಿದೆ. ಇದನ್ನೇ ಐಟಿ ಇಂಡಸ್ಟ್ರಿಯ ಚಹರೆಯೇ ಬದಲಾಗುತ್ತಿದೆ ಎನ್ನುತ್ತಿರುವುದು.

ಹೀಗಿದ್ದರೂ, ಐಟಿ ಇಂಡಸ್ಟ್ರಿಯಲ್ಲೇ ಟೆಕ್ಕಿಗಳಿಗೆ ಸಾಂತ್ವನ ಹೇಳಿರುವ ನಾಯಕರು ಇದ್ದಾರೆ. ಜೊಹೊ ಸ್ಥಾಪಕ ಶ್ರೀಧರ್ ವೆಂಬು ಅವರು ಶೀಘ್ರದಲ್ಲೇ ಸಾಫ್ಟ್‌ವೇರ್ ಎಂಜಿನಿಯರಿಂಗ್ ಹುದ್ದೆಗಳು ನಶಿಸಿಹೋಗಲಿವೆ ಎಂಬುದನ್ನು ನಂಬುವುದಿಲ್ಲ. ಆದರೂ, ಅಮೋಡಿಯವರ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಲೂ ಸಲಹೆ ನೀಡಿದ್ದಾರೆ. ವಿಶ್ವದ ಅತ್ಯಾಧುನಿಕ ಎಐ ಟೂಲ್‌ಗಳನ್ನು ತಯಾರಿಸುತ್ತಿರುವ ಕಂಪನಿಯ ಸಿಇಒ ಅಮೋಡಿ ಆಗಿರುವುದರಿಂದ ಅವರ ಮಾತನ್ನು ತೀರಾ ಕಡೆಗಣಿಸುವಂತಿಲ್ಲ. ಅಗತ್ಯ ಬಿದ್ದರೆ ಪರ್ಯಾಯ ಮಾರ್ಗಗಳನ್ನೂ ಅನುಸರಿಸಲು ಟೆಕ್ಕಿಗಳು ಸಿದ್ಧರಾಗಿರಬೇಕು ಎನ್ನುತ್ತಾರೆ ಅವರು.

ಇನ್ನು ಕೆಲ ತಜ್ಞರ ಪ್ರಕಾರ ಎಐ ಟೂಲ್‌ಗಳು ಕೋಡ್‌ಗಳನ್ನು ವೇಗವಾಗಿ ಬರೆಯಬಹುದಾದರೂ, ಸಂಕೀರ್ಣ ನಿರ್ಧಾರಗಳನ್ನು ಕೈಗೊಳ್ಳುವ ಸಾಮರ್ಥ್ಯವನ್ನು ಸದ್ಯಕ್ಕೆ ಹೊಂದಿಲ್ಲ. ತಕ್ಷಣ ಹುಟ್ಟಿಕೊಳ್ಳುವ ಸಮಸ್ಯೆಗಳು ಅವುಗಳಿಗೆ ಅರ್ಥವಾಗದು. ಸಾಫ್ಟ್‌ವೇರ್‌ಗಳ ತಯಾರಿಕೆಯ ಸ್ವರೂಪ ಬದಲಾಗಬಹುದು. ಪ್ರೋಗ್ರಾಮರ್‌ಗಳು ಕೋಡ್ ಬರೆಯುವ ಸಮಯ ಕಡಿಮೆಯಾಗಬಹುದು. ಅದಕ್ಕಿಂತಲೂ ವ್ಯವಸ್ಥೆಯ ಪ್ಲಾನಿಂಗ್, ಎಐ ಸೃಷ್ಟಿಸಿದ ಕೆಲಸಗಳನ್ನು ಪರಿಶೀಲಿಸುವುದು, ಉನ್ನತ ಮಟ್ಟದ ಸಮಸ್ಯೆಗಳನ್ನು ಬಗೆಹರಿಸುವುದು- ಹೀಗೆ ಬೇರೆ ಕೆಲಸಗಳನ್ನು ಮಾಡಬೇಕಾಗಿ ಬರಬಹುದು. ಅಂದರೆ 'ಸಾಫ್ಟ್‌ವೇರ್ ಎಂಜಿನಿಯರ್' ಹುದ್ದೆಯ ಹೆಸರು ಬದಲಾಗಬಹುದು, ಅವರ ಕೌಶಲಗಳಿಗೆ ಬೇಡಿಕೆ ಇದ್ದೇ ಇರುತ್ತದೆ. ಐಎಂಇ ಕ್ಯಾಪಿಟಲ್‌ನ ಸಿಇಒ ಆಶಿ ಆನಂದ್ ಅವರ ಪ್ರಕಾರ, ಐಟಿ ಸ್ಟಾಕ್‌ಗಳ ಇತ್ತೀಚಿನ ದರ ಕುಸಿತದ ಬಗ್ಗೆ ಆತಂಕ ಪಡಬೇಕಾದ ಅಗತ್ಯವಿಲ್ಲ. ಇದು ಎಐ ಆತಂಕಕ್ಕೆ ಅತಿಯಾದ ರಿಯಾಕ್ಷನ್ ಅಷ್ಟೇ. ಎಐನಿಂದ ದಕ್ಷತೆ ಹೆಚ್ಚಲಿದೆ. ಲಾಭಾಂಶ ಏರಿಕೆಯಾಗಲಿದೆ.

ಇನ್ಫೋಸಿಸ್ ಸ್ಥಾಪಕ ನಾರಾಯಣಮೂರ್ತಿಯವರೂ, ''ಎಐ ಟೂಲ್‌ಗಳು ಉತ್ಪಾದಕತೆಯನ್ನು ಹೆಚ್ಚಿಸಲಿವೆ. ಅವು ಉದ್ಯೋಗಗಳನ್ನು ಕಸಿದುಕೊಳ್ಳವು. ಕೋಡಿಂಗ್‌ನ ಗುಣಮಟ್ಟವನ್ನು ಹೆಚ್ಚಿಸಲು ಎಐ ಬಳಸಿಕೊಳ್ಳಿ'' ಎಂಬ ಸಲಹೆಯನ್ನು ನೀಡುತ್ತಾರೆ.

ಎನ್‌ವಿಡಿಯಾದ ಸಿಇಒ ಜೆನ್ಸನ್ ಹ್ಯುಯಾಂಗ್ ಕೂಡ ''ಎಐ ತಂತ್ರಜ್ಞಾನವು ಸಾಫ್ಟ್‌ವೇರ್ ಅನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ ಎನ್ನುವುದು ಜಗತ್ತಿನಲ್ಲೇ ಅತ್ಯಂತ ಅತಾರ್ಕಿಕವಾದ ಹೇಳಿಕೆಯಾಗಿದೆ'' ಎನ್ನುತ್ತಾರೆ. ಬೆಂಗಳೂರಿನಲ್ಲಿ 25 ಲಕ್ಷ ಟೆಕ್ಕಿಗಳು ಕೆಲಸ ಮಾಡುತ್ತಾರೆ. ದೇಶದ ಐಟಿ ರಫ್ತಿನಲ್ಲಿ 40 ಪರ್ಸಂಟ್ ಬೆಂಗಳೂರಿನಿಂದ ಬರುತ್ತಿದೆ. ಕರ್ನಾಟಕದ ಸಾಫ್ಟ್‌ವೇರ್ ರಫ್ತಿನ ಮೌಲ್ಯವೇ ಬರೋಬ್ಬರಿ 3.2 ಲಕ್ಷ ಕೋಟಿ ರುಪಾಯಿಗಳಾಗಿದೆ. ಆದ್ದರಿಂದ ಐಟಿ ಇಂಡಸ್ಟ್ರಿ ಅತ್ಯಂತ ಪ್ರಬುದ್ಧವಾಗಿದೆ. ಯಾವುದೇ ಆಘಾತಗಳನ್ನು ಜೀರ್ಣಿಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಗಳಿಸಿದೆ. ಆದರೆ ಬದಲಾವಣೆಗಳಿಗೆ ಹೊಂದಿಕೊಳ್ಳುವುದು ಅನಿವಾರ್ಯ.

## ಭಟ್ಟರ್ ಸ್ಕಾಚ್

- **ರಾಘಣ್ಣ, ಮೈಸೂರು**
ಭಟ್ರೇ, ಶುದ್ಧ ವೈದಿಕರು ಈ ದೇಶದಲ್ಲಿ ಕಾರು ಡ್ರೈವ್ ಮಾಡುವಾಗ ಕಾರು ತಯಾರಕರನ್ನು ಶಪಿಸುತ್ತಾರಲ್ಲ?
- **ಸೀಟ್ ಬೆಲ್ಟನ್ನು ಅಪಸವ್ಯಕ್ಕೆ ಹಾಕಿಸುತ್ತಾರಲ್ಲ!**

- **ಶಿಲ್ಪ ಶ್ರೀನಿವಾಸ, ಚಾಮರಾಜಪೇಟೆ**
ಭಟ್ರೇ, ಹುಡುಗ ಕತ್ಮಂಡುದವನು. ತನ್ನ ಹಠವೇ ಗೆಲ್ಲಬೇಕು ಅಂತಾನಲ್ಲ?
- **ಜಗಮಂಡು ಇರಬೇಕು!**

- **ಸಿಂಧು, ಡಾಲರ್ಸ್ ಕಾಲೋನಿ**
ಭಟ್ರೇ, ನನ್ನನ್ನು ಸೊಸೆ ಮಾಡಿಕೊಳ್ಳಬಯಸುವ ಮನೆಯವರು ನನ್ನಿಂದ ಏನನ್ನು ನಿರೀಕ್ಷಿಸಬಹುದು?
- **ಎಲ್ಲ ಕಾಲಕ್ಕೂ ಅನುಕೂಲಸಿಂಧು!**

- **ತಗಡೂರು ಸುಬ್ಬಣ್ಣ, ನಂಜನಗೂಡು**
ಭಟ್ರೇ, ರಾಜಕಾರಣಿಗಳು ಹೋದಲ್ಲೆಲ್ಲ ಟೇಪು ಕತ್ತರಿಸುತ್ತಾರೆ, ಕಳ್ಳರಾದರೆ ಜೇಬು, ಪ್ರೇಮಿಗಳಾದರೆ?
- **ಕೇಕು ಮತ್ತು ಜೋಕು!**

- **ಶಾಲು, ಕಾಮನಕೊಪ್ಪಲು**
ಭಟ್ರೇ, ಸಫಾರಿ ನಿರ್ಬಂಧದ ರದ್ದು ಘೋಷಣೆ ಮಾಡುವ ದಿನ ಅರಣ್ಯ ಸಚಿವರು ಯಾವ ದಿರಿಸಿನಲ್ಲಿ ಕಂಗೊಳಿಸಬಹುದು?
- **'ಸಫಾರಿ'ಯಲ್ಲಿ!**

- **ಹೇಮಂತ ಜಟ್ಟಿ, (ಇಮೇಲ್ ಮೂಲಕ)**
ಭಟ್ರೇ, ಸೊಳ್ಳೆಗಳು ಮನುಷ್ಯರಿಗೆ ಕಚ್ಚಿದ ಮೇಲೆ ಯಾಕೆ ಹಾರಿ ಹೋಗುತ್ತವೆ?
- **ರಕ್ತದಾನ ಮಾಡಿದ್ದರ ವಿಜಯೋತ್ಸವ ಆಚರಿಸಲು ಹಾರಿ ಹೋಗುತ್ತವೆ!**

- **ಸಂಜಯ ಗಿಣಗೇರ, ಬಳ್ಳಾರಿ**
ಭಟ್ರೇ, ಮದುವೆಗೆ ಮುಂಚೆ ಹೆಂಡತಿಗೆ ಏನೇನೋ ಗಿಫ್ಟ್ ಕೊಡುವವರು ನಂತರ ಯಾಕೆ ಕೊಡೊಲ್ಲ?
- **ಮೀನು ಹಿಡಿದ ಮೇಲೆ ಅದಕ್ಕೆ ಹುಳು ತಿನ್ನಿಸುವ ಮೀನುಗಾರನನ್ನು ನೋಡಿದ್ದೀಯಾ?!**

- **ಜಯಾ, ಬೆಂಗಳೂರು**
ಭಟ್ರೇ, ಭೂಮಿ ಯಾಕೆ ತಿರುಗುತ್ತಲೇ ಇರುತ್ತದೆ?
- **ಅದಕ್ಕೆ ಕೂರಲು ಕುರ್ಚಿ ಇಲ್ಲ, ನಿಲ್ಲಲು ಜಾಗ ಇಲ್ಲ. ಸುಮ್ಮನೆ ನಿಂತರೆ ಸೂರ್ಯ ಸುಟ್ಟು ಹಾಕ್ತಾನೆ ಅಂತ ಭಯಕ್ಕೆ ಓಡ್ತಾನೆ ಇರುತ್ತದೆ!**

- **ರಾಜಿ, ಮೈಸೂರು**
ಭಟ್ರೇ, ಡಾಕ್ಟರ್‌ಗೂ, ಸಿವಿಲ್ ಎಂಜಿನಿಯರ್‌ಗೂ ವ್ಯತ್ಯಾಸ ಏನು?
- **ಡಾಕ್ಟರ್ ಮಾಡಿದ ತಪ್ಪು ಮಣ್ಣಿನ ಅಡಿ (ಸಮಾಧಿ) ಸೇರುತ್ತದೆ, ಸಿವಿಲ್ ಎಂಜಿನಿಯರ್ ಮಾಡಿದ ತಪ್ಪು ಮಣ್ಣಿನ ಮೇಲೆ ನಿಂತಿರುತ್ತದೆ (ಬಿಲ್ಡಿಂಗ್)!**

# ನಾವು ಮರೆಯುತ್ತಿರುವ ಹಳೆಯ ತಿನಿಸುಗಳು!

ಶಶಾಂಕಣ

ಶಶಿಧರ ಹಾಲಾಡಿ

vveditoped@gmail.com

ನಮ್ಮ ಹಳ್ಳಿಯಲ್ಲಿ ಬಳಕೆಯಲ್ಲಿದ್ದ ಹಳೆಯ ಕಾಲದ ಕೆಲವು ರುಚಿಕರ ತಿನಿಸುಗಳನ್ನು ನೆನಪಿಸಿಕೊಂಡು ಬರೆದಿರುವ ಈ ಅಂಕಣವನ್ನು ಆರಂಭಿಸುವ ಮೊದಲು, ಸಣ್ಣದೊಂದು ತಪ್ಪೊಪ್ಪಿಗೆಯನ್ನೂ ಓದುಗರು ತಮ್ಮ ಹೊಟ್ಟೆಯಲ್ಲಿ ಹಾಕಿಕೊಳ್ಳಿ! ಅದೇನೆಂದರೆ, ಇಲ್ಲಿ ಹೇಳಿರುವ ಎಲ್ಲಾ ತಿನಿಸುಗಳನ್ನು ನಾನು ಚಪ್ಪರಿಸಿ ತಿಂದಿದ್ದು ನಿಜ, ಅದರ ಅಪರೂಪದ ರುಚಿಯನ್ನು ಮತ್ತು ಆರೋಗ್ಯಕರ ಅಂಶವನ್ನು ಸವಿದದ್ದು ನಿಜ, ಆದರೆ ಕೆಲವು ತಿನಿಸುಗಳನ್ನು ಬಾಲ್ಯಕಾಲದಲ್ಲಿ ತಿಂದದ್ದು ಬಿಟ್ಟರೆ, ಈಚಿನ ದಿನಗಳಲ್ಲಿ ತಿಂದೇ ಇಲ್ಲ! ನಗರವಾಸಿಯಾದ ನಂತರ, ಹಲವು ಹಳೆಯ ತಿನಿಸುಗಳ ಬಾಂಧವ್ಯವೇ ತಪ್ಪಿಹೋಗಿದೆ. ಅಷ್ಟೇಕೆ, ಇಲ್ಲಿ ಹೇಳಿರುವ ಒಂದೆರಡು ತಿನಿಸುಗಳನ್ನು ಬಹು ಹಿಂದೆ ಸವಿದದ್ದು ಬಿಟ್ಟರೆ, ಈಚಿನ ದಶಕಗಳಲ್ಲಿ ಕಣ್ಣಿಂದ ನೋಡಿಯೂ ಇಲ್ಲ! ಅದೇಕೆ ಹೀಗೆ ಎಂದು ಮರುಪ್ರಶ್ನಿಸಿ ನೀವು ಕಾರಣ ಕೇಳಬಹುದು. ಕಾರಣ ಸ್ಪಷ್ಟ: ನಾಗರಿಕತೆಯ ಪ್ರವಾಹದಲ್ಲಿ ಈಜುತ್ತಾ, ಪ್ರವಾಹದ ದಿಕ್ಕಿನಲ್ಲಿ ಬಹು ವೇಗವಾಗಿ ಸಾಗಿಬಂದಿರುವ ನಾನು (ಮತ್ತು ನಾವೆಲ್ಲರೂ, ನೀವೂ ಸೇರಿದಂತೆ) ಹಳೆಯ ಕಾಲದ ಹಲವು ತಿನಿಸುಗಳನ್ನು, ವಸ್ತುಗಳನ್ನು, ಪದ್ಧತಿಗಳನ್ನು, ದಿನಚರಿಯ ಹಲವು ಭಾಗಗಳನ್ನು ಮರೆತೇ ಬಿಟ್ಟಿದ್ದೇವೆ! ಇದು ಕಹಿಸತ್ಯ; ಹೌದೋ ಅಲ್ಲವೋ ನೀವೇ ಪರೀಕ್ಷಿಸಿಕೊಳ್ಳಿ.

ಇರಲಿ, ಈಚಿನ ದಶಕಗಳಲ್ಲಿ ನಾನು ತಿನ್ನದೇ ಇರುವ, ಬಾಲ್ಯದಲ್ಲಿ ಮಾತ್ರ ಸೇವಿಸಿದ್ದ ಒಂದು ರುಚಿಕರ ತಿನಿಸು ಎಂದರೆ, ಗುಂಬಳಹೂವಿನ ದೋಸೆ! ಗುಂಬಳ ಹೂವಿನಿಂದಲೂ ದೋಸೆ ತಯಾರಿಸಲು ಸಾಧ್ಯವೇ ಎಂದು ನಿಮಗೆ ವಿಸ್ಮಯವಾದೀತು. ಇದನ್ನು ನಮ್ಮ ಹಳ್ಳಿಯಲ್ಲಿ ಕರೆಯುತ್ತಿದ್ದುದು ದೋಸೆ ಎಂದಲ್ಲ, ಬದಲಿಗೆ ಚಟ್ಟಿ ಎಂದು (ಚಟ್ನಿ ಅಲ್ಲ, ಚಟ್ಟಿ). ಹೆಸರು ಚಟ್ಟಿ ಎಂದಿದ್ದರೂ, ಅದಕ್ಕೆ ಬಹುಮಟ್ಟಿಗೆ ದೋಸೆಯ ಸ್ವರೂಪವೇ. ನಮ್ಮ ಅಮ್ಮಮ್ಮ ಆಗಾಗ ''ಮಕ್ಕಳೇ ಇವತ್ತು ಗುಂಬಳ ಹೂವಿನ ಚಟ್ಟಿ (ದೋಸೆ) ಮಾಡುತ್ತೇನೆ'' ಎಂದಾಗ, ನಮಗೆಲ್ಲಾ ಬಹು ಖುಷಿ. ಗುಂಬಳ ಹೂವಿನ ಚಟ್ಟಿ ಅಥವಾ ದೋಸೆ ತಯಾರಿಸಲು, ಎಲ್ಲಾ ತಳಿಯ ಗುಂಬಳ ಹೂವು ಆಗಿಬರುವುದಿಲ್ಲ. ಸಿಹಿ ಗುಂಬಳದ ಹೂವುಗಳೇ ಬೇಕು, ಅದರಲ್ಲೂ, ಗಂಡು ಹೂವುಗಳು ಬೇಕು. ಉದ್ದಗೆ, ತುಸು ದಪ್ಪಗೆ ಇರುವ ಸಿಹಿಗುಂಬಳದ ಹೂವುಗಳನ್ನು ಚೆನ್ನಾಗಿ ಕತ್ತರಿಸಿಕೊಂಡು, ಅಕ್ಕಿಹಿಟ್ಟಿನೊಂದಿಗೆ ಬೆರೆಸಬೇಕು. ಅದಕ್ಕೆ ಮೆಣಸಿನ ಕಾಯಿ ಮತ್ತು ಉಪ್ಪನ್ನು ಸೇರಿಸಬೇಕು. ನಂತರ, ದೋಸೆಯ ರೀತಿ ಕಾವಲಿಯ ಮೇಲೆ ಬೇಯಿಸಿದಾಗ ಗುಂಬಳಹೂವಿನ ದೋಸೆ ಸಿದ್ಧ. ಸ್ವಲ್ಪ ಜಾಸ್ತಿಯೇ ಎಣ್ಣೆಯನ್ನು ಸವರಿ ಬೇಯಿಸಿದರೆ, ಬಲು ರುಚಿ! ನಮ್ಮ ಮನೆಯ ಎದುರಿನ ಗದ್ದೆಯಲ್ಲಿ, ಚಳಿಗಾಲ ಕಳೆಯುವ ಸಮಯದಲ್ಲಿ ಸಿಹಿಗುಂಬಳದ ಹತ್ತಾರು ಗಿಡಗಳನ್ನು ಹಾಕುತ್ತಿದ್ದರು. ಅವು ಹೂವಾದಾಗ, ಗುಂಬಳ ಹೂವಿನ ದೋಸೆ ಆಗಾಗ ನಮ್ಮ ಅಡುಗೆ ಮನೆಯಲ್ಲಿ 'ಚೊಂಯ್' ಎನ್ನುತ್ತಿತ್ತು. ಅದು ರುಚಿಯಾದ ತಿನಿಸೂ ಹೌದು, ಜತೆಗೆ ಆಹಾರದ ಭಾಗವೂ ಹೌದು.

ಆದರೆ, ನಂತರದ ವರ್ಷಗಳಲ್ಲಿ ಗುಂಬಳ ಹೂವಿನ ದೋಸೆಯನ್ನು ತಯಾರಿಸುವುದನ್ನೇ ಮರೆತುಬಿಟ್ಟಿದ್ದೇವೇನೋ ಎಂಬಂಥ ಸನ್ನಿವೇಶ. ಹೊಸ ರೀತಿಯ ತಿನಿಸುಗಳ ಪರಿಚಯವಾಗುತ್ತಾ ಹೋದಂತೆ, ಗುಂಬಳಹೂವಿನ ದೋಸೆಯಂಥ ಹಳೆಯ, ರುಚಿಕರ ಮತ್ತು ಆರೋಗ್ಯಕರ ತಿನಿಸುಗಳನ್ನು ತಯಾರಿಸುವುದನ್ನು ನಮ್ಮ ಜನರೇ ಕಡಿಮೆ ಮಾಡಿದರು. ಇದು ನಮ್ಮ ಮನೆಯಲ್ಲಿ ಮಾತ್ರವಲ್ಲ, ನಮ್ಮ ಹಳ್ಳಿಯಲ್ಲಿ ಯಾರನ್ನೇ ಕೇಳಿದರೂ, ''ಹೌದು, ನಾನು ಸಹ ಬಾಲ್ಯದಲ್ಲಿ ಗುಂಬಳ ಹೂವಿನ ದೋಸೆಯನ್ನು ತಿಂದಿದ್ದುಂಟು, ಆದರೆ ಈಗ ಯಾರೂ ಮಾಡುವುದಿಲ್ಲ'' ಎಂಬ ಉತ್ತರ ಸಿಕ್ಕೀತು. ಇನ್ನೂ ಮುಂದುವರಿದು, ''ಇದೆಂಥ ಮಾರಾಯ್ರೆ, ನೀವು ಈಗಿನ ಕಾಲದಲ್ಲೂ ಗುಂಬಳ ಹೂವಿನ ದೋಸೆಯನ್ನು ನೆನಪಿಸಿಕೊಳ್ಳುತ್ತಿದ್ದೀರಿ? ಈಗೇನಿದ್ದರೂ ಪರೋಟ, ಚಪಾತಿ, ಪಿಜ್ಜಾಗಳ ಕಾಲ ಅಲ್ಲವೋ? ನಿಮಗೆ ರುಚಿರುಚಿ ದೋಸೆ ತಿನ್ನಬೇಕಾದರೆ, ಹಾಲಾಡಿಯ ಬಸ್‌ಸ್ಟ್ಯಾಂಡ್ ಹತ್ತಿರದ ಹೋಟೆಲಿನಲ್ಲಿ ತುಪ್ಪದ ದೋಸೆಯನ್ನು ತಿನ್ನಿ! ಭಾರಿ ರುಚಿ ಉಂಟು! ಕ್ಯೂನಿಂತು ತುಪ್ಪದ ದೋಸೆ ತಿನ್ನುತ್ತಾರೆ! ಗುಂಬಳ ಹೂವಿನ ದೋಸೆಯ ಕಾಲ ಮುಗಿದುಹೋಯ್ತು ಮಾರಾಯ್ರೆ!'' ಎಂದು ಹೇಳುವವರೂ ಇದ್ದಾರೆ. ಇದು ನಮ್ಮೂರಿನ ಗುಂಬಳ ಹೂವಿನ ದೋಸೆಯ ಕುರಿತು ಮಾತ್ರವಲ್ಲ, ನಿಮ್ಮ ಹಳ್ಳಿಯ ಕೆಲವು ತಿನಿಸುಗಳನ್ನೇ ನೆನಪಿಸಿಕೊಳ್ಳಿ, ಹಿಂದೆ ಸರ್ವವ್ಯಾಪಿಯಾಗಿದ್ದ ಹಲವು ತಿನಿಸುಗಳು ಮತ್ತು ಆಹಾರಗಳು, ಈಚಿನ ವರ್ಷಗಳಲ್ಲಿ ನಿಧಾನವಾಗಿ ಮರೆಯಾಗುತ್ತಿರುವ ವಾಸ್ತವ ಅರಿವಾದೀತು.

ಆದರೆ, ವೈಯಕ್ತಿಕ ನೆಲೆಯಲ್ಲಿ ಪ್ರಯತ್ನಿಸಿದರೆ, ಹಳೆಯ ಕಾಲದ ತಿನಿಸುಗಳನ್ನು ನಮ್ಮ ಅಡುಗೆಮನೆಯಲ್ಲಿ ಮತ್ತೆ ತಯಾರಿಸಲು ಸಾಧ್ಯ. ಇದಕ್ಕೆ ಮುಖ್ಯವಾಗಿ, ಮನೆಯಲ್ಲಿ ಅಡುಗೆ ಮಾಡುವವರ ಆಸಕ್ತಿ ಸಹಕಾರ ಅಗತ್ಯ. ನಮ್ಮ ಮನೆಯಲ್ಲಿ, ಮಡದಿಯ ಸಹಕಾರದಿಂದ ಪುನಃ ಪ್ರತ್ಯಕ್ಷವಾದ ಒಂದು ಹಳೆಯ ಕಾಲದ ತಿನಿಸು, ಇಂದು ಆಗಾಗ ಮನೆಯವರೆಲ್ಲರ ನಾಲಗೆಯ ರುಚಿದಾಹವನ್ನು ತಣಿಸುತ್ತಿದೆ, 'ಇನ್ನೊಮ್ಮೆ ಮಾಡಿ ಬಡಿಸಿ' ಎಂದು ಹೇಳಿಸಿಕೊಳ್ಳುವಷ್ಟು ಮನಗೆದ್ದಿದೆ. ಅದೇ, ಹೀರೆಕಾಯಿ ದೋಸೆ. ನಮ್ಮ ಹಳ್ಳಿಯಲ್ಲಿ ಬಹು ಹಿಂದೆ ಗುಂಬಳ ಹೂವಿನ ದೋಸೆಯ ರೀತಿಯಲ್ಲೇ, ಹೀರೆಕಾಯಿ ದೋಸೆಯೂ ಜನಪ್ರಿಯವಾಗಿತ್ತು. ಕ್ರಮೇಣ, ನಮ್ಮಂಥ ಜನರು ಓದು ಬರಹ ಕಲಿತು ಪೇಟೆ-ಪಟ್ಟಣ ಸೇರಿದಂತೆ, ನಿಧಾನವಾಗಿ ಮರೆತುಹೋದ ತಿನಿಸುಗಳಲ್ಲಿ ಹೀರೆಕಾಯಿ ದೋಸೆಯೂ ಸೇರಿತ್ತು. ಅದೊಂದು ದಿನ, ''ಹೀರೆಕಾಯಿ ದೋಸೆ ಮುಂಚೆ ನಮ್ಮೂರಿನಲ್ಲಿ ಮಾಡುತ್ತಿದ್ದರು, ಈಚೆಗೆ ಕಡಿಮೆಯಾಗಿದೆಯಲ್ಲಾ! ಈಗಲೂ ನಮ್ಮ ಮನೆಯಲ್ಲಿ ತಯಾರಿಸೋಣ ಅಲ್ಲವೇ'' ಎಂದು ಮಡದಿ ಹೇಳಿದಾಗ, ನನಗಂತೂ ಬಹುಖುಷಿ; ತಕ್ಷಣ ಒಂದಷ್ಟು ಹೀರೆಕಾಯಿ ತಂದೆವು. ಒಣಮೆಣಸಿನ ಕಾಯಿಯೊಂದಿಗೆ ಅಕ್ಕಿಯನ್ನು ರುಬ್ಬಿ ಹಿಟ್ಟು ತಯಾರಿಸಿ, ದುಂಡಗೆ ಕತ್ತರಿಸಿದ ಹೀರೆಕಾಯಿ ಬಿಲ್ಲೆಗಳನ್ನು ಅದರಲ್ಲಿ ಅದ್ದಿ ದೋಸೆ ಕಲ್ಲಿನ ಮೇಲೆ ಒತ್ತೊತ್ತಾಗಿಟ್ಟು ದೋಸೆ ತಯಾರಿಸಲಾಯಿತು. ಇದಕ್ಕೂ ಅಷ್ಟೆ, ತುಸು ಎಣ್ಣೆಯ ಲೇಪನ ಅಧಿಕವಾಗಿಯೇ ಮಾಡಿದಾಗ, ಬಲುರುಚಿ. ಹೀರೆಕಾಯಿ ದೋಸೆಯು ಈಗ ಎಷ್ಟು ಇಷ್ಟವಾಗಿದೆ ಎಂದರೆ, ಒಂದೆರಡು ವಾರಗಳ ಅಂತರದಲ್ಲಿ ಹೀರೆಕಾಯಿ ದೋಸೆಯು ನಮ್ಮ ಮನೆಯಲ್ಲಿ ದೋಸೆಕಲ್ಲಿನ ಮೇಲೆ ಪ್ರತ್ಯಕ್ಷವಾಗುತ್ತದೆ, ನಾಲಗೆಯ ರುಚಿದಾಹವನ್ನು ತಣಿಸುತ್ತದೆ. ಹೀರೆಕಾಯಿಯು ಹೆಚ್ಚು ಫೈಬರ್ ಇರುವ ತರಕಾರಿ; ಅದು ದೋಸೆಯ ರೂಪದಲ್ಲಿ ಹೊಟ್ಟೆ ಸೇರಿದರೆ, ಆರೋಗ್ಯಕ್ಕೂ ಒಳ್ಳೆಯದು. ಇದನ್ನು ಬೆಳಗಿನ ತಿಂಡಿಗಿಂತಲೂ, ಮಧ್ಯಾಹ್ನದ ಊಟದೊಂದಿಗೆ ಸೇವಿಸಿದರೆ, ಹೆಚ್ಚು ಉಪಯೋಗ ಎಂಬ ಅನುಭವ ನಮ್ಮದು. ಹಾಗೆ ನೋಡಿದರೆ, ಹೀರೆಕಾಯಿ ದೋಸೆಯು ನಮ್ಮ ಹಳ್ಳಿಯಲ್ಲಿ ಅಡುಗೆಮನೆಯಿಂದ ಪೂರ್ತಿ ಕಣ್ಮರೆಯಾಗಿಲ್ಲ, ಮಲೆನಾಡು ಮತ್ತು ಕರಾವಳಿಯ ಜನರು ಈಗಲೂ ಈ ರುಚಿಕರ ದೋಸೆಯನ್ನು ಆಗಾಗ ತಯಾರಿಸಿ ತಿನ್ನುತ್ತಿದ್ದಾರೆ. ಆದರೆ, ರೆಸ್ಟೋರೆಂಟುಗಳಲ್ಲಿ ತುಸು ಅಪರೂಪ; ಬೆಂಗಳೂರಿನಲ್ಲಿ ನೂರು ರೀತಿಯ ದೋಸೆ ತಯಾರಿಸುವ ಒಂದು ರೆಸ್ಟೋರೆಂಟಿನಲ್ಲಿ ಇದನ್ನು ಕಂಡಿದ್ದೆ. ಕಂಡಾಗ ಅಚ್ಚರಿಯೂ ಆಗಿತ್ತು. 'ಪರವಾಗಿಲ್ವೆ, ಸರಳ ತರಕಾರಿಯಾದ ಹೀರೆಕಾಯಿಯು ಬೆಂಗಳೂರಿನಂಥ ಮಹಾನಗರದಲ್ಲೂ ದೋಸೆಯ ರೂಪ ತಳೆದಿದೆಯಲ್ಲಾ, ಭಲೇ ಹೀರೆಕಾಯಿ' ಎಂಬ ಉದ್ಗಾರ ಮೂಡಿತ್ತು.

ನಮ್ಮ ಹಳ್ಳಿಯ ಇನ್ನೊಂದು ರುಚಿಕರ ಮತ್ತು ಅಷ್ಟೇ ಆರೋಗ್ಯಪೂರ್ಣ ತಿನಿಸು ಎಂದರೆ ಕೆಸುವಿನ ಸೊಪ್ಪಿನ ದೋಸೆ ಅಥವಾ ಚಟ್ಟಿ. ಮಳೆಗಾಲದಲ್ಲಿ ಮನೆಯ ಸುತ್ತಲೂ, ದಾರಿಯ ಬದಿಯಲ್ಲಿ, ಗದ್ದೆಯ ಬದಿಯಲ್ಲಿ ಬೆಳೆಯುವ ಕೆಸುವಿನ ಸೊಪ್ಪನ್ನು ಸಣ್ಣಗೆ ಹೆಚ್ಚಿ, ಗುಂಬಳ ಹೂವಿನ ರೀತಿಯಲ್ಲೇ, ಅಕ್ಕಿ ಹಿಟ್ಟಿನೊಂದಿಗೆ ಬೆರೆಸಿ, ದೋಸೆ ಕಲ್ಲಿನ ಮೇಲಿಟ್ಟು ತಯಾರಿಸುವ ಈ ದೋಸೆ, ಪೌಷ್ಟಿಕಾಂಶಗಳ ಆಗರ. ಇದರಲ್ಲಿ, ಕರಿ ಕೆಸುವಿನ ಸೊಪ್ಪಾದರೆ ತುಸು ರುಚಿ; ಮರಕೆಸುವಿನ ಸೊಪ್ಪಾದರೆ ಇನ್ನೂ ರುಚಿ. ಕೆಸುವಿನ ಸೊಪ್ಪಿನ ಪತ್ರೊಡೆಗೂ ಇದಕ್ಕೂ ಬಹಳ ವ್ಯತ್ಯಾಸವಿದೆ. ವಿಶೇಷವೆಂದರೆ, ಕೆಸುವಿನ ಸೊಪ್ಪಿನ ದೋಸೆಯು ನಿಧಾನವಾಗಿ ಮರೆಯಾಗುತ್ತಿದೆ, ಆದರೆ ಕೆಸುವಿನ ಸೊಪ್ಪಿನ ಪತ್ರೊಡೆಯು ಪೇಟೆಗಳಲ್ಲಿ, ನಗರಗಳಲ್ಲಿ ಈಗ ಜನಪ್ರಿಯ ಖಾದ್ಯವಾಗಿ ಪ್ರವರ್ಧಮಾನಕ್ಕೆ ಬಂದಿದೆ.

ಹಳೆಯ ಕಾಲದ ಕೆಲವು ಖಾದ್ಯಗಳು ಈಚಿನ ವರ್ಷಗಳಲ್ಲಿ, ಫ್ಯಾಷನ್‌ಗಾಗಿಯೋ, ಪ್ಯಾಷನ್ ನಿಂದಲೋ ಪೇಟೆಯಲ್ಲೂ ಪರಿಚಯಗೊಳ್ಳುತ್ತಿರುವುದು, ಈ ಶತಮಾನದ ವಿಶೇಷ ಎಂದೇ ಹೇಳಬಹುದು. ಅಂಥವುಗಳಲ್ಲೊಂದು ತಂಬುಳಿ! ಹಿಂದೆ ಮಲೆನಾಡು ಮತ್ತು ಕರಾವಳಿಯಲ್ಲಿ ಮಾತ್ರ ಬಳಕೆಯಲ್ಲಿದ್ದ ತಂಬುಳಿಯು ಇಂದು ಬೆಂಗಳೂರಿನ ವಿಶೇಷದ ಅಡುಗೆಗಳಲ್ಲೂ ಸ್ಥಾನ ಪಡೆದಿರುವುದು ವಿಸ್ಮಯವೇ ಸರಿ. ಇದಕ್ಕೆ ಅಡುಗೆ ಭಟ್ಟರೆ ಕೊಡುಗೆಯೂ ಇರಬಹುದಾದರೂ, ಅದರ ರುಚಿಗೆ ಮನಸೋತ ನಗರ ಗ್ರಾಹಕರು ಅದನ್ನು ತಮ್ಮ ರೆಸಿಪಿಯಲ್ಲಿ ಸೇರಿಸಿಕೊಳ್ಳಲು ಇಷ್ಟಪಟ್ಟಿದ್ದಂತೂ ಹೌದು. ತಂಬುಳಿಗಳ ಕುರಿತು ಹೇಳುತ್ತಾ ಹೋದರೆ, ಸಾಕಷ್ಟು ವಿಚಾರಗಳಿವೆ. ಆರೋಗ್ಯದ ದೃಷ್ಟಿಯಲ್ಲಿ, ಔಷಧೀಯ ಅಂಶಗಳನ್ನು ನಮಗೆ ನೀಡುವ ನಿಟ್ಟಿನಲ್ಲಿ ತಂಬುಳಿಗಳ ಪಾತ್ರ ಬಲು ಹಿರಿದು. ಉದಾಹರಣೆಗೆ ಮೆಂತೆ ಕಾಳಿನ ತಂಬುಳಿ ರುಚಿಕರ ಮತ್ತು ಅದನ್ನು ಸೇವಿಸಿದರೆ ಅಸಿಡಿಸಿಯನ್ನು ನಿಯಂತ್ರಿಸಬಹುದು. ಒಂದೆಲಗ ಸೊಪ್ಪಿನ ತಂಬುಳಿಯನ್ನು ಸೇವಿಸಿದರೆ, ಸ್ಮರಣ ಶಕ್ತಿ ಅಧಿಕವಾಗುತ್ತದೆಂಬ ನಂಬಿಕೆ ಇದೆ. ವಿವಿಧ ಸೊಪ್ಪುಗಳ ತಂಬುಳಿ ತಯಾರಿಸಬಹುದು. ನೇರಳೆ ಎಲೆ, ಚಗಟೆ ಸೊಪ್ಪು ಮೊದಲಾದ ತೀರಾ ಸಾಮಾನ್ಯ ಎನಿಸುವ ಎಲೆಗಳಿಂದಲೂ ತಂಬುಳಿ ತಯಾರಿಸುವ ಪದ್ಧತಿ ಕರಾವಳಿಯಲ್ಲಿದೆ. ತಂಬುಳಿ ತಯಾರಿಸುವುದು ಬಲು ಸುಲಭ. ಬಯಲು ಸೀಮೆಯವರು ಸಹ ಇಂದು ಸುಲಭವಾಗಿ ತಂಬುಳಿ ತಯಾರಿಸುತ್ತಿದ್ದಾರೆ. ಏಕೆಂದರೆ, ಅದರ ರೆಸಿಪಿಯು ಸುಲಭವಾಗಿ ಆನ್‌ಲೈನ್‌ನಲ್ಲಿ ದೊರಕುತ್ತಿದೆ. ತಂಬುಳಿಯ ಇನ್ನೊಂದು ಲಾಭವೆಂದರೆ, ಹೆಚ್ಚಿನ ಕೆಲಸವಿಲ್ಲದೆ, ಊಟಕ್ಕೆ ಸೂಕ್ತ ವ್ಯಂಜನವಾಗಿ ಇದನ್ನು ಬಳಸಬಹುದು!

ಹಳೆಯ ಕಾಲದ ತಿನಿಸುಗಳ ಕುರಿತು ಯೋಚಿಸುತ್ತಾ ಹೋದರೆ, ಸಣ್ಣದಾಗಿ ವಿಸ್ಮಯ ಎನಿಸುವ ವಿಚಾರಗಳೂ ಎದುರಾಗುತ್ತಿವೆ. ವಿಜ್ಞಾನ ಬೆಳೆದಂತೆಲ್ಲಾ, ಹೊಸ ಹೊಸ ವಿಷಯಗಳು ಬೆಳಕಿಗೆ ಬರುತ್ತಿವೆ. ಅವುಗಳಲ್ಲಿ ಒಂದು ಎಂದರೆ, ಹಲಸಿನ ಎಲೆಯಲ್ಲಿರುವ ಔಷಧೀಯ ಗುಣ. ಹಲಸಿನ ಎಲೆಯಲ್ಲಿ ಬಹು ಅಪರೂಪದ ರೋಗಗಳನ್ನು, ದೇಹದ ಸಮಸ್ಯೆಗಳನ್ನು ವಾಸಿಮಾಡುವ ಅಂಶಗಳಿವೆಯಂತೆ. ಆದರೆ, ಅದನ್ನು ಅಡುಗೆಯಲ್ಲಿ ಬಳಸುವುದು ಹೇಗೆ? ಅದಕ್ಕೆ ಸರಳ ಪರಿಹಾರವೆಂದರೆ, ಹಲಸಿನ ಎಲೆಯ ಕೊಟ್ಟೆ (ಮೂಡೆ) ಕಡುಬು. ಇದೊಂದು ಬಹು ಸುಲಭವಾಗಿ ತಯಾರಿಸಬಹುದಾದ ತಿನಿಸು. ನಮ್ಮ ರಾಜ್ಯದ ಹಲವರಿಗೆ ಹಲಸಿನ ಎಲೆಯನ್ನು ಈ ರೀತಿ ಬಳಸಬಹುದು ಎಂದೇ ಗೊತ್ತಿಲ್ಲ. ಇಡ್ಲಿ ತಯಾರಿಸುವ ಹಿಟ್ಟನ್ನು ಹಲಸಿನ ಎಲೆಯಲ್ಲಿಟ್ಟು ಬೇಯಿಸಿದರೆ ಕೊಟ್ಟೆ ಕಡುಬು ಸಿದ್ಧ. ನಾಲ್ಕು ಹಲಸಿನ ಎಲೆಗಳನ್ನು ಕಡ್ಡಿ ಸಹಾಯದಿಂದ ಬಂಧಿಸಿ, ಪುಟ್ಟ ಲೋಟದ ಆಕೃತಿಯನ್ನಾಗಿಸಿ, ಅದರಲ್ಲಿ ಇಡ್ಲಿ ಹಿಟ್ಟನ್ನು ಸುರಿದು, ಹಬೆಯಲ್ಲಿ ಬೇಯಿಸಿದರಾಯಿತು. ಎಲೆಯೊಳಗೆ ಹಿಟ್ಟು ಬೇಯುವುದರಿಂದಾಗಿ, ತಯಾರಾಗುವ ಕಡುಬು ಅಥವಾ ಇಡ್ಲಿಗೆ ವಿಶೇಷ ಮೃದುತ್ವ ಬರುತ್ತದೆ, ರುಚಿಯೂ ಬರುತ್ತದೆ. ಹಲಸಿನ ಎಲೆಯಲ್ಲಿರಬಹುದಾದ ಔಷಧೀಯ ಅಂಶಗಳು ಸಹ, ಹಬೆಯಲ್ಲಿ ಬೇಯುವಾಗ, ಕಡುಬಿನಲ್ಲಿ ಸೇರಿಕೊಳ್ಳುತ್ತವೆ.

ಇಂದು ಪಟ್ಟಣ ಮತ್ತು ನಗರದಲ್ಲಿರುವವರಿಗೆ ಹಲಸಿನ ಎಲೆಯ ಕೊಟ್ಟೆಯನ್ನು ತಯಾರಿಸಲು ತಿಳಿದಿಲ್ಲ ಎಂದಿಟ್ಟುಕೊಳ್ಳೋಣ; ಅದಕ್ಕೆ ಒಂದು ಪರಿಹಾರವಿದೆ! ಹಲವು ಆನ್‌ಲೈನ್ ವ್ಯಾಪಾರ ಸಂಸ್ಥೆಗಳು ಹಲಸಿನ ಎಲೆಯ ಕೊಟ್ಟೆಯನ್ನು ಮಾರಾಟ ಮಾಡುತ್ತವೆ! (ಜ್ಯಾಕ್‌ಫ್ರುಟ್ ಲೀಫ್ ಇಡ್ಲಿ ಮೌಲ್ಡ್ ಅಥವಾ ಕೊಟ್ಟೆ ಎಂದು ಸರ್ಚ್ ಮಾಡಿ ನೋಡಿ!) ಅದನ್ನು ತರಿಸಿ, ಇಡ್ಲಿ ಹಿಟ್ಟನ್ನು ಹಾಕಿ ಬೇಯಿಸಿ ನೋಡಿ, ಬಲು ರುಚಿಯ ಹಲಸಿನ ಎಲೆಯ ಕೊಟ್ಟೆ ಕಡುಬು ಸಿದ್ಧವಾಗುತ್ತದೆ. ಬೆಂದ ನಂತರ, ಎಲೆಯನ್ನು ತೆಗೆದಿಟ್ಟು, ಕಡುಬನ್ನು ಚಟ್ನಿ ಅಥವಾ ಸಾಂಬಾರಿನ ಜತೆ ಸೇವಿಸಬಹುದು!

ನಮ್ಮ ರಾಜ್ಯದ ಇತರ ಭಾಗಗಳಲ್ಲೂ ಹಲವು ಹಳೆಯ ತಿನಿಸುಗಳು ನಿಧಾನವಾಗಿ ಕಣ್ಮರೆಯಾಗುತ್ತಿವೆ. ಅದರಲ್ಲೂ ಮುಖ್ಯವಾಗಿ, ನಗರಗಳತ್ತ ವಿವಿಧ ಕಾರಣಗಳಿಂದ ವಲಸೆ ಬಂದವರು, ಹಳೆಯ ರೆಸಿಪಿಗಳನ್ನು ಮರೆಯುವುದು ಜಾಸ್ತಿ (ಒಮ್ಮೊಮ್ಮೆ ಅದು ಅನಿವಾರ್ಯವೂ ಹೌದು ಎಂಬ ವಾದವಿದೆ). ಆದರೆ, ಈಚಿನ ವರ್ಷಗಳಲ್ಲಿ ಮಹಾನಗರಗಳಲ್ಲಿ, ಹಳ್ಳಿಯ ತಿನಿಸುಗಳನ್ನು ನೆನಪಿಸುವ ರೆಸ್ಟೋರೆಂಟುಗಳು ಅಲ್ಲಲ್ಲಿ ತಲೆ ಎತ್ತುತ್ತಿರುವುದು ಮತ್ತೊಂದು ಆಧುನಿಕ ವಿದ್ಯಮಾನ! ಅಲ್ಲಿನ ಮೆನುವಿನಲ್ಲಿ, ಹೊಸ ತಿನಿಸುಗಳೇ ಜಾಸ್ತಿ ಕಾಣಿಸಿದರೂ, ರೆಸ್ಟೋರೆಂಟಿನ ಹೆಸರು ಹಳೆಯ ಕಾಲವನ್ನು ನೆನಪಿಸುವುದರಿಂದಾಗಿ, ಜನರು ಅವುಗಳತ್ತ ಆಕರ್ಷಿತರಾಗುತ್ತಿದ್ದಾರೆ! ಬೆಂಗಳೂರಿನಂಥ ಮಹಾನಗರದ ರೆಸ್ಟೋರೆಂಟುಗಳಲ್ಲಿ ಹಳೆಯ ಕಾಲದ ತಿನಿಸುಗಳು ದೊರೆಯುತ್ತಿರುವುದು ವಿಶೇಷ. ಕೆಲವು ರೆಸ್ಟೋರೆಂಟುಗಳ ಹೆಸರು ಸಹ ಹಳ್ಳಿಯ ಹೆಸರನ್ನು, ಕೈಯಿಂದ ತಯಾರಿಸುವ ರುಚಿಯನ್ನು ನೆನಪಿಸುತ್ತವೆ! ಏನಿದ್ದರೂ, ಹೊಸ ತಿನಿಸುಗಳನ್ನು ತಿಂದು ಅರಗಿಸಿಕೊಳ್ಳೋಣ, ಜತೆಯಲ್ಲೇ ಹಳೆಯ ತಿನಿಸುಗಳನ್ನು ಸಹ ಸೇವಿಸೋಣ!

## ಅನಿಸಿಕೆ

ಸಂದೀಪ್ ಶರ್ಮಾ

### ಕೌಶಲಾಧಾರಿತ ಬದುಕಿನ ಸಾರ

ವಿದ್ಯೆಯೇ ಮನುಷ್ಯನ ಶ್ರೇಷ್ಠ ಆಭರಣ, ಗುಪ್ತನಿಧಿ, ಅಕ್ಷಯ ಸಂಪತ್ತು. ದೇಹದ ಸೌಂದರ್ಯ ಕ್ಷೀಣಿಸಬಹುದು, ಧನ ಸಂಪತ್ತು ನಶಿಸಬಹುದು, ಆದರೆ ವಿದ್ಯೆಯಿಂದ ಉದ್ಭವಿಸುವ ಪ್ರಜ್ಞೆ ಮನುಷ್ಯನನ್ನು ಯುಗಾಂತರಗಳವರೆಗೆ ಚಿರಸ್ಥಾಯಿಯಾಗಿಸುತ್ತದೆ. ಆದಾಗ್ಯೂ, ಇಲ್ಲಿ ಪ್ರಶ್ನೆಯೊಂದು ಉದ್ಭವಿಸುತ್ತದೆ- ವಿದ್ಯೆಯನ್ನು ಅಳೆಯುವ ನಮ್ಮ ಮಾನದಂಡವೇನು? ಇಂದಿನ ಕಾಲಘಟ್ಟದಲ್ಲಿ ಪದವಿ ಎಂಬ ಪ್ರಮಾಣಪತ್ರವನ್ನೇ ವಿದ್ಯೆಯ ಪರ್ಯಾಯವೆಂದು ಭ್ರಮಿಸುವ ಮನೋಭಾವ ಸಮಾಜದಲ್ಲಿ ಬಲವಾಗಿ ನೆಲೆಯೂರಿದೆ. ಶಿಕ್ಷಣ ಎಂದರೆ ಉದ್ಯೋಗ ಪಡೆಯುವ ಸಾಧನ, ಜೀವನೋಪಾಯದ ಉಪಕರಣ- ಈ ಸೀಮಿತ ದೃಷ್ಟಿಕೋನವೇ ಇಂದಿನ ಶಿಕ್ಷಣ ವ್ಯವಸ್ಥೆಯ ಆಧಾರವಾಗಿಬಿಟ್ಟಿದೆ. ಆದರೆ, ಭಾರತೀಯ ಸಂಸ್ಕೃತಿಯಲ್ಲಿ ವಿದ್ಯೆ ಎಂದರೆ ಕೇವಲ ಮಾಹಿತಿಯ ಸಂಗ್ರಹವಲ್ಲ; ಅದು ವ್ಯಕ್ತಿತ್ವ ರೂಪಿಸುವ ಶಕ್ತಿ, ಜೀವನವನ್ನು ದಾರಿದೀಪಿಸುವ ಜ್ಯೋತಿ.

ಮಾಹಿತಿ ಎಂದರೆ ಹೊರಗಿನ ವಿಷಯಗಳ ಸಂಗ್ರಹ. ಪ್ರಜ್ಞೆ ಎಂದರೆ ಒಳಗಿನ ಪರಿಪಾಕ. ಮಾಹಿತಿಯು ಪುಸ್ತಕಗಳಲ್ಲಿ ದೊರೆಯುತ್ತದೆ. ಪ್ರಜ್ಞೆಯು ಅನುಭವದ ಅಗ್ನಿಯಲ್ಲಿ ತಪ್ತವಾಗುತ್ತದೆ. ಪರೀಕ್ಷೆಗೆ ತಯಾರಾಗುವ ವಿದ್ಯಾರ್ಥಿ ಉತ್ತರವನ್ನು ಕಣ್ತುಂಬಿಕೊಳ್ಳಬಹುದು; ಆದರೆ ಜೀವನದ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಅವನಲ್ಲಿ ಬೆಳೆಯುತ್ತದೆಯೇ? ಕೃಷಿ ಕಾಲೇಜಿನಲ್ಲಿ ಪದವಿ ಪಡೆದ ಅನೇಕರು ಕೃಷಿಕ್ಷೇತ್ರವನ್ನು ವೃತ್ತಿಯಾಗಿ ಆರಿಸಿಕೊಳ್ಳುವುದಿಲ್ಲ. ಪುಸ್ತಕದಲ್ಲಿ ಓದಿದ ಕೃಷಿಯೊಂದು, ಮಣ್ಣಿನೊಂದಿಗೆ ಸಂವಾದ ನಡೆಸಿ ಕಲಿತ ಕೃಷಿಯೊಂದು. ಭೂಮಿಯ ಸ್ಪಂದನವನ್ನು ಅರಿಯದವನಿಗೆ ಕೃಷಿಯ ತತ್ವ ತಿಳಿಯುವುದಿಲ್ಲ. ಮಳೆ ಯಾವಾಗ ಬರುವುದು, ಬೀಜ ಯಾವಾಗ ಬಿತ್ತುವುದು, ಮಣ್ಣಿನ ಸ್ವಭಾವ ಹೇಗಿದೆ- ಇವುಗಳನ್ನು ತಿಳಿಯುವುದು ಪುಸ್ತಕಪಾಠದಿಂದ ಮಾತ್ರ ಸಾಧ್ಯವಲ್ಲ, ಅದು ಅನುಭವದಿಂದಲೇ ಸಾಧ್ಯ. ಈ ಅಂತರವೇ ಮಾಹಿತಿ ಮತ್ತು ಪ್ರಜ್ಞೆಯ ನಡುವಿನ ಸೂಕ್ಷ್ಮ ಭೇದ. ಮಾಹಿತಿಯು ಮನಸ್ಸನ್ನು ತುಂಬಬಹುದು; ಪ್ರಜ್ಞೆ ಮನಸ್ಸನ್ನು ರೂಪಿಸುತ್ತದೆ.

ಹಳ್ಳಿಯ ಪಂಡಿತನಿಗೆ ವೈದ್ಯಕೀಯ ಪದವಿ ಇರಲಿಲ್ಲ, ಆದರೆ ಅನುಭವ ಪರಿಪಾಕದಿಂದ ಹುಟ್ಟಿದ ಜ್ಞಾನವಿತ್ತು. ಯಾವ ಗಿಡದ ಎಲೆ/ಬೇರು ಯಾವ ನೋವನ್ನು ಶಮನಗೊಳಿಸುತ್ತದೆ ಎಂಬುದನ್ನು ಅವರು ಕಲಿತಿದ್ದರು. ಪ್ರಮಾಣಪತ್ರವಿಲ್ಲದ ಜ್ಞಾನವನ್ನು ನಾವು ಅಲ್ಪಗಣಿಸುವುದು ಯುಕ್ತವೇ? ಅನುಭವವೇ ಪ್ರಮಾಣ ಎಂಬ ಭಾರತೀಯ ತತ್ತ್ವ ಇಲ್ಲಿ ಸ್ಪಷ್ಟವಾಗುತ್ತದೆ.

ಬ್ರಿಟಿಷರ ಕಾಲದಲ್ಲಿ ಮೆಕಾಲೆ ರೂಪಿಸಿದ ಶಿಕ್ಷಣ ವ್ಯವಸ್ಥೆಯು ಭಾರತದಲ್ಲಿ ಹೊಸ ಮನೋಭಾವವನ್ನು ಹುಟ್ಟುಹಾಕಿತು. ಶಿಕ್ಷಣವು ಆಡಳಿತಕ್ಕೆ ಬೇಕಾದ ನೌಕರರನ್ನು ಸೃಷ್ಟಿಸಿತು; ಆದರೆ ಸಮಾಜದ ಮೂಲಭೂತ ಕೌಶಲಾಧಾರಿತ ಜ್ಞಾನಪರಂಪರೆಯನ್ನು ಉತ್ತೇಜಿಸಲಿಲ್ಲ. ವೃತ್ತಿಪರ ಜ್ಞಾನಕ್ಕೆ ಇದ್ದ ಗೌರವ ನಿಧಾನವಾಗಿ ಕುಂದಿತು. ಕೃಷಿಕ, ಕಮ್ಮಾರ, ಕುಂಬಾರ- ಇವರೆಲ್ಲರೂ ತಮ್ಮ ಕೌಶಲದಲ್ಲಿ ಪರಿಣತರು. ಆದರೆ ಪದವೀಧರ ಉದ್ಯೋಗಿಯೇ ಶಿಕ್ಷಿತ ಎಂಬ ಕಲ್ಪನೆ ಬಲವತ್ತಾಯಿತು. ಆಧುನಿಕ ಶಿಕ್ಷಣವನ್ನು ಸಂಪೂರ್ಣವಾಗಿ ತಿರಸ್ಕರಿಸುವುದು ಯುಕ್ತವಲ್ಲ; ಅದೇ ರೀತಿಯಾಗಿ ಪರಂಪರೆಯನ್ನು ನಿರ್ಲಕ್ಷಿಸುವುದೂ ಸಮಂಜಸವಲ್ಲ. ಸಮನ್ವಯವೇ ಮಾರ್ಗ. ಕೌಶಲಾಧಾರಿತ ಜ್ಞಾನವನ್ನು ಪಠ್ಯಕ್ರಮದಲ್ಲಿ ಅಳವಡಿಸುವುದು ಕಾಲದ ಅಗತ್ಯ. ಹಿರಿಯರ ಅನುಭವವನ್ನು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ಮಾಡಬೇಕು. ವಿಶ್ವವಿದ್ಯಾಲಯದ ಪದವೀಧರನಿಗೂ, ಅನುಭವಸಂಪನ್ನ ಕಾರ್ಮಿಕನಿಗೂ ಸಮಾನ ಗೌರವ ನೀಡುವ ಮನೋಭಾವ ಬೆಳೆಯಬೇಕು. ವಿದ್ಯೆ ಎಂಬ ಪದದ ಅರ್ಥವನ್ನು ಪುನಃ ಪರಿಗಣಿಸುವ ಅವಶ್ಯಕತೆ ಇದೆ. ವಿದ್ಯೆ ಎಂದರೆ ಕೇವಲ ಉದ್ಯೋಗಪ್ರಾಪ್ತಿ ಅಲ್ಲ; ಅದು ಸಂಸ್ಕಾರ, ಶೀಲ, ತತ್ವಜ್ಞಾನ, ಕೌಶಲ ಇವೆಲ್ಲದರ ಸಮಗ್ರ ರೂಪ. ಭಾರತೀಯ ಜ್ಞಾನಪರಂಪರೆ ವಿಶಾಲವಾಗಿದೆ. ಆಯುರ್ವೇದದಿಂದ ಶಿಲ್ಪಶಾಸ್ತ್ರದವರೆಗೆ, ಸಂಗೀತದಿಂದ ಗಣಿತದವರೆಗೆ ಎಲ್ಲ ಕ್ಷೇತ್ರಗಳಲ್ಲೂ ನಮ್ಮ ಪರಂಪರೆ ಆಳವಾದ ಜ್ಞಾನವನ್ನು ಸಂಗ್ರಹಿಸಿದೆ. ಈ ಪರಂಪರೆಯನ್ನು ಗುರುತಿಸಿ, ಅನುಭವಿಗಳನ್ನು ಮಾನ್ಯಗೊಳಿಸಿ, ಅವರ ಜ್ಞಾನವನ್ನು ಮುಂದಿನ ಪೀಳಿಗೆಗೆ ಹಂಚುವುದು ನಮ್ಮ ಕರ್ತವ್ಯವಾಗಬೇಕು. ಆಧುನಿಕತೆ ಮತ್ತು ಪರಂಪರೆ ಪರಸ್ಪರ ವಿರೋಧಿಗಳಲ್ಲ, ಪರಸ್ಪರ ಪೂರಕಗಳು. ಜ್ಞಾನ ಮತ್ತು ಕೌಶಲಗಳ ಸಮನ್ವಯದಲ್ಲಿ ರೂಪುಗೊಳ್ಳುವ ಸಮಾಜವೇ ನಿಜವಾದ ಸಮೃದ್ಧ ಸಮಾಜ. ಅಲ್ಲಿ ಪದವಿ ಅಲಂಕಾರ, ಆದರೆ ಪ್ರಜ್ಞೆ ಆಭರಣ. ವಿದ್ಯೆಯ ಅಂತರಾರ್ಥವನ್ನು ಅರಿತು, ಅನುಭವದ ಅಗ್ನಿಯಲ್ಲಿ ತಪ್ತವಾದ ಜ್ಞಾನವನ್ನು ಗೌರವಿಸುವ ಮನೋಭಾವ ಬೆಳೆದಾಗ ಮಾತ್ರ, ನಮ್ಮ ಸಮಾಜವು ಸಮಗ್ರವಾಗಿ ಬೆಳೆಯುತ್ತದೆ. ಇದೇ ಜ್ಞಾನಪರಂಪರೆಯ ಸಂದೇಶ, ಇದೇ ಕೌಶಲಾಧಾರಿತ ಬದುಕಿನ ಸಾರ.

**(ಲೇಖಕರು ಸಿವಿಲ್ ಎಂಜಿನಿಯರ್)**

# ಕ್ಯಾನ್ಸರ್‌ನಿಂದ ಸೌಂದರ್ಯದವರೆಗೆ: ಶಸ್ತ್ರಚಿಕಿತ್ಸಾ ತಜ್ಞರ ಅದ್ಭುತ ಲೋಕ

ತನ್ನಿಮಿತ್ತ

ಡಾ. ಗುರುರಾಜ ಅರಕೇರಿ

vveditoped@gmail.com

ಕೆಲವು ತಿಂಗಳುಗಳ ಹಿಂದಿನ ಮಾತು. ಒಂದು ಮಧ್ಯಾಹ್ನ ನನ್ನ ಚಿಕಿತ್ಸಾಲಯಕ್ಕೆ ಮಧ್ಯವಯಸ್ಕ ಶಾಲಾಶಿಕ್ಷಕರೊಬ್ಬರು ಬಂದಿದ್ದರು. ಅವರ ಬಾಯಿಯಲ್ಲಿ ಒಂದು ರುಪಾಯಿ ಗಾತ್ರದ ಬಿಳಿಹುಣ್ಣು ಆಗಿತ್ತು. ''ಡಾಕ್ಟ್ರೇ, ಇದು 2 ತಿಂಗಳಿಂದ ಹೀಗೇ ಇದೆ, ನೋವೇನೂ ಇಲ್ಲ, ಆದರೆ ವಾಸಿಯಾಗುತ್ತಿಲ್ಲ'' ಎಂದರು. ಅವರು ಮೊದಲು ತಮ್ಮೂರಿನ ಆರೋಗ್ಯ ಕೇಂದ್ರಕ್ಕೆ ಹೋಗಿ ತೋರಿಸಿದಾಗ ಅಲ್ಲಿನ ವೈದ್ಯರು, ''ಹಲ್ಲಿನ ತೊಂದರೆ ಇರಬೇಕು. ಚೂಪಾಗಿರುವ ಹಲ್ಲು ಕಚ್ಚಿ ಹುಣ್ಣಾಗಿರಬೇಕು. ಹಲ್ಲು ತೆಗೆಸಿದರೆ ಸರಿಹೋಗುತ್ತೆ'' ಎಂದು ಹೇಳಿ ಕಳಿಸಿದ್ದರಂತೆ. ಶಿಕ್ಷಕರು ಅಂತೆಯೇ ಮಾಡಿದರೂ ಹುಣ್ಣು ಮಾತ್ರ ಮಾಯವಾಗಲಿಲ್ಲ, ಬದಲಿಗೆ ಇನ್ನೂ ಸ್ವಲ್ಪ ಹೆಚ್ಚಾಯಿತು.

ನಾನದನ್ನು ಎಚ್ಚರಿಕೆಯಿಂದ ಪರೀಕ್ಷಿಸಿದೆ. ಆ ಹುಣ್ಣಿನ ಅಂಚುಗಳು ಮೇಲೆದ್ದಿದ್ದವು, ನಡುಭಾಗ ಕುಳಿಯಾಗಿತ್ತು. ಮುಟ್ಟಿದರೆ ಕಲ್ಲಿನಂತೆ ಗಟ್ಟಿ. ಸುತ್ತಲಿನ ಅಂಗಾಂಶ ಬಿಳುಚಿಕೊಂಡಿತ್ತು. ನನಗೆ ಅದು ಕ್ಯಾನ್ಸರ್‌ನ ಎಚ್ಚರಿಕೆಯ ಗಂಟೆಯಂತೆ ಕಂಡು, ತಕ್ಷಣವೇ ಬಯಾಪ್ಸಿ ಮತ್ತು ಸಿ.ಟಿ. ಸ್ಕ್ಯಾನ್ ಮಾಡಿಸುವಂತೆ ಆಗ್ರಹಿಸಿದೆ. ನನ್ನನ್ನು ಅನುಮಾನದಿಂದ ನೋಡಿದ ಶಿಕ್ಷಕರು, ''ನೀವೇನು ಕ್ಯಾನ್ಸರ್ ಡಾಕ್ಟ್ರಾ? ನೀವು ಹಲ್ಲಿನ ಡಾಕ್ಟರು ತಾನೇ?'' ಎಂದಾಗ, ದಂತವೈದ್ಯದ ಜತೆಗೆ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸೆಯಲ್ಲೂ ನನಗೆ ಪರಿಣತಿ ಇರುವುದರ ಕುರಿತು ಹೇಳಿ, ಬಾಯಿಯ ಕ್ಯಾನ್ಸರ್ ನಮ್ಮ ವಿಶೇಷತೆಯ ಪ್ರಮುಖ ಭಾಗ ಎಂದು ಮನವರಿಕೆ ಮಾಡಿಕೊಡಲು ಯತ್ನಿಸಿದರೂ ಆ ಶಿಕ್ಷಕರು ಅದಕ್ಕೆ ಕಿವಿಗೊಡಲಿಲ್ಲ. ''ಬೇಡ ಡಾಕ್ಟ್ರೇ, ಸುಮ್ಮನೇ ದುಡ್ಡು ಖರ್ಚು. ಒಂದಿಷ್ಟು ಗುಳಿಗೆ ಕೊಡಿ'' ಎಂದು ಹೇಳಿ ಹೊರಟೇಬಿಟ್ಟರು!

ಮೂರು ತಿಂಗಳ ನಂತರ ಅಮ್ಮ ಅದೇ ಶಿಕ್ಷಕರು ನನ್ನ ಚಿಕಿತ್ಸಾಲಯಕ್ಕೆ ಬಂದಾಗ ಅವರ ರೂಪವೇ ಬದಲಾಗಿತ್ತು. ಮುಖ ಊದಿಕೊಂಡಿತ್ತು, ಕೆನ್ನೆಯಲ್ಲಿ ದೊಡ್ಡ ಗಾಯ. ಕ್ಯಾನ್ಸರ್ ಎಂಬುದು ಬಾಯಿಯಿಂದ ಕೆನ್ನೆಯ ಚರ್ಮವನ್ನು ಭೇದಿಸಿ ಹೊರಬಂದಿತ್ತು. ಕುತ್ತಿಗೆಯಲ್ಲಿ ದೊಡ್ಡ ದೊಡ್ಡ ಗಡ್ಡೆಗಳು, ದುಗ್ಧರಸ ಗ್ರಂಥಿಗಳಿಗೂ ಕ್ಯಾನ್ಸರ್ ಹರಡಿತ್ತು. ಕುತ್ತಿಗೆಯಲ್ಲಿ ರಂಧ್ರ ಬಿದ್ದು, ಬಾಯಿಂದ ಆಹಾರ ಅಲ್ಲಿಗೆ ಸೋರುತ್ತಿತ್ತು. ಪರೀಕ್ಷೆ ಮಾಡಿಸಿದಾಗ ಕ್ಯಾನ್ಸರ್ ಶ್ವಾಸಕೋಶಕ್ಕೂ ಹರಡಿಬಿಟ್ಟಿರುವುದು ಗೊತ್ತಾಯಿತು. ಮುಂದಿನ ಮೂರೇ ತಿಂಗಳಲ್ಲಿ ಅವರು ಇಲ್ಲವಾದರು.

ವೈದ್ಯಕೀಯ ವಿಶೇಷತೆಗಳ ಬಗ್ಗೆ ವಿದ್ಯಾವಂತರಲ್ಲೂ ಎಷ್ಟೊಂದು ಅರಿವಿನ ಕೊರತೆಯಿದೆ ಎಂಬುದನ್ನು ಈ ಘಟನೆ ತೋರಿಸುತ್ತದೆ. ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಾ ತಜ್ಞರನ್ನು ಇಂದಿಗೂ ಕೇವಲ 'ಹಲ್ಲಿನ ಡಾಕ್ಟರ್' ಎಂದು ನೋಡಲಾಗುತ್ತದೆ ಎಂಬುದು ದುರದೃಷ್ಟಕರ. ಮುಖ ಮತ್ತು ದವಡೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಜನರು, ಈ ವಿಷಯದಲ್ಲಿ ತಜ್ಞರಲ್ಲದವರ ಬಳಿಗೆ ಹೋದರೆ ರೋಗನಿರ್ಣಯದಲ್ಲಿ ವಿಳಂಬ, ತಪ್ಪು ಚಿಕಿತ್ಸೆ, ತೊಡಕುಗಳು ಉಂಟಾಗಿ ಕೊನೆಗೆ ಜೀವಕ್ಕೇ ಸಂಚಕಾರ ತಂದುಕೊಳ್ಳಬೇಕಾಗುತ್ತದೆ. ಆದ್ದರಿಂದ, 'ವಿಶ್ವ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಾ ದಿನ'ವಾದ ಇಂದು (ಫೆ.13) ಒಂದು ಸತ್ಯವನ್ನು ಮನಗಾಣೋಣ. 'ಒಎಂಎಫ್‌ಎಸ್' ಎಂಬುದು ಕೇವಲ ಹಲ್ಲಿನ ಚಿಕಿತ್ಸೆಯಲ್ಲ, ಇದು ಜೀವ ಉಳಿಸಬಲ್ಲ ವೈದ್ಯಕೀಯ ವಿಶೇಷತೆ. 'ಒಎಂಎಫ್‌ಎಸ್' ಎಂದರೆ 'ಓರಲ್ ಆ್ಯಂಡ್ ಮ್ಯಾಕ್ಸಿಲೋಫೇಶಿಯಲ್ ಸರ್ಜರಿ' ಅಂದರೆ ಮುಖ ಮತ್ತು ದವಡೆಯ ಶಸ್ತ್ರಚಿಕಿತ್ಸೆ. 'ಮ್ಯಾಕ್ಸಿಲೋಫೇಶಿಯಲ್' ಎಂಬ ಪದದ ಅರ್ಥವೇ ಬಾಯಿಯ ಕುಹರಕ್ಕೆ ಸಂಬಂಧಿಸಿದ ಮುಖದ ಭಾಗ ಅಂತ. ಸರಳವಾಗಿ ಹೇಳುವುದಾದರೆ, ಇದು ಮುಖ ಮತ್ತು ದವಡೆಗೆ ಸಂಬಂಧಿಸಿದ ವೈದ್ಯಕೀಯ, ಶಸ್ತ್ರಚಿಕಿತ್ಸಾ ಹಾಗೂ ಮೂಳೆ ಚಿಕಿತ್ಸೆಯನ್ನು ಒಳಗೊಂಡ ವಿಶೇಷ ವಿಭಾಗ. ಈ ತಜ್ಞರು ಬಾಯಿಯ ಕುಹರಕ್ಕೆ ಸಂಪರ್ಕ ಹೊಂದಿರುವ ಮುಖದ ಎಲ್ಲಾ ಅಂಗಾಂಶಗಳ ಚಿಕಿತ್ಸೆಯಲ್ಲಿ ಪರಿಣತರಾಗಿರುತ್ತಾರೆ.

'ಒಎಂಎಫ್‌ಎಸ್' ತಜ್ಞರು ವಿವಿಧ ಕೌಶಲಗಳಲ್ಲಿ ತರಬೇತಿ ಪಡೆದಿರುತ್ತಾರೆ ಮತ್ತು ತಮ್ಮ ಪರಿಣತಿಗೆ ಅನುಗುಣವಾಗಿ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಾರೆ: ಮುಖದ ಮೂಳೆ ತಜ್ಞ (ಮುಖದ ಮೂಳೆ ಮುರಿತಗಳಿಗೆ ಚಿಕಿತ್ಸೆ), ಮುಖದ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸಕ (ಮುಖದ ಪುನರ್ನಿರ್ಮಾಣ ಮತ್ತು ಸೌಂದರ್ಯವರ್ಧನೆ), ಬಾಯಿಯ ಕ್ಯಾನ್ಸರ್ ಶಸ್ತ್ರಚಿಕಿತ್ಸಕ (ಬಾಯಿ ಮತ್ತು ಮುಖದ ಕ್ಯಾನ್ಸರ್ ಚಿಕಿತ್ಸೆ), ಮುಖದ ನರರೋಗ ತಜ್ಞ (ಮುಖದ ನರಗಳ ಸಮಸ್ಯೆಗಳಿಗೆ ಚಿಕಿತ್ಸೆ), ಮುಖದ ಸೌಂದರ್ಯ ತಜ್ಞ (ಬೋಟಾಕ್ಸ್, ಫಿಲ್ಲರ್ಸ್, ಫೇಸ್‌ಲಿಫ್ಟ್), ಕೂದಲು ಕಸಿ ತಜ್ಞ, ಮತ್ತು ಮುಖದ ಪುನರ್ನಿರ್ಮಾಣ ಸೂಕ್ಷ್ಮ ಶಸ್ತ್ರಚಿಕಿತ್ಸಕ (ದೇಹದ ಇತರ ಭಾಗಗಳಿಂದ ಅಂಗಾಂಶ ತಂದು ಮುಖದ ಪುನರ್ನಿರ್ಮಾಣ). ಹೀಗೆ, ಮುಖವೆಂಬ ಮಾನವ ದೇಹದ ಅತ್ಯಂತ ಸಂಕೀರ್ಣ ಮತ್ತು ಸೂಕ್ಷ್ಮ ಭಾಗದ ಸಮಗ್ರ ಆರೈಕೆ ಇವರ ಕೈಯಲ್ಲಿದೆ.

**1. ದಂತ ಶಸ್ತ್ರಚಿಕಿತ್ಸೆ :** ಸಾಮಾನ್ಯ ಹಲ್ಲು ತೆಗೆಯುವಿಕೆಯಿಂದ ಹಿಡಿದು, ದವಡೆಯ ಮೂಳೆಯೊಳಗೆ ಹುದುಗಿರುವ ಬುದ್ಧಿ ಹಲ್ಲುಗಳ ಸಂಕೀರ್ಣ ಶಸ್ತ್ರಚಿಕಿತ್ಸೆಯವರೆಗೆ 'ಒಎಂಎಫ್‌ಎಸ್' ತಜ್ಞರು ನಿರ್ವಹಿಸುತ್ತಾರೆ. ಈ ಶಸ್ತ್ರಚಿಕಿತ್ಸೆಗಳಲ್ಲಿ ಮುಖದ ನರಗಳು, ರಕ್ತನಾಳಗಳು ಮತ್ತು ದವಡೆಯ ಮೂಳೆಗೆ ಯಾವುದೇ ಹಾನಿಯಾಗದಂತೆ ಅತ್ಯಂತ ಜಾಗರೂಕತೆಯಿಂದ ಕಾರ್ಯನಿರ್ವಹಿಸಲಾಗುತ್ತದೆ. ತೊಡಕುಗಳು ಉಂಟಾದರೂ ಅವುಗಳನ್ನು ಸಮರ್ಥವಾಗಿ ನಿಭಾಯಿಸುವ ಪರಿಣತಿ ಇವರಿಗಿರುತ್ತದೆ.

ಮಧುಮೇಹ, ಹೃದಯ ಸಮಸ್ಯೆ, ರಕ್ತವನ್ನು ತೆಳುವಾಗಿಸುವ ಔಷಧಿ ಸೇವಿಸುತ್ತಿರುವವರು, ಮೂತ್ರಪಿಂಡ ವೈಫಲ್ಯ ಇರುವ ರೋಗಿಗಳಿಗೂ ವಿಶೇಷ ಮುನ್ನೆಚ್ಚರಿಕೆಯೊಂದಿಗೆ ಸುರಕ್ಷಿತ ಚಿಕಿತ್ಸೆ ನೀಡಲಾಗುತ್ತದೆ. ಹಲ್ಲಿನ ಸೋಂಕು ಗಂಟಲಿಗೆ, ಎದೆಗೆ ಅಥವಾ ಮಿದುಳಿಗೆ ಹರಡಿ ಜೀವಕ್ಕೆ ಅಪಾಯವಾದ ಪ್ರಕರಣಗಳಲ್ಲಿ ತುರ್ತು ಶಸ್ತ್ರಚಿಕಿತ್ಸೆಯ ಮೂಲಕ ಜೀವ ರಕ್ಷಿಸಲಾಗುತ್ತದೆ.

**3. ದವಡೆಯ ರೋಗಶಾಸ್ತ್ರ :** ದವಡೆಯ ಮೂಳೆಗಳು ವಿವಿಧ ಕಾರಣಗಳಿಂದ ಹಲವಾರು ರೋಗಗಳಿಗೆ ತುತ್ತಾಗಬಹುದು. ದವಡೆಯಲ್ಲಿ 'ನೀರುತುಂಬಿದ ಚೀಲಗಳು' ಎಂದು ಕರೆಯಬಹುದಾದ 'ಸಿಸ್ಟ್‌ಗಳು' (ರ್‍ಯಾಡಿಕ್ಯುಲರ್ ಸಿಸ್ಟ್, ಡೆಂಟಿಜೆರಸ್ ಸಿಸ್ಟ್, ಕೆರಟೋಸಿಸ್ಟ್) ಮತ್ತು ಗಡ್ಡೆಗಳು (ಅಮೆಲೋಬ್ಲಾಸ್ಟೋಮಾ, ದೈತ್ಯಕೋಶ ಗಡ್ಡೆ, ಫೈಬ್ರಸ್ ಡಿಸ್‌ಪ್ಲೇಸಿಯಾ) ಬೆಳೆಯಬಹುದು. ಜತೆಗೆ ಮೂಳೆ ಸೋಂಕು (ಆಸ್ಟಿಯೋಮೈಲೈಟಿಸ್) ಮತ್ತು ಔಷಧಿ-ಸಂಬಂಧಿತ ಮೂಳೆ ಕೊಳೆತದಂಥ (ಎಂಆರ್‌ಒಎನ್‌ಜೆ) ಸಮಸ್ಯೆಗಳೂ ಕಾಣಿಸಿಕೊಳ್ಳಬಹುದು. ಇವೆಲ್ಲವೂ ದವಡೆಯ ಮೂಳೆಯನ್ನು ನಾಶಮಾಡುವ ಸಾಮರ್ಥ್ಯ ಹೊಂದಿವೆ. 'ಒಎಂಎಫ್‌ಎಸ್' ತಜ್ಞರು ಈ ಎಲ್ಲಾ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಚಿಕಿತ್ಸೆ ಮಾಡುತ್ತಾರೆ. ಶಸ್ತ್ರಚಿಕಿತ್ಸೆಯ ಮೂಲಕ ರೋಗಗ್ರಸ್ತ ಭಾಗವನ್ನು ತೆಗೆದು, ಅಗತ್ಯವಿದ್ದರೆ ಮೂಳೆ ಕಸಿ ಮಾಡಿ ದವಡೆಯನ್ನು ಪುನರ್ನಿರ್ಮಿಸಲಾಗುತ್ತದೆ. ಈ ಚಿಕಿತ್ಸೆಯಲ್ಲಿ ಮೂಳೆಯ ಆರೋಗ್ಯ, ಮುಖದ ಸೌಂದರ್ಯ ಮತ್ತು ಕಾರ್ಯಕ್ಷಮತೆ ಈ ಮೂರೂ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ದವಡೆಯ ಸಮರ್ಪಕ ಕಾರ್ಯನಿರ್ವಹಣೆಯನ್ನು ಕಾಪಾಡ ಲಾಗುತ್ತದೆ.

**5. ಮುಖದ ಪುನರ್ನಿರ್ಮಾಣ:** ಕ್ಯಾನ್ಸರ್ ಅಥವಾ ತೀವ್ರ ಗಾಯಗಳಿಂದ ದವಡೆಯ ಒಂದು ಭಾಗ ನಷ್ಟವಾದಾಗ, ದೇಹದ ಇತರ ಭಾಗಗಳಿಂದ ಮೂಳೆ ಮತ್ತು ಮಾಂಸಖಂಡವನ್ನು ತಂದು ಮುಖವನ್ನು ಪುನರ್ನಿರ್ಮಿಸಬಹುದು. ಇದು ಆಧುನಿಕ ಶಸ್ತ್ರಚಿಕಿತ್ಸಾ ವಿಜ್ಞಾನದ ಅದ್ಭುತ ಸಾಧನೆಗಳಲ್ಲೊಂದು.

**ಫಿಬುಲಾ ಫ್ಲಾಪ್:** ಕಾಲಿನ ಫಿಬುಲಾ ಮೂಳೆಯನ್ನು ಅದರ ರಕ್ತನಾಳಗಳ ಸಮೇತ ತೆಗೆದು, ದವಡೆಯ ಆಕಾರಕ್ಕೆ ತಕ್ಕಂತೆ ರೂಪಿಸಿ ಜೋಡಿಸಲಾಗುತ್ತದೆ. ಈ ಹೊಸ ದವಡೆಯ ಮೇಲೆ ಇಂಪ್ಲಾಂಟ್ ಅಳವಡಿಸಿ ಹಲ್ಲುಗಳನ್ನೂ ಜೋಡಿಸಬಹುದು!

**ಮುಂಗೈ ಫ್ಲಾಪ್:** ಮುಂಗೈಯಿಂದ ಚರ್ಮ ಮತ್ತು ಮೃದು ಅಂಗಾಂಶವನ್ನು ತೆಗೆದು, ಬಾಯಿ ಅಥವಾ ನಾಲಿಗೆಯ ನಷ್ಟವಾದ ಭಾಗವನ್ನು ಮುಚ್ಚಲಾಗುತ್ತದೆ. ಇದರಿಂದ ರೋಗಿಯು ಮತ್ತೆ ಮಾತನಾಡಲು ಮತ್ತು ಆಹಾರ ನುಂಗಲು ಸಮರ್ಥರಾಗುತ್ತಾರೆ.

**ಪೆಕ್ಟೋರಲಿಸ್ ಮೇಜರ್ ಫ್ಲಾಪ್:** ಎದೆಯ ಮಾಂಸಖಂಡವನ್ನು ಚರ್ಮ ಮತ್ತು ರಕ್ತನಾಳಗಳ ಸಹಿತ ಮುಖಕ್ಕೆ ತಂದು, ದೊಡ್ಡ ದೋಷಗಳನ್ನು ಸರಿಪಡಿಸಲಾಗುತ್ತದೆ. ವಿಶೇಷವಾಗಿ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯ ನಂತರ ಇದು ಬಹಳ ಉಪಯುಕ್ತ.

**ಇತರ ಫ್ಲಾಪ್‌ಗಳು:** ತೊಡೆಯ ಫ್ಲಾಪ್ (ಎಎಲ್‌ಟಿ), ಬೆನ್ನಿನ ಮಾಂಸಖಂಡ ಫ್ಲಾಪ್ (ಲ್ಯಾಟಿಸಿಮಸ್ ಡಾರ್ಸಿ), ಸೊಂಟದ ಮೂಳೆ ಫ್ಲಾಪ್ (ಇಲಿಯಾಕ್ ಕ್ರೆಸ್ಟ್). ಇವುಗಳಲ್ಲಿ ಪ್ರತಿ ರೋಗಿಯ ಅಗತ್ಯಕ್ಕೆ ತಕ್ಕಂತೆ ಸೂಕ್ತ ಫ್ಲಾಪ್ ಅನ್ನು ಆಯ್ಕೆ ಮಾಡಲಾಗುತ್ತದೆ. ಹೀಗೆ, ನಷ್ಟವಾದ ಮುಖದ ಭಾಗವನ್ನು ಮರುಸೃಷ್ಟಿಸಿ, ರೋಗಿಗೆ ಹೊಸ ಜೀವನ ನೀಡುವುದು 'ಒಎಂಎಫ್‌ಎಸ್' ತಜ್ಞರ ವಿಶೇಷ ಸಾಮರ್ಥ್ಯ.

**6. ಇಂಪ್ಲಾಂಟ್ ಪುನರ್‌ಸ್ಥಾಪನೆ:** ಕ್ಯಾನ್ಸರ್, ಗಡ್ಡೆ ಅಥವಾ ಗಾಯದಿಂದ ದವಡೆಯ ಭಾಗ ನಷ್ಟವಾದಾಗ, ಅಥವಾ ದೀರ್ಘಕಾಲ ಹಲ್ಲಿಲ್ಲದೆ ದವಡೆ ಮೂಳೆ ಕರಗಿಹೋದಾಗ, ಸಾಮಾನ್ಯ ವಿಧಾನಗಳಿಂದ ಇಂಪ್ಲಾಂಟ್ ಅಳವಡಿಸುವುದು ಕಷ್ಟ. ಆದರೆ 'ಒಎಂಎಫ್‌ಎಸ್' ತಜ್ಞರ ಬಳಿ ವಿಶೇಷ ಪರಿಹಾರಗಳಿವೆ. ಸೊಂಟ, ತಲೆಬುರುಡೆ ಅಥವಾ ಗಲ್ಲದಿಂದ ಮೂಳೆ ತೆಗೆದು ದವಡೆಗೆ ಕಸಿ ಮಾಡಿ, ನಾಲ್ಕಾರು ತಿಂಗಳ ನಂತರ ಇಂಪ್ಲಾಂಟ್ ಅಳವಡಿಸಬಹುದು. ಮೇಲಿನ ದವಡೆ ಮೂಳೆ ಸಂಪೂರ್ಣ ಕರಗಿದ್ದರೆ, ಕೆನ್ನೆ ಮೂಳೆಯಲ್ಲಿ ಉದ್ದನೆಯ ಝೈಗೋಮ್ಯಾಟಿಕ್ ಇಂಪ್ಲಾಂಟ್ ಅಳವಡಿಸಿ ಒಂದೇ ದಿನದಲ್ಲಿ ಹಲ್ಲು ಜೋಡಿಸಬಹುದು. ಫಿಬುಲಾ ಮೂಳೆಯಿಂದ ಪುನರ್ನಿರ್ಮಿಸಿದ ದವಡೆಯ ಮೇಲೂ ಇಂಪ್ಲಾಂಟ್ ಇಟ್ಟು ಹಲ್ಲು ಜೋಡಿಸಬಹುದು. ಇದರಿಂದಾಗಿ ರೋಗಿ ಮತ್ತೆ ಆಹಾರವನ್ನು ಜಗಿಯಬಹುದು, ಆತ್ಮವಿಶ್ವಾಸದಿಂದ ನಗಬಹುದು! 'ಆಲ್-ಆನ್-4' ಅಥವಾ 'ಆಲ್-ಆನ್-6' ತಂತ್ರದಿಂದ ಕೇವಲ ನಾಲ್ಕರಿಂದ ಆರು ಇಂಪ್ಲಾಂಟ್‌ಗಳಿಂದ ಪೂರ್ಣ ದವಡೆಯ ಹಲ್ಲುಗಳನ್ನು ಒಂದೇ ದಿನದಲ್ಲಿ ಜೋಡಿಸುವುದು ಸಾಧ್ಯ!

**7. ಸೀಳು ತುಟಿ ಮತ್ತು ಅಂಗುಳ:** ಕೆಲವು ಮಕ್ಕಳು ಹುಟ್ಟುವಾಗಲೇ ತುಟಿ ಅಥವಾ ಅಂಗುಳದಲ್ಲಿ ಸೀಳು ಹೊಂದಿರುತ್ತಾರೆ. ಇದು ಮಗುವಿಗೆ ಹಾಲು ಕುಡಿಯಲು, ಮಾತನಾಡಲು ತೊಂದರೆ ಉಂಟುಮಾಡುವುದಷ್ಟೇ ಅಲ್ಲ, ಮಗು ಮತ್ತು ಪೋಷಕರಿಬ್ಬರ ಮನಸ್ಸನ್ನೂ ಘಾಸಿಗೊಳಿಸುತ್ತದೆ. ದೈಹಿಕ ಮತ್ತು ಮಾನಸಿಕ ಆರೋಗ್ಯ ಎರಡರ ಮೇಲೂ ಇದರ ಪರಿಣಾಮ ತೀವ್ರವಾಗಿರುತ್ತದೆ. ಹಂತ ಹಂತವಾಗಿ ಶಸ್ತ್ರಚಿಕಿತ್ಸೆ ಮಾಡಿ, 'ಒಎಂಎಫ್‌ಎಸ್' ತಜ್ಞರು, ವಾಕ್ ಚಿಕಿತ್ಸಕರು ಮತ್ತು ಹಲ್ಲು ಜೋಡಣೆ ತಜ್ಞರು ಒಟ್ಟಾಗಿ ಮಗುವಿಗೆ ಸುಂದರ ನಗು ಮತ್ತು ಸ್ಪಷ್ಟ ಮಾತು ನೀಡುತ್ತಾರೆ. ಒಂದು ರೀತಿಯಲ್ಲಿ ಹೇಳುವುದಾದರೆ, ಈ ಮಕ್ಕಳಿಗೆ ಪುನರ್ಜನ್ಮ ನೀಡುವ ಕೆಲಸವನ್ನು 'ಒಎಂಎಫ್‌ಎಸ್' ತಜ್ಞರು ಮಾಡುತ್ತಾರೆ. ಅನೇಕರಿಗೆ ತಿಳಿದಿಲ್ಲದ ಮುಖ್ಯ ವಿಷಯವೆಂದರೆ, ಹಲವಾರು ಸರಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ 'ಒಎಂಎಫ್‌ಎಸ್' ತಜ್ಞರು ಈ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ನೀಡುತ್ತಾರೆ.

**8. ಮುಖ ಮತ್ತು ದವಡೆಯ ವಿಕೃತಿ ಸರಿಪಡಿಸುವಿಕೆ :** ಜನ್ಮಜಾತ ಅಥವಾ ಬೆಳವಣಿಗೆಯ ಸಮಸ್ಯೆಗಳಿಂದ ಮುಖದ ರಚನೆಯಲ್ಲಿ ಅಸಮಾನತೆ ಕಾಣಿಸಿಕೊಳ್ಳಬಹುದು. ಅಂದರೆ, ಮುಖದ ಒಂದು ಬದಿ ಸಣ್ಣದಾಗಿರುವುದು, ಕೆನ್ನೆ ಮೂಳೆ ಅಥವಾ ದವಡೆಯ ಅಪೂರ್ಣ ಬೆಳವಣಿಗೆ, ತಲೆಬುರುಡೆ ಮತ್ತು ಮುಖದ ಮೂಳೆಗಳ ಅಕಾಲಿಕ ಜೋಡಣೆ ಮುಂತಾದವು. ಅದೇ ರೀತಿ, ಕೆಲವರಲ್ಲಿ ದವಡೆ ಅತಿಯಾಗಿ ಮುಂದೆ ಅಥವಾ ಹಿಂದೆ ಇರುತ್ತದೆ. ಇದರಿಂದ ಆಹಾರ ಜಗಿಯಲು ತೊಂದರೆ, ಮುಖದಲ್ಲಿ ಅಸಮತೋಲನ ಕಾಣಿಸುತ್ತವೆ. 'ಒಎಂಎಫ್‌ಎಸ್' ತಜ್ಞರು ಡಿಸ್ಟ್ರಾಕ್ಷನ್ ಆಸ್ಟಿಯೋಜೆನೆಸಿಸ್, ಲಿ ಫೋರ್ಟ್, ಬಿಎಸ್‌ಎಸ್‌ಒ, ಜೀನಿಯೋಪ್ಲಾಸ್ಟಿ ಮುಂತಾದ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸಾ ತಂತ್ರಗಳ ಮೂಲಕ ಮೂಳೆಯನ್ನು ಉದ್ದಗೊಳಿಸಬಹುದು, ದವಡೆಯನ್ನು ಸರಿಯಾದ ಸ್ಥಾನಕ್ಕೆ ತರಬಹುದು, ಮೂಳೆ ಕಸಿ ಮತ್ತು ಮೃದು ಅಂಗಾಂಶ ಪುನರ್ನಿರ್ಮಾಣ ಮಾಡಬಹುದು. ಈ ಮೂಲಕ ಮುಖದ ಸೌಂದರ್ಯ, ಸಮತೋಲನ ಮತ್ತು ಕಾರ್ಯಕ್ಷಮತೆಯನ್ನು ಮರುಸ್ಥಾಪಿಸಿ, ರೋಗಿಗಳಿಗೆ ಹೊಸ ಆತ್ಮವಿಶ್ವಾಸ ತುಂಬಲಾಗುತ್ತದೆ.

**9. ಮುಖದ ನರರೋಗಗಳು ಮತ್ತು ದವಡೆ ಕೀಲು ಸಮಸ್ಯೆಗಳ ಚಿಕಿತ್ಸೆ:** ಮುಖದ ನರಗಳು ಸಂವೇದನೆ ಮತ್ತು ಚಲನೆಯನ್ನು ನಿಯಂತ್ರಿಸುತ್ತವೆ. ಟ್ರೈಜೆಮಿನಲ್ ನ್ಯೂರಾಲ್ಜಿಯಾದಲ್ಲಿ ಮುಖದಲ್ಲಿ ವಿದ್ಯುತ್‌ಶಾಕ್‌ನಂಥ ತೀವ್ರ ನೋವು ಕಾಣಿಸುತ್ತದೆ; ಬೆಲ್ಸ್ ಪಾಲ್ಸಿಯಲ್ಲಿ ಮುಖದ ಒಂದು ಬದಿ ಚಲನೆ ಕಳೆದುಕೊಂಡು ಕಣ್ಣು ಮುಚ್ಚಲು, ನಗಲು ಕಷ್ಟವಾಗುತ್ತದೆ; ಅಪಘಾತಗಳಿಂದ ನರ ಹಾನಿಯಾಗಿ ಮುಖದಲ್ಲಿ ಮರಗಟ್ಟುವಿಕೆ ಉಂಟಾಗಬಹುದು. ಅದೇ ರೀತಿ, ದವಡೆ ಕೀಲಿನ (ಟಿಎಂಜೆ) ಸಮಸ್ಯೆಗಳಿಂದ ನೋವು, ಶಬ್ದ ಮತ್ತು ಬಾಯಿ ತೆರೆಯಲು ತೊಂದರೆಯಾಗಬಹುದು. 'ಒಎಂಎಫ್‌ಎಸ್' ತಜ್ಞರು ಔಷಧಿ, ನರ ಬ್ಲಾಕ್, ಸೂಕ್ಷ್ಮ ಶಸ್ತ್ರಚಿಕಿತ್ಸೆಯಿಂದ ನರ ಜೋಡಣೆ ಅಥವಾ ಕಸಿ, ಆರ್ಥ್ರೋಸ್ಕೋಪಿ, ಕೀಲು ಬದಲಾವಣೆ ಹೀಗೆ ವಿವಿಧ ವಿಧಾನಗಳ ಮೂಲಕ ಈ ಎಲ್ಲಾ ಸಮಸ್ಯೆಗಳಿಗೆ ಪರಿಣಾಮಕಾರಿ ಚಿಕಿತ್ಸೆ ನೀಡುತ್ತಾರೆ.

**10. ಮುಖ ಸೌಂದರ್ಯ ಚಿಕಿತ್ಸೆ:** 'ಒಎಂಎಫ್‌ಎಸ್' ತಜ್ಞರು ಮುಖದ ಅಂಗರಚನಾ ಶಾಸ್ತ್ರದಲ್ಲಿ ಪರಿಣತರಾಗಿರುವುದರಿಂದ, ಸೌಂದರ್ಯ ಚಿಕಿತ್ಸೆಯಲ್ಲಿ ಅತ್ಯುತ್ತಮ ಫಲಿತಾಂಶ ನೀಡಬಲ್ಲರು. ಬೋಟಾಕ್ಸ್‌ನಿಂದ ಹಣೆ, ಕಣ್ಣಿನ ಸುತ್ತ, ಹುಬ್ಬಿನ ನಡುವಿನ ಸುಕ್ಕುಗಳನ್ನು ಕಡಿಮೆ ಮಾಡಬಹುದು ಮತ್ತು ಹಲ್ಲು ಕಡಿಯುವ ಅಭ್ಯಾಸ ಹಾಗೂ ದವಡೆ ಕೀಲು ನೋವಿಗೂ ಇದು ಉಪಯುಕ್ತ. ಡರ್ಮಲ್ ಫಿಲ್ಲರ್‌ನಿಂದ ಕೆನ್ನೆ, ತುಟಿ, ಗಲ್ಲದ ಪರಿಮಾಣ ಹೆಚ್ಚಿಸಬಹುದು, ಮೂಗಿನ ರೂಪ ಸರಿಪಡಿಸಬಹುದು, ಮುಖದ ಆಳವಾದ ಸುಕ್ಕುಗಳನ್ನು ತುಂಬಬಹುದು. ರೈನೋಪ್ಲಾಸ್ಟಿಯಿಂದ ಮೂಗಿನ ಆಕಾರ, ಗಾತ್ರ, ಕೋನ ಬದಲಾಯಿಸಿ ಸೌಂದರ್ಯ ಮತ್ತು ಉಸಿರಾಟ ಎರಡನ್ನೂ ಸುಧಾರಿಸಬಹುದು. ಫೇಸ್‌ಲಿಫ್ಟ್‌ನಿಂದ ಮುಖ ಮತ್ತು ಕುತ್ತಿಗೆಯ ಚರ್ಮ ಬಿಗಿಗೊಳಿಸಿ ಹತ್ತರಿಂದ ಹದಿನೈದು ವರ್ಷ ಯುವಕರಾಗಿ ಕಾಣಬಹುದು. ಬ್ಲೆಫರೋಪ್ಲಾಸ್ಟಿಯಿಂದ ಕಣ್ಣಿನ ರೆಪ್ಪೆಯ ಹೆಚ್ಚುವರಿ ಚರ್ಮ ತೆಗೆದು ಕಣ್ಣುಗಳನ್ನು ಹೆಚ್ಚು ಆಕರ್ಷಕವಾಗಿಸಬಹುದು. ಕೆಮಿಕಲ್ ಪೀಲ್, ಲೇಸರ್ ಚಿಕಿತ್ಸೆ, ಪಿಆರ್‌ಪಿ ಮುಂತಾದ ಚರ್ಮ ಚಿಕಿತ್ಸೆಗಳಿಂದ ಮುಖದ ಕಲೆ, ಮೊಡವೆ ಗುರುತು, ಸುಕ್ಕುಗಳನ್ನು ಕಡಿಮೆ ಮಾಡಬಹುದು.

**11. ಕೂದಲು ಕಸಿ:** ಅನೇಕರಿಗೆ ತಿಳಿದಿಲ್ಲದ ವಿಷಯವೆಂದರೆ, ವಿಶೇಷ ತರಬೇತಿ ಪಡೆದ 'ಒಎಂಎಫ್‌ಎಸ್' ತಜ್ಞರು ಕೂದಲು ಕಸಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಬಲ್ಲರು. ಎಫ್‌ಯುಇ (ಫಾಲಿಕ್ಯುಲರ್ ಯೂನಿಟ್ ಎಕ್ಸ್‌ಟ್ರಾಕ್ಷನ್) ತಂತ್ರದಿಂದ ತಲೆಯ ಹಿಂಭಾಗದಿಂದ ಕೂದಲು ತೆಗೆದು, ಬೊಕ್ಕತಲೆ ಪ್ರದೇಶಕ್ಕೆ ಕಸಿ ಮಾಡಲಾಗುತ್ತದೆ. ತಲೆಯ ಕೂದಲಷ್ಟೇ ಅಲ್ಲ ಹುಬ್ಬು, ಗಡ್ಡ, ಮೀಸೆಗಳ ಕಸಿ ಸಹ ಸಾಧ್ಯ. ಮುಖ ಮತ್ತು ತಲೆಯ ಅಂಗರಚನಾಶಾಸ್ತ್ರದಲ್ಲಿ ಆಳವಾದ ಜ್ಞಾನ ಹೊಂದಿರುವುದರಿಂದ, 'ಒಎಂಎಫ್‌ಎಸ್' ತಜ್ಞರು ಈ ಕ್ಷೇತ್ರದಲ್ಲಿ ಅತ್ಯುತ್ತಮ ಮತ್ತು ನೈಸರ್ಗಿಕ ಫಲಿತಾಂಶ ನೀಡಬಲ್ಲರು.

ಒಟ್ಟಾರೆಯಾಗಿ ಹೇಳುವುದಾದರೆ, 'ಒಎಂಎಫ್‌ಎಸ್' ತಜ್ಞರು ಕೇವಲ ಹಲ್ಲಿನ ವೈದ್ಯರಲ್ಲ, ಅವರು ಮುಖದ ಮೂಳೆ ತಜ್ಞ, ಮುಖದ ಪ್ಲಾಸ್ಟಿಕ್ ಶಸ್ತ್ರಚಿಕಿತ್ಸಕ, ಬಾಯಿಯ ಕ್ಯಾನ್ಸರ್ ತಜ್ಞ, ಮುಖದ ನರರೋಗ ತಜ್ಞ, ಮತ್ತು ಮುಖದ ಸೌಂದರ್ಯ ತಜ್ಞರ ಪಾತ್ರವನ್ನು ನಿರ್ವಹಿಸುತ್ತಾರೆ. ವಿಶೇಷ ತರಬೇತಿ ಪಡೆದ 'ಒಎಂಎಫ್‌ಎಸ್' ತಜ್ಞರು ತಮ್ಮ ಆಸಕ್ತಿಯ ಕ್ಷೇತ್ರದಲ್ಲಿ ವಿಶೇಷ ಚಿಕಿತ್ಸೆಗಳನ್ನು ನೀಡುತ್ತಾರೆ. ಕೆಲವರು ಕ್ಯಾನ್ಸರ್ ಚಿಕಿತ್ಸೆಯಲ್ಲಿ, ಕೆಲವರು ಮುಖದ ಆಘಾತದಲ್ಲಿ, ಕೆಲವರು ಸೌಂದರ್ಯ ಚಿಕಿತ್ಸೆಯಲ್ಲಿ, ಇನ್ನು ಕೆಲವರು ದವಡೆ ಸರಿಪಡಿಸುವಿಕೆಯಲ್ಲಿ ಪರಿಣತಿ ಹೊಂದಿರುತ್ತಾರೆ.

ಆದ್ದರಿಂದ, 'ಒಎಂಎಫ್‌ಎಸ್' ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಇದು ಸಕಾಲ. ನಿಮ್ಮ ಮನೆಯ ಹತ್ತಿರದಲ್ಲೇ ಲಭ್ಯವಿರುವ ಅಮೂಲ್ಯ ಚಿಕಿತ್ಸೆಗಳನ್ನು ನೀವು ಅರಿವಿಲ್ಲದೆ ಕಳೆದುಕೊಳ್ಳುತ್ತಿರಬಹುದು! ನೆನಪಿಡಿ. ಮುಖ ಮತ್ತು ದವಡೆಗೆ ಸಂಬಂಧಿಸಿದ ಯಾವುದೇ ಸಮಸ್ಯೆಗೆ ನಿಮ್ಮ ವೈದ್ಯರ ಬಳಿ ಹೋದಾಗ 'ಒಎಂಎಫ್‌ಎಸ್' ತಜ್ಞರ ಬಳಿ ಕಳುಹಿಸಲು ಕೇಳಿ. ಸರಿಯಾದ ತಜ್ಞರ ಬಳಿ ಸರಿಯಾದ ಸಮಯದಲ್ಲಿ ಹೋಗುವುದು ಉತ್ತಮ ಚಿಕಿತ್ಸೆಯ ಮೊದಲ ಹೆಜ್ಜೆ.

ನಿಮ್ಮ ಮುಖದ ಆರೋಗ್ಯ ನಿಮ್ಮ ಕೈಯಲ್ಲಿದೆ. ಆದ್ದರಿಂದ ಮಾಹಿತಿವಂತರಾಗಿ, ಜೀವವನ್ನು ರಕ್ಷಿಸಿಕೊಳ್ಳಿ!

**(ಲೇಖಕರು ಮುಖ-ದವಡೆ ಶಸ್ತ್ರಚಿಕಿತ್ಸಾ ತಜ್ಞರು)**

ಇಂದು ವಿಶ್ವ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಾ ದಿನ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:30

## ಸಮಾಚಾರ ಸಣ್ಣದಲ್ಲ

### ದೂರದರ್ಶನ ಸುದಿ ವಾಚಕಿ ಸರಳಾ ನಿಧನ

**ದೆಹಲಿ:** 1980 ಮತ್ತು ನಂತರದ ದಶಕದಲ್ಲಿ ಕೇಂದ್ರ ಸರಕಾರ ಸ್ವಾಮ್ಯದ 'ದೂರದರ್ಶನ'ದಲ್ಲಿ ಸುದ್ದಿ



ವಾಚಕಿಯಾಗಿ ಹೆಸರು ಮಾಡಿದ್ದ ಸರಳಾ ಮಹೇಶ್ವರಿ(71) ಗುರುವಾರ ನಿಧನರಾದರು. ಸೀರೆಯುಟ್ಟು, ಬಿಗಿಯಾಗಿ ಜಡೆ ಹೆಣೆದು, ದೊಡ್ಡದಾಗಿ ಕುಂಕುಮ ಇಟ್ಟುಕೊಂಡು ಅತ್ಯಂತ ಸರಳವಾಗಿ ಟಿವಿ ಪರದೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಾರಣಕ್ಕೆ ವೀಕ್ಷಕರಿಗೆ ಸರಳಾ ಮಹೇಶ್ವರಿ ಬಹಳ ಇಷ್ಟವಾಗಿದ್ದರು. ಸೌಮ್ಯ ಧ್ವನಿ, ಸ್ಪಷ್ಟ ಉಚ್ಚಾರಣೆಯೂ ಜನರಿಗೆ ಪ್ರಿಯವಾಗಿತ್ತು. ಭಾರತದಲ್ಲಿ ನಡೆದ ಏಷ್ಯನ್ ಗೇಮ್ಸ್ ವೇಳೆ ಕ್ರೀಡಾ ಸುದ್ದಿಗಳನ್ನೂ ಜನರ ಮನೆ-ಮನಗಳಿಗೆ ಮುಟ್ಟಿಸಿದ್ದರು. ಸರಳಾ ಅವರ ನಿಧನಕ್ಕೆ 'ಎಕ್ಸ್' ಖಾತೆಯಲ್ಲಿ ಸಂತಾಪ ಸೂಚಿಸಿರುವ ಡಿಡಿ ನ್ಯೂಸ್, ಸರಳಾ ಅವರ 1980ರ ಮತ್ತು ಈಗಿನ ಫೋಟೋಗಳನ್ನೂ ಹಂಚಿಕೊಂಡಿದೆ. 'ಸರಳಾ ಸೌಜನ್ಯದ ಸಾಕಾರ ರೂಪವಾಗಿದ್ದರು. ನೋಟದಲ್ಲಷ್ಟೇ ಅಲ್ಲ, ಹೃದಯದಲ್ಲಿಯೂ ಸುಂದರವಾಗಿದ್ದರು. ಭಾಷೆ ಮೇಲೆ ಅಸಾಧಾರಣ ಹಿಡಿತ ಹೊಂದಿದ್ದರು. ಜ್ಞಾನದ ಭಂಡಾರವಾಗಿದ್ದರು' ಎಂದು ಮಾಜಿ ಸಹೋದ್ಯೋಗಿ ಶಮ್ಮಿ ನಾರಂಗ್ ಕಂಬನಿ ಮಿಡಿದಿದ್ದಾರೆ.

### ಬಜೆಟ್ ಅಧಿವೇಶನಕ್ಕೆ ಇಂದಿನಿಂದ ವಿರಾಮ

**ದೆಹಲಿ:** ಜ.28ರಂದು ಆರಂಭಗೊಂಡ ಈ ಬಾರಿಯ ಸಂಸತ್ ಬಜೆಟ್ ಅಧಿವೇಶನ ಎರಡು ಹಂತಗಳಲ್ಲಿ ಏಪ್ರಿಲ್ 2ರವರೆಗೂ ನಡೆಯಲು ನಿಗದಿಯಾಗಿದೆ. ಒಟ್ಟು 65 ದಿನಗಳ ಅವಧಿಯಲ್ಲಿ 30 ಅಧಿವೇಶನಗಳನ್ನು ಸಂಸತ್ತಿನ ಈ ಬಜೆಟ್ ಅಧಿವೇಶನ ಒಳಗೊಂಡಿರುತ್ತದೆ. ಮೊದಲ ಹಂತದಲ್ಲಿ ಲೋಕಸಭೆ-ರಾಜ್ಯಸಭೆಯ ಎರಡೂ ಸದನಗಳಿಗೂ ಇದೇ ಶುಕ್ರವಾರ ದಿಂದ(ಫೆ.13ರಂದು) ವಿರಾಮವಿರಲಿದೆ. ಆ ಬಳಿಕ ಮಾರ್ಚ್ 9ರಂದು ಮತ್ತೆ ಸದನದ ಕಲಾಪ ಮರಳಿ ಆರಂಭಗೊಳ್ಳಲಿದೆ. ಏ.2ರವರೆಗೂ ಉಭಯ ಸದನಗಳ ಕಲಾಪ ಮುಂದುವರಿಯಲಿದೆ. ಈ ಅವಧಿಯಲ್ಲಿ ಸ್ಥಾಯಿ ಸಮಿತಿಗಳು ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳ ಅನುದಾನದ ಬೇಡಿಕೆಗಳನ್ನು ಪರಿಶೀಲಿಸಲು ಅವಕಾಶವಾಗಲಿದೆ.

### ಪಾಕ್‌ನಿಂದ 'ಇಒ2' ಉಪಗ್ರಹ ಗಗನಕ್ಕೆ

**ಇಸ್ಲಾಮಾಬಾದ್:** ಪಾಕಿಸ್ತಾನ ದೇಶೀಯವಾಗಿ ನಿರ್ಮಿಸಿರುವ ತನ್ನ ಎರಡನೇ 'ಭೂ ಸರ್ವೇಕ್ಷಣಾ ಉಪಗ್ರಹ' (ಇ.ಒ-2)ವನ್ನು ಚೀನಾದ ನೆರವಿನಲ್ಲಿ ಯಶಸ್ವಿಯಾಗಿ ಉಡಾವಣೆಗೊಳಿಸಿ ಕೆಳಹಂತದ ಭೂಕಕ್ಷೆಯಲ್ಲಿ ನೆಲೆಗೊಳಿಸಿದೆ. 'ಸ್ಪೇಸ್ ಅಂಡ್ ಅಪ್ಪರ್ ಅಟ್ಮಾಸ್ಪಿಯರ್ ರೀಸರ್ಚ್ ಕಮಿಷನ್' ಅಭಿವೃದ್ಧಿಪಡಿಸಿರುವ ಈ 'ಇ.ಒ-2' ಉಪಗ್ರಹವನ್ನು ಪಾಕಿಸ್ತಾನದ ಭೂ ಸರ್ವೇಕ್ಷಣೆ ಮತ್ತು ಭೂಮಿಯ ಅತ್ಯಂತ ಉತ್ತಮ ಗುಣಮಟ್ಟದ ಛಾಯಾಚಿತ್ರಗಳನ್ನು ತೆಗೆಯಲೆಂದೇ ಪಾಕ್ ನಿರ್ಮಿಸಿ ಗಗನಕ್ಕೆ ರವಾನಿಸಿದೆ. ಪಾಕ್‌ನ ಈ 'ಇ.ಒ-2' ಉಪಗ್ರಹವನ್ನು ಚೀನಾದ ಉಪಗ್ರಹ ಉಡಾವಣಾ ವ್ಯವಸ್ಥೆಯ ಮೂಲಕ ಗಗನಕ್ಕೆ ಮುಟ್ಟಿಸಲಾಗಿದೆ.

### ಸಂಸದೀಯ ಸಮಿತಿ ರಾಜ್ಯಸಭೆ ಸಮ್ಮತಿ

**ದೆಹಲಿ:** ಸಂಸತ್ತಿನ ಅತ್ಯಂತ ಪ್ರಮುಖ 'ಸಾರ್ವಜನಿಕ ಲೆಕ್ಕಪತ್ರ ಸಮಿತಿ' ಸೇರಿದಂತೆ ಮೂವರು ಮಹತ್ವದ ಸಂಸತ್ ಸಮಿತಿಗಳಿಗೆ ಸದಸ್ಯರ ನಾಮ ನಿರ್ದೇಶನಕ್ಕೆ ರಾಜ್ಯಸಭೆ ಗುರುವಾರ ಸಮ್ಮತಿ ಸೂಚಿಸಿದೆ. ಈ ಸಮಿತಿಗಳಿಗೆ ಮೇ 1ರಂದು 1 ವರ್ಷದ ಅವಧಿ ಇರಲಿದೆ. ಸಂಸದೀಯ ವ್ಯವಹಾರಗಳ ಸಹಾಯಕ ಸಚಿವ ಎಲ್.ಮುರುಗನ್ ಅವರು ಗುರುವಾರ ರಾಜ್ಯಸಭೆ ಯಲ್ಲಿ ಸಭಾಪತಿ ಅನುಮತಿ ಪಡೆದು ಮೂರು ಸಂಸತ್ ಸಮಿತಿಗಳ ನೇಮಕ ಕುರಿತು ಪ್ರಸ್ತಾವನೆ ಮಂಡಿಸಿದರು. ಸದನ ಅದಕ್ಕೆ ಸಮ್ಮತಿ ಸೂಚಿಸಿತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರಾಜ್ಯಸಭೆಯಿಂದ 7 ಸದಸ್ಯರ ನೇಮಕಕ್ಕೆ ಅನುಮೋದನೆ ಸಿಕ್ಕಿದೆ. ಸಾರ್ವಜನಿಕ ವಲಯದ ಉದ್ಯಮಗಳ ಕಾರ್ಯವೈಖರಿ ಪರಿಶೀಲನಾ ಸಮಿತಿ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮಿತಿಗೂ ಸದಸ್ಯರ ನೇಮಕಕ್ಕೆ ಸದನ ಸಮ್ಮತಿಸಿದೆ.

**ಕಿರಣ್ ರಿಜಿಜು**
ಸಂಸದೀಯ ವ್ಯವಹಾರ ಸಚಿವ

**ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ಕೊಠಡಿಗೆ ನುಗ್ಗಿದ ಕಾಂಗ್ರೆಸ್‌ನ 25 ಸಂಸದರು ನಿಂದನೆ ಮಳೆಗರೆದಿದ್ದಾರೆ. ಆಗ ಅಲ್ಲೇ ಇದ್ದ ಕೆ.ಸಿ.ವೇಣುಗೋಪಾಲ್, ಪ್ರಿಯಾಂಕಾ ವಾದ್ರಾ ತಮ್ಮ ಸಂಸದರ ವಾಗ್ದಾಳಿಯನ್ನು ತಡೆಯಲಿಲ್ಲ. ಓಂ ಬಿರ್ಲಾ ಅವರಿಗೆ ತುಂಬಾ ನೋವಾಗಿದೆ. ಬಿರ್ಲಾ ಕಠಿಣ ಕ್ರಮ ಕೈಗೊಳ್ಳಬಹುದಿತ್ತು. ಆದರೆ, ಅವರು ಸೌಮ್ಯ ಸ್ವಭಾವದವರು.**

300 ಸಂಸತ್ ಕ್ಷೇತ್ರ: ಒಬ್ಬ ಅಭ್ಯರ್ಥಿ ಮರಣ ಕಾರಣ 299ರಲ್ಲಷ್ಟೇ ಚುನಾವಣೆ । ಬಿಗಿಭದ್ರತೆಗೆ 9.50 ಲಕ್ಷ ಸಿಬ್ಬಂದಿ, ಸರಾಗ ಮತದಾನಕ್ಕೆ 8 ಲಕ್ಷ ಮತಗಟ್ಟೆ ಸಿಬ್ಬಂದಿ

# ಬಾಂಗ್ಲಾದೇಶ ಚುನಾವಣೆ: ಶೇ.47.91 ಮತದಾನ

**ಢಾಕಾ:** ನೆರೆಯ ಬಾಂಗ್ಲಾದೇಶದಲ್ಲಿ ಸಾರ್ವತ್ರಿಕ ಚುನಾವಣೆ ನಡೆದಿದ್ದು, ಒಟ್ಟು 300 ಸಂಸದೀಯ ಕ್ಷೇತ್ರಗಳ ಪೈಕಿ 299ರಲ್ಲಿ ಗುರುವಾರ ಚುನಾವಣೆ ನಡೆಸಲಾಗಿದೆ. ಒಂದು ಕ್ಷೇತ್ರದಲ್ಲಿನ ಒಬ್ಬ ಅಭ್ಯರ್ಥಿ ಹಠಾತ್ ಸಾವಿಗೀಡಾದ ಹಿನ್ನೆಲೆ ಆ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಗಿದೆ.

ಸ್ಥಳೀಯ ಕಾಲಮಾನ ಸಮಯ ಬೆಳಗ್ಗೆ 7.30ಕ್ಕೆ ಪ್ರಾರಂಭವಾದ ಮತದಾನ ಸಂಜೆ 4ವರೆಗೂ ನಡೆದಿದ್ದು, ಸದ್ಯ ಲಭ್ಯವಿರುವ ಅಂಕಿ ಅಂಶಗಳ ಪ್ರಮಾಣ ಶೇ.47.91ರಷ್ಟು ಕಡಿಮೆ ಪ್ರಮಾಣದ ಮತದಾನವಾಗಿದೆ.

ದೇಶದಲ್ಲಿನ ಒಟ್ಟು 51 ರಾಜಕೀಯ ಪಕ್ಷಗಳು ಸ್ಪರ್ಧೆ ಮಾಡಿದ್ದು, ಒಟ್ಟು 2028 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಅವರಲ್ಲಿ 83 ಮಹಿಳಾ ಅಭ್ಯರ್ಥಿಗಳು ಸ್ಪರ್ಧೆ ಮಾಡಿದ್ದಾರೆ. ಅಂದರೆ, ಒಟ್ಟು ಅಭ್ಯರ್ಥಿಗಳಲ್ಲಿ ಮಹಿಳೆಯರ ಸಂಖ್ಯೆ ಕೇವಲ ಶೇ.4ರಷ್ಟು ಮಾತ್ರವಿದೆ ಎಂಬುದು ಗಮನಾರ್ಹ.

ಹಿಂದಿನ ಅವಧಿಯ ಚುನಾಯಿತ ಪ್ರಧಾನಿ ಶೇಖ್ ಹಸೀನಾ ಅವರ 15 ವರ್ಷಗಳ ಆಡಳಿತ ವಿದ್ಯಾರ್ಥಿ ಆಂದೋಲನದ ಕಾರಣ 2024 ಆಗಸ್ಟ್‌ನಲ್ಲಿ ದಿಢೀರ್ ಕೊನೆಗೊಂಡಿದ್ದು, ಆ ಬಳಿಕ 18 ತಿಂಗಳ ನಂತರ ಈಗ ಬಿಗಿ ಭದ್ರತೆ ನಡುವೆ ಚುನಾವಣೆ ನಡೆದಿದೆ. ಆ ನಂತರದಲ್ಲಿ ನಡೆದ ಮೊದಲ ಮಹತ್ವದ ಸಾರ್ವತ್ರಿಕ ಚುನಾವಣೆ ಇದಾಗಿದೆ.

ಮುಸ್ಲಿಂ ಬಹುಸಂಖ್ಯಾತರಾಗಿರುವ ಬಾಂಗ್ಲಾದೇಶದಲ್ಲಿ ಹಿಂದೂಗಳ ಸಂಖ್ಯೆ 1.25 ಕೋಟಿಯಷ್ಟಿದೆ. ಜತೆಗೆ ಕ್ರೈಸ್ತರು, ಸಿಖ್ಖರು, ಬೌದ್ಧರೂ ಅಲ್ಪ ಪ್ರಮಾಣದಲ್ಲಿದ್ದಾರೆ. ಒಟ್ಟಾರೆ 12.77 ಕೋಟಿ ಮತದಾರರಲ್ಲಿ 50 ಲಕ್ಷ ಮತದಾರರು ಯುವಜನರಾಗಿದ್ದು, ಇದೇ ಮೊದಲ ಬಾರಿಗೆ ಮತದಾನದಲ್ಲಿ ಭಾಗಿಯಾಗಿದ್ದಾರೆ.

ದೇಶಾದ್ಯಂತದ 42,761 ಮತಗಟ್ಟೆಗಳಲ್ಲಿ ಮತದಾರರು ಬೆಳಗ್ಗೆ 7.30ರಿಂದಲೇ ಸಾಲುಗಟ್ಟಿ ನಿಂತು ಉತ್ಸಾಹದಿಂದ ಮತದಾನ ಮಾಡಲಾರಂಭಿಸಿದರು. ನಡು ಮಧ್ಯಾಹ್ನದ ವೇಳೆ ಬಿಸಿಲೇರುತ್ತಿದ್ದಂತೆ ಮತದಾರರ ಸರತಿ ಸಾಲು ಕರಗಿತು. ನಂತರದಲ್ಲಿ ಮತದಾನ ಪ್ರಮಾಣ ಕಡಿಮೆಯಾಯಿತು. ಸಂಜೆ 4ರ ವೇಳೆಗೆ ಮತದಾನ ಪ್ರಮಾಣ ಶೇ.50ರಷ್ಟನ್ನೂ ಮುಟ್ಟಲಿಲ್ಲ.

ಮೊದಲ ಬಾರಿಗೆ ಮತ ಚಲಾಯಿಸುತ್ತಿದ್ದವರು ಮಾತ್ರ ಬಲು ಉತ್ಸಾಹದಿಂದ ಮತದಾನದಲ್ಲಿ ಭಾಗಿಯಾಗಿದ್ದರು. ಮೊದಲ ಬಾರಿಗೆ ಮತ ಚಲಾಯಿಸಿದ್ದು ಬಹಳ ವಿಶಿಷ್ಟ ಅನುಭವ ತಂದುಕೊಟ್ಟಿದೆ ಎಂದು ಕೆಲವು ಯುವಕರು ಸುದ್ದಿಗಾರರ ಬಳಿ ಪ್ರತಿಕ್ರಿಯಿಸಿದರು.

299 ಕ್ಷೇತ್ರಗಳಿಂದ ನೂತನ ಸಂಸತ್ ಸದಸ್ಯರ ಆಯ್ಕೆಗೆ ಮತದಾನ ನಡೆಸುವುದರ ಜತೆಗೇ ದೇಶದ ಸಂವಿಧಾನದ ಪರಿಷ್ಕರಣೆ ಕುರಿತೂ ಜನಮತ ಸಂಗ್ರಹ ಮಾಡಲಾಗಿದೆ ಎಂಬುದು ಉಲ್ಲೇಖಾರ್ಹ.

ಈ ಬಾರಿಯ ಚುನಾವಣೆಯಲ್ಲಿ 51 ಪಕ್ಷಗಳು ಸ್ಪರ್ಧೆ ಮಾಡಿದ್ದರೂ, ನೈಜ ಸ್ಪರ್ಧೆ ಇರುವುದು ದಿ.ಖಲಿದಾ ಜಿಯಾ ಅವರ ಪುತ್ರ ನೇತೃತ್ವದ 'ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ'(ಬಿಎನ್‌ಪಿ) ಹಾಗೂ ವಿದ್ಯಾರ್ಥಿ ಮುಖಂಡರಿಂದ ಸ್ಥಾಪಿತವಾದ 'ನ್ಯಾಷನಲ್ ಸಿಟಿಜನ್ ಪಾರ್ಟಿ' ಮತ್ತು 'ಬಾಂಗ್ಲಾದೇಶ ಜಮಾತ್-ಎ-ಇಸ್ಲಾಮಿ' ಮೈತ್ರಿಕೂಟದ ನಡುವೆ ಮಾತ್ರ ಎನ್ನಲಾಗುತ್ತಿದೆ. ಉಳಿದವು ಸಣ್ಣ ಪುಟ್ಟ ಪಕ್ಷಗಳ ಸ್ಪರ್ಧೆ ನೆಪ ಮಾತ್ರ ಎನ್ನುವಂತಹ ಪರಿಸ್ಥಿತಿ ಇದೆ. ನ್ಯಾಷನಲ್ ಸಿಟಿಜನ್ ಪಾರ್ಟಿ(ಎನ್‌ಸಿಪಿ) ಮತ್ತು ಜಮಾತ್ ಮೈತ್ರಿಕೂಟದಲ್ಲಿ ಇತರೆ 11 ಪಕ್ಷಗಳೂ ಸೇರಿಕೊಂಡಿವೆ. ಶೇಕ್ ಹಸೀನಾ ನೇತೃತ್ವದ 'ಅವಾಮಿ ಲೀಗ್ ಪಾರ್ಟಿ'ಯನ್ನು ಪ್ರಸಕ್ತ ಮಧ್ಯಂತರ ಸರಕಾರ ಅಮಾನತುಗೊಳಿಸುವುದರಿಂದ ಆ ಪಕ್ಷ ಚುನಾವಣಾ ಕಣದಿಂದ ಹೊರಗುಳಿಯುವಂತಾಗಿದೆ.

ಎನ್‌ಸಿಪಿ ಆರಂಭದ ಬಿಸಿ ಮತ್ತು ಚುರುಕುತನವನ್ನು ಉಳಿಸಿಕೊಳ್ಳಲು ಹೋರಾಟ ಮಾಡುತ್ತಿದೆ. ಸದ್ಯ ಯುವ ಪಕ್ಷ ಜಮಾತ್ ಜತೆಗಿನ ಮೈತ್ರಿಯಡಿ ಕೇವಲ 30 ಸ್ಥಾನಗಳಲ್ಲಷ್ಟೇ ಸ್ಪರ್ಧಿಸಿದೆ. ಹಿಂದಿನ ಚುನಾವಣೆಯಲ್ಲಿ ಜಮಾತ್ ಎ ಇಸ್ಲಾಮಿ ಪಕ್ಷಕ್ಕೆ ಶೇ.10ಕ್ಕಿಂತ ಕಡಿಮೆ ಮತದಾರರ ಬೆಂಬಲ ಸಿಕ್ಕಿತ್ತು. ಬಿಎನ್ ಪಿ ಶೇ.30ಕ್ಕಿಂತ ಹೆಚ್ಚು ಮತಗಳನ್ನು ಪಡೆದಿತ್ತು.

### ಆಯೋಗಕ್ಕೆ ಪಕ್ಷಗಳ ಟೀಕೆ

**ಚುನಾವಣಾ ಪ್ರಕ್ರಿಯೆ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಬಿಎನ್‌ಪಿ ಮತ್ತು ಜಮಾತ್ ಪಕ್ಷಗಳು, ಸರಿಯಾದ ಸಿದ್ಧತೆ ಕೊರತೆ ಮತ್ತು ಸಮಾನ ಸ್ಪರ್ಧಾ ವಾತಾವರಣ ಸೃಷ್ಟಿಯಲ್ಲಿ ಚುನಾವಣಾ ಆಯೋಗ ಸೋತಿದೆ ಎಂದು ಟೀಕಿಸಿವೆ. ಚುನಾವಣಾ ವೇಳಾಪಟ್ಟಿ ಪ್ರಕಟವಾದ ನಂತರದಿಂದ ಈವರೆಗೂ ಚುನಾವಣೆಗೆ ಸಂಬಂಧಿಸಿ 400 ಹಿಂಸಾಚಾರ ಘಟನೆಗಳು ನಡೆದಿವೆ. ಐವರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಇಂದು(ಗುರುವಾರ) ನಡೆದ ಮತದಾನದಿಂದ ಬಾಂಗ್ಲಾದೇಶದ ರಾಜಕೀಯ ಭವಿಷ್ಯ ಹೊಸದಾಗಿ ರೂಪುಗೊಳ್ಳುವುದೇ ಎಂಬ ನಿರೀಕ್ಷೆ ಬಾಂಗ್ಲಾದೇಶದ ಪ್ರಜೆಗಳದ್ದಾಗಿದೆ. ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿಗೆ ಈ ಚುನಾವಣೆ ದಾರಿ ಮಾಡಿಕೊಡುವ ನಿರೀಕ್ಷೆ ಇದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಹೇಳಿದ್ದಾರೆ.**

### ಬಾಂಗ್ಲಾ: ಹಿಂದೂ ಕಾರ್ಮಿಕನ ಕೊಲೆ

**ಢಾಕಾ: ಬಾಂಗ್ಲಾದೇಶದಲ್ಲಿ ಬುಧವಾರ ಮತ್ತೊಬ್ಬ ಹಿಂದೂ ವ್ಯಕ್ತಿಯ ಹತ್ಯೆಯಾಗಿದೆ. ಮೌಲ್ವಿಬಜಾರ್ ಜಿಲ್ಲೆಯ ಚಂಪಾ ಪ್ರದೇಶದ ಚಹಾ ತೋಟದ ಕಾರ್ಮಿಕನಾಗಿದ್ದ 28 ವರ್ಷದ ರತನ್ ಸಾಹುಕಾರ್ ಎಂಬಾತನನ್ನು ಬಲು ಕ್ರೂರವಾಗಿ ಕೊಲ್ಲಲಾಗಿದೆ. ಮೃತದೇಹದ ಮೇಲೆ ಹತ್ತಾರು ಗಾಯದ ಗುರುತುಗಳಿವೆ. ದೇಹದಿಂದ ವಿಪರೀತ ರಕ್ತಸ್ರಾವವಾಗಿದೆ. ಕೈಕಾಲು ಕಟ್ಟಿಹಾಕಿದದ ಸ್ಥಿತಿಯಲ್ಲಿ ರತನ್ ಶವ ಬುಧವಾರ ಬೆಳಗ್ಗೆ 10 ಗಂಟೆಯಲ್ಲಿ ಪತ್ತೆಯಾಗಿದೆ. ಪರಿಣಾಮ ಅಲ್ಪಸಂಖ್ಯಾತ ಹಿಂದೂ ಸಮುದಾಯದ ಸುರಕ್ಷತೆ ಬಗ್ಗೆ ಮತ್ತೆ ಆತಂಕ ಮೂಡಿದೆ. ಜಿಲ್ಲೆಯಲ್ಲಿ ಉದ್ವಿಗ್ನತೆ ನೆಲೆಸಿದೆ. ರತನ್ ಜತೆ ಕೆಲಸ ಮಾಡುತ್ತಿದ್ದವರು ಇದು ಪೂರ್ವನಿಯೋಜಿತ ಕೊಲೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಕೊಲೆ ಪ್ರಕರಣ ಚುನಾವಣೆಗೆ ಸಂಬಂಧಿಸಿದ್ದೇ ಎಂಬ ಕುರಿತೂ ತನಿಖೆ ನಡೆಸಲಾಗುತ್ತಿದೆ.**

### ಬಾಂಗ್ಲಾದೇಶ ಚುನಾವಣೆ-2026

| | |
|---|---|
| ಒಟ್ಟು ಕ್ಷೇತ್ರಗಳು | 300 |
| ಚುನಾವಣೆ ನಡೆದಿದ್ದು | 299 |
| ಚುನಾವಣೆ ಮುಂದಕ್ಕೆ | 1 |
| ರಾಜಕೀಯ ಪಕ್ಷಗಳು | 51 |
| ಕಣದಲ್ಲಿರುವ ಅಭ್ಯರ್ಥಿ | 2,028 |
| ಮಹಿಳಾ ಅಭ್ಯರ್ಥಿ | 83 |
| ಮತಗಟ್ಟೆಗಳು | 36,031 |
| ಒಟ್ಟು ಮತದಾರರು | 12.77 ಕೋಟಿ |
| ಮೊದಲ ಬಾರಿ ಮತದಾರ | 50 ಲಕ್ಷ |
| ಗುರುವಾರ ಮತ ಪ್ರಮಾಣ | ಶೇ.48 |



### ಬಿಗಿ ಭದ್ರತೆ

**ಬಾಂಗ್ಲಾದೇಶಾದ್ಯಂತ 42,761 ಮತಗಟ್ಟೆಗಳನ್ನು ನೆಲೆಗೊಳಿಸಲಾಗಿತ್ತು. ಅವುಗಳಲ್ಲಿ 9.50 ಲಕ್ಷದಷ್ಟು ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಮತಗಟ್ಟೆಗಳಲ್ಲಿ ಒಟ್ಟು 8 ಲಕ್ಷ ಚುನಾವಣಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು. ಒಟ್ಟಾರೆ 17.50 ಲಕ್ಷ ಸಿಬ್ಬಂದಿ ಗುರುವಾರದ ಚುನಾವಣಾ ಕಾರ್ಯದಲ್ಲಿ ಕಾರ್ಯಮಗ್ನರಾಗಿದ್ದರು. ಸಂಜೆ 4ರ ವೇಳೆಗೆ ಶೇ.47.91ರಷ್ಟಿ ಮತದಾನವಾಗಿರುವ ಅಂಕಿ ಅಂಶಗಳು ಬಂದಿವೆ. ಇನ್ನೂ ಕೆಲವು ಮತಗಟ್ಟೆಗಳಿಂದ ಅಂಕಿ ಅಂಶಗಳು ಬರಬೇಕಿದ್ದು, ಶುಕ್ರವಾರ ಬೆಳಗ್ಗೆ ವೇಳೆಗೆ ಮತದಾನದ ಒಟ್ಟು ನಿಖರ ಅಂಕಿ ಅಂಶ ತಿಳಿದುಬರಲಿದೆ ಎಂದು ಬಾಂಗ್ಲಾದೇಶದ ಮುಖ್ಯ ಚುನಾವಣಾ ಆಯುಕ್ತ ಎಎಂಎಂ ನಾಸಿರ್ ಉದ್ದೀನ್ 'ಢಾಕಾ ಟ್ರಿಬ್ಯೂನ್' ಪತ್ರಿಕೆಗೆ ಗುರುವಾರ ಸಂಜೆ ಮಾಹಿತಿ ನೀಡಿದ್ದಾರೆ.ಹಿಂದಿನ ಚುನಾವಣೆಗಳಲ್ಲಿ ಫಲಿತಾಂಶವನ್ನು ಕನಿಷ್ಠ 12 ಗಂಟೆ ಗರಿಷ್ಠ 20 ಗಂಟೆಗಳಲ್ಲಿ ಪ್ರಕಟಿಸಲಾಗುತ್ತಿತ್ತು. ಆದರೆ ಈ ಬಾರಿ ಸಂವಿಧಾನಕ್ಕೆ ತಿದ್ದುಪಡಿಗೆ ಮತದಾರರ ಅಭಿಪ್ರಾಯ ಸಂಗ್ರಹವೂ ಇದ್ದುದರಿಂದ ಮತ್ತು ಹೆಚ್ಚಿನ ಸಂಖ್ಯೆಯ ಮತದಾರರ ಭಾಗವಹಿಸುವಿಕೆ ಕಾರಣದಿಂದ ಮತ ಎಣಿಕೆ ಹೆಚ್ಚು ಸಮಯ ತೆಗೆದುಕೊಳ್ಳಬಹುದಾಗಿದೆ. ಹಾಗಾಗಿ ಫಲಿತಾಂಶ ಪ್ರಕಟಣೆಯೂ ಒಂದು ದಿನ ತಡವಾಗಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.**

---

ಹಿರಿಯ ಸಂಸದ ನಿಶಿಕಾಂತ್ ದುಬೆಯಿಂದ ಸಬ್‌ಸ್ಟ್ಯಾಂಟಿವ್ ನೋಟಿಸ್ ಸಲ್ಲಿಕೆ

## ರಾಹುಲ್ ಲೋಕಸಭೆ ಸದಸ್ಯತ್ವ ರದ್ದು ಕೋರಿ ಬಿಜೆಪಿ ನೋಟಿಸ್

**ದೆಹಲಿ:** ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸುತ್ತಿರುವ

ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಗೆ ತಿರುಗೇಟು ನೀಡಲು ಮುಂದಾಗಿರುವ ಆಡಳಿತಾ ರೂಢ ಪಕ್ಷವಾದ ಬಿಜೆಪಿ, ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವ ವನ್ನೇ ರದ್ದುಗೊಳಿಸುವಂತೆ ಕೋರಿ ಲೋಕಸಭೆಗೆ ಗುರುವಾರ ನೋಟಿಸ್ ಸಲ್ಲಿಸಿದೆ.

ಲೋಕಸಭೆಯಲ್ಲಿನ ರಾಹುಲ್ ಗಾಂಧಿ ಸದಸ್ಯತ್ವ ರದ್ದುಗೊಳಿಸುವಂತೆ 'ನಿಲುವಳಿ ಪ್ರಸ್ತಾವ' ಸಲ್ಲಿಸಿದ್ದೇನೆ ಎಂದು ಬಿಜೆಪಿಯ ಹಿರಿಯ ಸಂಸದ ನಿಶಿಕಾಂತ್ ದುಬೆ ಗುರುವಾರ ಹೇಳಿದ್ದಾರೆ. ಭಾರತ-ಅಮೆರಿಕ ವ್ಯಾಪಾರ ಒಪ್ಪಂದ, ಕೇಂದ್ರ ಬಜೆಟ್ ಟೀಕಿಸಿ, ಆರ್ಥಿಕ ಸಮೀಕ್ಷೆಯಲ್ಲಿನ ಕೆಲವು ಅಂಶಗಳನ್ನು ಉಲ್ಲೇಖಿಸಿ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಎನ್‌ಡಿಎ ಸರಕಾರದ ವಿರುದ್ಧ ಬುಧವಾರ ವೀರಾವೇಶದಿಂದ ಭಾಷಣ ಮಾಡಿದ್ದರು. ಪ್ರಧಾನಿ ಮೋದಿ ಅವರ ಆಡಳಿತವನ್ನು ತೀವ್ರವಾಗಿ ಖಂಡಿಸಿದ್ದರು. ಅಲ್ಲದೇ, ಕಾಂಗ್ರೆಸ್ ನಾಯಕರು ಪ್ರತಿಪಕ್ಷಗಳ ಸಂಸದರ ಸಹಿ ಪಡೆದು ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದಾರೆ. ಅದಕ್ಕೆ ಸಿಟ್ಟಾಗಿರುವ ಬಿಜೆಪಿ ಸದಸ್ಯರು, ರಾಹುಲ್ ಗಾಂಧಿ ಯನ್ನೇ ಪದಚ್ಯುತಿಗೊಳಿಸಬೇಕಿದೆ. ಅದಕ್ಕೀಗ ಸಮಯ ಬಂದಿದೆ ಎಂದು ಹೇಳಿದ್ದರು. ಅದರ ಮರು ದಿನವೇ ದುಬೆ ಅವರು ರಾಹುಲ್ ಸದಸ್ಯತ್ವ ರದ್ದುಕೋರಿ ನೋಟಿಸ್ ಸಲ್ಲಿಸಿದ್ದಾರೆ.

ಸಂಸತ್ ಭವನದ ಸಂಕೀರ್ಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ದುಬೆ, ರಾಹುಲ್ ಅವರು ಅಮೆರಿಕದ ಸೊರೋಸ್ ಫೌಂಡೇಷನ್, ಯುಎಸ್‌ಐಎಡಿ, ಫೋರ್ಡ್ ಫೌಂಡೇಷನ್ ನೆರವು ಪಡೆದು ವಿದೇಶಗಳಿಗೆ ಹಲವು ಬಾರಿ ಭೇಟಿ ನೀಡಿದ್ದಾರೆ. ಅಲ್ಲಿ ಭಾರತ ವಿರೋಧಿ ಹೇಳಿಕೆಗಳನ್ನು ನೀಡುತ್ತಾರೆ ಎಂಬುದನ್ನು ನೋಟಿಸ್‌ನಲ್ಲಿ ಉಲ್ಲೇಖಿಸಿರುವೆ. ಇದು ವಿಶೇಷ ಹಕ್ಕುಚ್ಯುತಿ ನೋಟಿಸ್ ಅಲ್ಲ. ಬದಲಾಗಿ ಒಂದು ಪ್ರಮುಖ ಪ್ರಸ್ತಾವನೆ. ಅದರಲ್ಲಿ ರಾಹುಲ್ ಗಾಂಧಿ ಭಾರತ ವಿರೋಧಿ ಗುಂಪಿನ ಆರ್ಥಿಕ ಸಹಕಾರದಲ್ಲಿ ಥಾಯ್ಲೆಂಡ್, ವಿಯೆಟ್ನಾಂ, ಕಾಂಬೋಡಿಯಾಗೆ ಭೇಟಿ ನೀಡಿರುವುದು ಮತ್ತು ಭಾರತ ವಿರೋಧಿ ಜನರ ಜತೆ ಒಪ್ಪಂದ ಮಾಡಿಕೊಂಡಿರುವುದನ್ನು ಉಲ್ಲೇಖಿಸಿರುವೆ. ಅದೇ ಕಾರಣವಾಗಿ ಸಬ್‌ಸ್ಟ್ಯಾಂಟಿವ್ ಮೋಷನ್ ನೋಟಿಸ್ ನೀಡಿ ರಾಹುಲ್ ಗಾಂಧಿಯ ಸಂಸತ್ ಸದಸ್ಯತ್ವವನ್ನು ರದ್ದುಗೊಳಿಸಿ ಜೀವಿತಾವಧಿಗೆ ಚುನಾವಣೆಯಲ್ಲಿ ಸ್ಪರ್ಧಿಸ ಲಾಗದಂತೆ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ರುವುದಾಗಿ ಹೇಳಿದ್ದಾರೆ.

ಸಬ್‌ಸ್ಟ್ಯಾಂಟಿವ್ ಮೋಷನ್ ಎನ್ನುವುದು ಲೋಕಸಭೆ ಅಥವಾ ವಿಧಾನಸಭೆಯ ಅನುಮೋದನೆಗಾಗಿ ಸಲ್ಲಿಸಲಾಗುವ ಸ್ವತಂತ್ರ ಪ್ರಸ್ತಾವನೆಯಾಗಿರುತ್ತದೆ

### ಹಿಂದೆಯೂ ರಾಹುಲ್ ಸದಸ್ಯತ್ವ ರದ್ದಾಗಿತ್ತು

**ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವ ಈ ಹಿಂದೆಯೂ ಒಮ್ಮೆ ರದ್ದಾಗಿತ್ತು. 2019ರ ಏ.13ರಂದು ಲೋಕಸಭಾ ಚುನಾವಣೆ ಸಂದರ್ಭ ಕೋಲಾರದಲ್ಲಿ ಪ್ರಚಾರ ಸಭೆಯಲ್ಲಿ ಮಾಡಿದ ಭಾಷಣದಲ್ಲಿ 'ಮೋದಿ ಉಪನಾಮ ಹೊಂದಿದವರೆಲ್ಲರೂ ಏಕೆ ಕಳ್ಳರೇ ಆಗಿರುತ್ತಾರೆ' ಎಂದಿದ್ದರು. ಇದು 'ಮೋದಿ ಹೆಸರಿನವರೆಲ್ಲರ ಮಾನಕ್ಕೆ ಹಾನಿ ಮಾಡಿದೆ' ಎಂದು ಸೂರತ್‌ನ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ ಎಂಬವರು ನ್ಯಾಯಾಲಯದ ಮೆಟ್ಟಿಲೇರಿದ್ದರು. 4 ವರ್ಷ ವಿಚಾರಣೆ ನಡೆಸಿದ ಸೂರತ್ ನ್ಯಾಯಾಲಯ, ಆರೋಪ ದೃಢಪಟ್ಟಿದ್ದರಿಂದ ರಾಹುಲ್ ಗಾಂಧಿ ಅವರಿಗೆ 2 ವರ್ಷಗಳ ಜೈಲು ಶಿಕ್ಷೆ ವಿಧಿಸಿ 2023ರಲ್ಲಿ ತೀರ್ಪು ನೀಡಿತ್ತು. ಅದರ ಬೆನ್ನಲ್ಲೇ ಮಾ.24ರಂದು ರಾಹುಲ್ ಅವರ ಲೋಕಸಭಾ ಸದಸ್ಯತ್ವ ರದ್ದುಗೊಂಡಿತು. ಜತೆಗೆ 6 ವರ್ಷ ಚುನಾವಣೆಗೆ ನಿಲ್ಲುವುದಕ್ಕೂ ನಿಷೇಧವಿತ್ತು. ಆ ಬಳಿಕ ರಾಹುಲ್ ಶಿಕ್ಷೆ ರದ್ದು ಕೋರಿ ಸುಪ್ರೀಂ ಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್ ಶಿಕ್ಷೆಯನ್ನು ಅಮಾನತಿನಲ್ಲಿರಿಸಿ ಆಗಸ್ಟ್‌ನಲ್ಲಿ ತೀರ್ಪು ಪ್ರಕಟಿಸಿದ್ದರಿಂದ ರಾಹುಲ್ ಅವರ ಲೋಕಸಭಾ ಸದಸ್ಯತ್ವ ಮರುಸ್ಥಾಪಿತವಾಯಿತು. 2024ರಲ್ಲಿ ಚುನಾವಣೆಗೆ ಸ್ಪರ್ಧಿಸಲೂ ಅವಕಾಶವಾಯಿತು.**

---

2023 ಜ.23ರಂದು ವಾಹನ ಗುದ್ದಿಸಿ ನಕ್ಕಿದ್ದ ಪೊಲೀಸ್ ಅಧಿಕಾರಿ । ಪೊಲೀಸ್ ಅಧಿಕಾರಿ ವರ್ತನೆಗೆ ಜಾಲತಾಣ ನೆಟ್ಟಿಗರ ಆಕ್ರೋಶ

## ಅಪಘಾತಕ್ಕೆ ಬಲಿ: ₹263 ಕೋಟಿ ಪರಿಹಾರ

**ವಾಷಿಂಗ್ಟನ್:** ಅಮೆರಿಕದ ಸಿಯಾಟಲ್‌ನ ನಾರ್ಥ್ ಈಸ್ಟರ್ನ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದ ಭಾರತದ ವಿದ್ಯಾರ್ಥಿನಿ ಜಾಹ್ನವಿ ಕಂದುಲಾ



2023ರ ಜ.23ರಂದು ರಸ್ತೆ ಅಪಘಾತದಲ್ಲಿ ದುರ್ಮರಣ ಕ್ಕೀಡಾಗಿದ್ದರು. ಪೊಲೀಸ್ ಅಧಿಕಾರಿ ಯೊಬ್ಬರು ಚಲಾಯಿಸುತ್ತಿದ್ದ ಸರಕಾರಿ ವಾಹನ 40 ಕಿಮಿ ವೇಗ ಮಿತಿಯ ರಸ್ತೆಯಲ್ಲಿ 119 ಕಿಮೀ ವೇಗದಲ್ಲಿ ಚಲಿಸುತ್ತಿದ್ದರಿಂದ ರಸ್ತೆ ದಾಟುತ್ತಿದ್ದ ವಿದ್ಯಾರ್ಥಿನಿ ಜಾಹ್ನವಿಗೆ ಡಿಕ್ಕಿ ಹೊಡೆದಿತ್ತು. ಅಪಘಾತದ ರಭಸಕ್ಕೆ ಜಾಹ್ನವಿ 135 ಅಡಿಗಳಷ್ಟು ದೂರಕ್ಕೆ ಹಾರಿ ಬಿದ್ದಿದ್ದು, ಸ್ಥಳದಲ್ಲೇ ಸಾವಿಗೀಡಾಗಿದ್ದರು. ವಾಹನ ಚಲಾಯಿಸುತ್ತಿದ್ದ ಪೊಲೀಸ್ ಅಧಿಕಾರಿ ಕೆವಿನ್ ಡೇವ್ ಆಗ ತುರ್ತು ಮೊಬೈಲ್ ಕರೆ ಸ್ವೀಕರಿಸಿ ಮಾತನಾಡುತ್ತಿದ್ದರು ಎಂಬುದೂ ದೃಢಪಟ್ಟಿತ್ತು. ವಾಹನದಲ್ಲಿದ್ದ ಮತ್ತೊಬ್ಬ ಪೊಲೀಸ್ ಅಧಿಕಾರಿ ಡೇನಿಯಲ್ ಆಡೆರರ್ ಎಂಬಾತ, ಅಷ್ಟೊಂದು ತೀವ್ರ ಸ್ವರೂಪದ ಅಪಘಾತವಾಗಿ ಯುವತಿಯೊಬ್ಬಳು ಸಾವಿಗೀಡಾಗಿದ್ದರೂ ನಗುತ್ತಾ ಪ್ರತಿಕ್ರಿಯಿಸಿದ್ದ. 'ಅವಳು ಕಾರಿನ ಮುಂಬದಿ ಗಾಜಿಗೆ ಬಂದು ಬಡಿಯುತ್ತಾಳೆ ಅಂದುಕೊಂಡಿದ್ದೆ. ಆಕೆ ಅಷ್ಟೂ ದೂರು ಹಾರಿ ಹೋಗಿ ಬಿದ್ದ ಸತ್ತಳು' ಎಂದು ಬಹಳ ಹಗುರುವಾಗಿ ಪ್ರತಿಕ್ರಿಯಿಸಿದ್ದ. ಆತನ ಅಮಾನವೀಯ ವರ್ತನೆ ಮತ್ತು ಅಪಘಾತದ ದೃಶ್ಯಗಳು ಪೊಲೀಸ್ ಅಧಿಕಾರಿಗಳಿಬ್ಬರೂ ಧರಿಸಿದ್ದ ಬಾಡಿ ಕ್ಯಾಮೆರಾದಲ್ಲಿ ದಾಖಲಾಗಿತ್ತು. ಈ ಸಂದರ್ಭದ ವಿಡಿಯೊ ಜಾಲತಾಣದಲ್ಲಿ ಅಪ್‌ಲೋಡ್ ಆದ ಬಳಿಕ ಪೊಲೀಸ್ ಅಧಿಕಾರಿಗಳ ಅಮಾನವೀಯ ನಡೆಗೆ ನೆಟ್ಟಿಗರಿಂದ ಬಹಳ ಆಕ್ರೋಶ ವ್ಯಕ್ತವಾಗಿತ್ತು.

ಆ ಬಳಿಕ ಕಿಂಗ್‌ಕೌಂಟಿ ಸುಪೀರಿಯರ್ ಕೋರ್ಟ್‌ನಲ್ಲಿ ಅಪಘಾತ ಪ್ರಕರಣದ ವಿಚಾರಣೆ ನಡೆದಿದ್ದು, ಪೊಲೀಸ್ ಇಲಾಖೆಯನ್ನು ತೀವ್ರವಾಗಿ ಖಂಡಿಸಲಾಗಿತ್ತು. ಬಳಿಕ ಸಿಯಾಟೆಲ್‌ನ ಸ್ಥಳೀಯ ಆಡಳಿತ ಪರಿಹಾರ ಮೊತ್ತವಾಗಿ ಹೈದರಾಬಾದ್ ಮೂಲದ ಜಾಹ್ನವಿ ಕುಟುಂಬಕ್ಕೆ 2.90 ಕೋಟಿ ಡಾಲರ್ (263 ಕೋಟಿ ರು.) ಕೊಡಬೇಕಾಗಿ ಬಂದಿದೆ ಎಂದು ಜಾಹ್ನವಿ ಪರ ವಕೀಲರಾದ ಎರಿಕಾ ಇವಾನ್ಸ್ ಬುಧವಾರ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಜಾಹ್ನವಿ ದುರ್ಮರಣಕ್ಕೆ ಆಘಾತ ವ್ಯಕ್ತಪಡಿಸಿದ್ದ ನಾರ್ಥ್ ಈಸ್ಟರ್ನ್ ವಿವಿ, ಆ ಬಳಿಕ ಜಾಹ್ನವಿಗೆ ಮರಣೋತ್ತರವಾಗಿ ಸ್ನಾತಕೋತ್ತರ ಪದವಿ ಪ್ರಮಾಣಪತ್ರ ಪ್ರದಾನ ಮಾಡಿದೆ.

---

## ಭಾರತ-ರಷ್ಯಾ ಸಂಬಂಧಕ್ಕೆ ಆಕಾಶವೇ ಮಿತಿ: ಲಾವ್ರೋವ್

**ಮಾಸ್ಕೊ:** ರಷ್ಯಾದಿಂದ ಕಚ್ಚಾತೈಲ ಖರೀದಿಯನ್ನು ಭಾರತ ನಿಲ್ಲಿಸುತ್ತದೆ ಎಂದು ಭಾರತ ಸರಕಾರದ ಯಾವುದೇ

ಸಚಿವರಾಗಲೀ, ಪ್ರಧಾನಿ ನರೇಂದ್ರ ಮೋದಿ ಅವರಾಗಲೀ ಹೇಳಿಲ್ಲ. ಕೇವಲ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತ್ರ ಹಾಗೆ ಹೇಳುತ್ತಿದ್ದಾರೆ ಎಂದು ರಷ್ಯಾ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಹೇಳಿಕೆ ನೀಡಿದ್ದಾರೆ.

ಕ್ಯಾಬಿನೆಟ್ ಸಚಿವರು ತಮ್ಮ ಸಚಿವಾಲಯದ ಕಾರ್ಯಕ್ಷಮತೆ ಕುರಿತು ವರದಿ ಮಾಡುವ ಸಮಿತಿ 'ಸ್ಟೇಟ್ ಡುಮಾ'ದ ಸಭೆಯಲ್ಲಿ ಮಾತನಾಡಿದ ಲಾವ್ರೊವ್, ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಸುಂಕ-ಆರ್ಥಿಕ ನಿರ್ಬಂಧ ಮತ್ತು ನೇರ ನಿಷೇಧ ಸೇರಿದಂತೆ ವಿವಿಧ ಕ್ರಮಗಳನ್ನು ಬಳಸಿಕೊಂಡು ಭಾರತ ಕಚ್ಚಾತೈಲವನ್ನು ರಷ್ಯಾದಿಂದ ಖರೀದಿಸದಂತೆ ಮಾಡಲು ಯತ್ನಿಸುತ್ತಿದ್ದಾರೆ ಎಂದು ದೂಷಿಸಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ಅಧ್ಯಕ್ಷ ವ್ಲಾದಿಮೀರ್ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಿದ್ದಾಗ ಉಭಯ ದೇಶಗಳ ನಡುವಿನ ಸಂಬಂಧ ಮತ್ತಷ್ಟು ಗಾಢವಾಗಿದೆ. ದೆಹಲಿ-ಮಾಸ್ಕೊ ಸಂಬಂಧಕ್ಕೆ ಆಕಾಶವೇ ಮಿತಿ. ಜಂಟಿ ಒಪ್ಪಂದಗಳ ಹಲವು ದಾಖಲೆಗಳಿಗೆ, ಪ್ಯಾಕೇಜ್‌ಗಳಿಗೆ ಎರಡೂ ದೇಶಗಳು ಸಹಿ ಹಾಕಿವೆ. ರಷ್ಯಾ-ಭಾರತ ಸಂಬಂಧ ಮತ್ತಷ್ಟು ಶ್ರೀಮಂತಗೊಂಡಿದೆ. ವಿಶೇಷ ಸವಲತ್ತುಗಳ ಕಾರ್ಯತಂತ್ರ ಪಾಲುದಾರಿಕೆ ಸೃಷ್ಟಿಸಿದೆ ಎಂಬುದನ್ನೂ ಲಾವ್ರೋವ್ ಇದೇ ವೇಳೆ ನೆನಪಿಸಿದ್ದಾರೆ.

ಅಲ್ಲದೇ, ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ಮತ್ತು ಐದು ಹೊಸ ಸದಸ್ಯರನ್ನು ಒಳಗೊಂಡಿರುವ ಬ್ರಿಕ್ಸ್ ಒಕ್ಕೂಟದ ಅಧ್ಯಕ್ಷತೆಯನ್ನು ಭಾರತ ಜ.1ರಂದು ವಹಿಸಿಕೊಂಡಿದೆ. ಭಾರತದ ಅಧ್ಯಕ್ಷತೆಯಲ್ಲಿ ಇದೇ ವರ್ಷ ಬ್ರಿಕ್ಸ್ ಶೃಂಗಸಭೆ ನಡೆಯಲಿದೆ. ಅದಲ್ಲದೇ ರಷ್ಯಾ-ಭಾರತದ ನಾಯಕರ ನಡುವೆ ಮತ್ತೊಂದು ಮಹತ್ವದ ಸಭೆಯನ್ನೂ ನಿರೀಕ್ಷಿಸಲಾಗಿದೆ ಎಂದು ಲಾವ್ರೋವ್ ಹೇಳಿದ್ದಾರೆ.

---

## 3.60 ಲಕ್ಷ ಕೋಟಿ ರು. ರಕ್ಷಣಾ ಸಾಮಗ್ರಿ ಖರೀದಿ: ಡಿಎಸಿ ಸಮ್ಮತಿ

**ದೆಹಲಿ:** ಅತ್ಯಾಧುನಿಕ ಯುದ್ಧ ವಿಮಾನಗಳು, ಪ್ರಬಲ ಯುದ್ಧ ಕ್ಷಿಪಣಿಗಳು ಮತ್ತು ಸ್ಯೂಡೊ ಸ್ಯಾಟಲೈಟ್‌ಗಳು ಸೇರಿದಂತೆ ಒಟ್ಟು 3.60 ಲಕ್ಷ ಕೋಟಿ ರು.ಗಳ ರಕ್ಷಣಾ ಸಾಮಗ್ರಿಗಳ ಖರೀದಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯ ರಕ್ಷಣಾ ಸಾಮಗ್ರಿಗಳ ಖರೀದಿ ಮಂಡಳಿ(ಡಿಎಸಿ) ಗುರುವಾರ ಅನುಮೋದನೆ ನೀಡಿದೆ.ಭಾರತೀಯ ವಾಯುಪಡೆಗೆ ಅಗತ್ಯವಾದ 'ಮಲ್ಟಿ ರೋಲ್ ಫೈಟರ್ ಏರ್ ಕ್ರಾಫ್ಟ್'(ಎಂಆರ್‌ಎಫ್‌ಎ) ಅಂದರೆ ಫ್ರಾನ್ಸ್‌ನಿಂದ 114 ರಾಫೇಲ್ ಯುದ್ಧ ವಿಮಾನಗಳ ಖರೀದಿ, 'ಕಾಂಬ್ಯಾಟ್ ಮಿಸೈಲ್ಸ್'(ಸಮರ ಕ್ಷಿಪಣಿಗಳು) ಹಾಗೂ 'ಏರ್‌ಷಿಪ್ ಬೇಸ್ಡ್ ಹೈ ಆಲ್ಟಿಟ್ಯೂಡ್ ಸ್ಯೂಡೊ ಸ್ಯಾಟಲೈಟ್ಸ್ (ಎಎಸ್-ಎಚ್‌ಎಪಿಎಸ್)ಗಳನ್ನು ಖರೀದಿಸಲು 'ಡಿಎಸಿ' ಸಮ್ಮತಿಸಿದೆ ಎಂದು ರಕ್ಷಣಾ ಸಚಿವಾಲಯ 'ಎಕ್ಸ್' ಸಂದೇಶದಲ್ಲಿ ಗುರುವಾರ ತಿಳಿಸಿದೆ.

ಇದು ದೇಶದ ಇತಿಹಾಸದಲ್ಲಿಯೇ ಅತಿದೊಡ್ಡ ರಕ್ಷಣಾ ಖರೀದಿಯಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರು ಫೆ.17ರಂದು ದೆಹಲಿಗೆ ಭೇಟಿ ನೀಡುಲಿರುವ ಸಂದರ್ಭದಲ್ಲೇ ಅತಿದೊಡ್ಡ ರಕ್ಷಣಾ ಖರೀದಿಗೆ 'ಡಿಎಸಿ' ಅನುಮೋದನೆ ನೀಡಿರುವುದು ಗಮನಾರ್ಹ.

ರಕ್ಷಣಾ ಸಚಿವಾಲಯದ ಅನುಮೋದನೆಯ ನಂತರ ಈ ಅತಿದೊಡ್ಡ ರಕ್ಷಣಾ ಸಾಮಗ್ರಿ ಖರೀದಿ ಪ್ರಸ್ತಾವನೆಗೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಭದ್ರತೆಗೆ ಸಂಬಂಧಿಸಿದ ಸಂಪುಟ ಸಮಿತಿಯ ಅನುಮೋದನೆಯೂ ಸಿಗಬೇಕಿದೆ.

ಮೂಲಗಳ ಪ್ರಕಾರ ಈಗಿನ ಪ್ರಸ್ತಾವನೆಯಡಿ 18 ರಾಫೇಲ್ ಯುದ್ಧ ವಿಮಾನಗಳನ್ನು ಡಸಾಲ್ಟ್ ಏವಿಯೇಷನ್ ಕಂಪನಿ ಫ್ರಾನ್ಸ್‌ನಿಂದ ರವಾನಿಸಲಿದ್ದರೆ, ಉಳಿದ 96 ಯುದ್ಧ ವಿಮಾನಗಳನ್ನು ಜಂಟಿ ಸಹಯೋಗದಲ್ಲಿ ಭಾರತದಲ್ಲಿಯೇ ತಯಾರಿಸಲಾಗುತ್ತದೆ.ಭಾರತದಲ್ಲಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿ. ಕಂಪನಿಯು ಡಸಾಲ್ಟ್ ಜತೆಗೂಡಿ ರಾಫೇಲ್ ವಿಮಾನದ ಭಾಗಗಳನ್ನು ನಿರ್ಮಾಣ ಮಾಡಿಕೊಡಲಿದೆ.

ಪ್ರಸ್ತುತ ಭಾರತದ ಸಶಸ್ತ್ರಪಡೆಗಳ ಬಳಿ ಒಟ್ಟು 36 ರಾಫೇಲ್ ಯುದ್ಧ ವಿಮಾನಗಳಿವೆ. ಈಗ 114 ವಿಮಾನ ಖರೀದಿಯಾಗಲಿವೆ. ಆಗ ಫ್ರಾನ್ಸ್ ನಂತರ (225) ಅತಿ ಹೆಚ್ಚು ರಾಫೇಲ್ ಯುದ್ಧ ವಿಮಾನ ಹೊಂದಿದ ದೇಶ ಭಾರತ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

---

ವಿಜಯ್ ಮಲ್ಯಗೆ ಕೋರ್ಟ್ ಕೊನೆ ಅವಕಾಶ

## ತಕ್ಷಣ ವಿಚಾರಣೆಗೆ ಹಾಜರಾಗಿ

**ಮುಂಬೈ:** ಉದ್ದೇಶಪೂರ್ವಕವಾಗಿ ನ್ಯಾಯಾಲಯದ ವಿಚಾರಣೆಯಿಂದ ತಪ್ಪಿಸಿಕೊಳ್ಳುವ ನಡೆಯಿಂದ ಎಂದಿಗೂ ನ್ಯಾಯಯುತವಾದ ಪರಿಹಾರವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ, ತಕ್ಷಣವೇ ಭಾರತಕ್ಕೆ ವಾಪಸಾಗಿ, ಕೋರ್ಟ್‌ಗೆ ಹಾಜರಾಗಿ ವಿಚಾರಣೆಯನ್ನು ಎದುರಿಸಿ ಎಂದು ದೇಶದಿಂದ ಕದ್ದೋಡಿಹೋಗಿರುವ ಆರ್ಥಿಕ ಅಪರಾಧಿ ವಿಜಯ್ ಮಲ್ಯಗೆ ಬಾಂಬೆ ಹೈಕೋರ್ಟ್ ಗುರುವಾರ ಬಲು ಕಠಿಣವಾಗಿ ಹೇಳಿದೆ. ಭಾರತಕ್ಕೆ ಮರಳಿ ವಿಚಾರಣೆ ಎದುರಿಸಲು ನಿಮಗೆ ಇದೇ ಕೊನೆ ಅವಕಾಶ ಎಂದೂ ಹೇಳಿದೆ.

ದೇಶ ಭ್ರಷ್ಟ ಆರ್ಥಿಕ ಅಪರಾಧಿಗಳ ಕಾಯಿದೆಯ ನಿಯಮಗಳಡಿ ಕೇಂದ್ರ ಸರಕಾರ ತಮ್ಮನ್ನು ದೇಶಭ್ರಷ್ಟ ಎಂದು ಘೋಷಿಸಿರುವುದನ್ನು ಪ್ರಶ್ನಿಸಿ ವಿಜಯ್ ಮಲ್ಯ ಸ್ಥಳೀಯ ವಕೀಲರ ಮೂಲಕ ಬಾಂಬೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ಮತ್ತು ನ್ಯಾ.ಗೌತಮ್ ಅನ್ಖಾಡ್ ಅವರ ದ್ವಿಸದಸ್ಯ ಪೀಠ ಅರ್ಜಿ ವಿಚಾರಣೆ ನಡೆಸುವಾಗ ಕಟು ಶಬ್ದಗಳಲ್ಲಿ ಎಚ್ಚರಿಕೆ ನೀಡಿದೆ.

ಆರೋಪಿ ವಿಜಯ್ ಮಲ್ಯ ನ್ಯಾಯಾಲಯದ ವ್ಯಾಪ್ತಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಕೋರ್ಟ್ ಮುಂದಿರುವ ದಾಖಲೆಗಳೇ ತೋರಿಸುತ್ತಿವೆ. ಆದ್ದರಿಂದ ಅವರು ಅರ್ಜಿಗಳನ್ನು ಸಲ್ಲಿಸುವ ಮೂಲಕ ಕಾನೂನು ಪರಿಹಾರಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಹಾಗಾಗಿ ಅವರು ದೇಶಕ್ಕೆ ಮರಳಿ ನ್ಯಾಯಾಲಯಕ್ಕೆ ಹಾಜರಾಗಲೇಬೇಕು ಎಂದು ಪೀಠ ಸ್ಪಷ್ಟವಾಗಿ ಹೇಳಿದೆ.

ಮಲ್ಯ ನೀವು ಕೂಡಲೇ ಭಾರತಕ್ಕೆ ಮರಳಬೇಕು. ಇಲ್ಲದಿದ್ದರೆ ನಿಮ್ಮ ಅರ್ಜಿ ವಿಚಾರಣೆ ನಡೆಸಲು ಸಾಧ್ಯವಿಲ್ಲ. ಅಲ್ಲದೇ, ನಿಮ್ಮ ವಿರುದ್ಧದ ಆರ್ಥಿಕ ಅಪರಾಧ ಪ್ರಕರಣಗಳನ್ನೂ ವಜಾಗೊಳಿಸಲು ಸಾಧ್ಯವಿಲ್ಲ. ಭಾರತಕ್ಕೆ ಮರಳಲು ನಿಮಗೆ ಕೊನೆ ಅವಕಾಶ ನೀಡುತ್ತಿದ್ದೇವೆ ಎಂದು ಹೇಳಿದ ಪೀಠ, ವಿಚಾರಣೆಯನ್ನು ಮುಂದಿನ ವಾರಕ್ಕೆ ಮುಂದೂಡಿತು.

## ರಾಜ್‌ಪಾಲ್ ಜಾಮೀನು 16ಕ್ಕೆ?

**ದೆಹಲಿ:** ಬಾಲಿವುಡ್ ಖ್ಯಾತ ಹಾಸ್ಯನಟ ಸ್ವಂತವಾಗಿ ಸಿನಿಮಾ ನಿರ್ಮಾಣ ಮಾಡುವ ಸಾಹಸಕ್ಕೆ ಕೈಹಾಕಿ 9 ಕೋಟಿ ರು. ಸಾಲದ ಸುಳಿಗೆ ಸಿಲುಕಿಕೊಂಡು, ಚೆಕ್ ಬೌನ್ಸ್ ಮತ್ತು ಸಾಲದ ಹಣ ಮರಳಿಸಲಾಗದ ಕಾರಣಕ್ಕೆ ಫೆ.5ರಿಂದ ತಿಹಾರ್ ಜೈಲು ಪಾಲಾಗಿದ್ದಾರೆ. ಕುಟುಂಬದಲ್ಲಿ ಮದುವೆ ಶುಭ ಕಾರ್ಯ ಇರುವುದರಿಂದ ಜಾಮೀನು ನೀಡಿ ಎಂದು ನಟ ರಾಜ್‌ಪಾಲ್ ಸಲ್ಲಿಸಿದ್ದ ಅರ್ಜಿಯನ್ನು ಸ್ವೀಕರಿಸಿದ



ಸುಪ್ರೀಂ ಕೋರ್ಟ್, ವಿಚಾರಣೆಯನ್ನು ಸೋಮವಾರಕ್ಕೆ (ಫೆ.16ಕ್ಕೆ) ಮುಂದೂಡಿದೆ. ಹಾಗಾಗಿ, ಗುರುವಾರ ಬಿಡುಗಡೆಯ ನಿರೀಕ್ಷೆಯಲ್ಲಿದ್ದ ನಟ ಮತ್ತೂ 4 ದಿನ ಸೆರೆಮನೆಯಲ್ಲೇ ಇರುವಂತಾಗಿದೆಜಈ ಮಧ್ಯೆ, ಕೋಟ್ಯಂತರ ಜನರನ್ನು ತನ್ನ ಹಾಸ್ಯನಟನೆಯ ಮೂಲಕ ನಗಿಸುತ್ತಿದ್ದ ರಾಜ್ ಪಾಲ್ ಯಾದವ್ ಜೈಲು ಪಾಲಾಗುವಾಗ '9 ಕೋಟಿ ರು. ಸಾಲ ತೀರಿಸಲು ನನ್ನಲ್ಲಿ ಸ್ವಲ್ಪವೂ ಹಣ ಇಲ್ಲ. ಕೋರ್ಟ್ ಹೇಳಿದಂತೆ ಶರಣಾಗುವುದೊಂದೇ ಮಾರ್ಗ. ನಾನೀಗ ಏಕಾಂಗಿ ನನಗೀಗ ಯಾರೂ ಸ್ನೇಹಿತರಿಲ್ಲ' ಎಂದು ಮಾಧ್ಯಮಗಳ ಬಳಿ ಹೇಳಿಕೊಂಡು ಹತಾಶೆ ವ್ಯಕ್ತಪಡಿಸಿದ್ದು ದೊಡ್ಡದಾಗಿ ಸುದ್ದಿಯಾಗಿತ್ತು. ಆ ಬಳಿಕ ಖಳನಟ ಸೋನು ಸೂದ್ ಸಹನಟ ನೆರವಿಗೆ ಮುಂದಾದರು. ನಂತರದಲ್ಲಿ ಸಂಗೀತ ನಿರ್ದೇಶಕರೊಬ್ಬರು 1.10 ಕೋಟಿ ರು. ನೀಡುವುದಾಗಿ ಹೇಳಿದರು. ಗಾಯಕ ಮಿಕಾ ಸಿಂಗ್ 11 ಲಕ್ಷ ರು. ಹಾಗೂ ಅನೂಪ್ ಜಲೋಟ 5 ಲಕ್ಷ ರು. ನೀಡಲಿದ್ದಾರೆ. ಅಲ್ಲದೇ, ಸಲ್ಮಾನ್ ಖಾನ್, ಅಜಯ್ ದೇವಗನ್ ನೆರವಾಗಲು ಸಿದ್ಧ ಎಂದಿದ್ದಾರೆ. ಇದೇ ವೇಳೆ, ನಟ ನವಾಜುದ್ದೀನ್ ಸಿದ್ದಿಕಿ, ಬಹುಕಾಲದ ಮಿತ್ರ ರಾಜ್‌ಪಾಲ್ ಉತ್ತಮ ವ್ಯಕ್ತಿ. ರಾಜ್‌ಪಾಲ್‌ಗೆ ಸಿನಿಮಾ ದುಡಿಮೆ ಚೆನ್ನಾಗಿದ್ದ ಕಾಲದಲ್ಲಿ ಅವರ ಮನೆ ಸಂಕಷ್ಟದಲ್ಲಿದ್ದ ನಟರಿಗೆ ಅನ್ನಛತ್ರವಾಗಿತ್ತು ಎಂದಿದ್ದಾರೆ. ರಾಜ್‌ಪಾಲ್ ದಂಪತಿ ಕಷ್ಟದಲ್ಲಿದ್ದ ಕಲಾವಿದರಿಗೆ ತಮ್ಮ ಕೈಲಾದಷ್ಟು ನೆರವಾಗುತ್ತಿದ್ದರು ಎಂಬುದನ್ನು ನೆನಪಿಸಿಕೊಂಡಿದ್ದಾರೆ.

## ಸಮಾಚಾರ ಸಣ್ಣದಲ್ಲ

### ಮ್ಯಾರಥಾನ್ ಓಟ: ಅಭಿನಂದನೆ

**ಚಾಮರಾಜನಗರ:** ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ತೃತೀಯ ಬಿ.ಕಾಂ ವಿದ್ಯಾರ್ಥಿಯಾದ ಆರ್. ನವೀನ್ ಕುಮಾರ್ ನಾಗಲ್ಯಾಂಡ್ ನಲ್ಲಿ ನಡೆದ ಮ್ಯಾರಥಾನ್ ಓಟದಲ್ಲಿ 11ನೇ ಸ್ಥಾನ ಪಡೆದಿದ್ದಾರೆ. ಹರಿಯಾಣದಲ್ಲಿ ಫೆ.13ರಂದು ನಡೆಯಲಿರುವ ಕ್ರಾಸ್ ಕ್ರಂಟಿ ಕ್ರೀಡೆಯಲ್ಲಿ ಅಂತಿಮ ವರ್ಷದ ಬಿ.ಕಾಂ ವಿದ್ಯಾರ್ಥಿಗಳಾದ ಮಧುಸೂದನ್ ಹಾಗೂ ಆರ್. ನವೀನ್ ಕುಮಾರ್ಆಯ್ಕೆಯಾಗಿ ಭಾಗವಹಿಸುತ್ತಿದ್ದಾರೆ. ಪ್ರಾಂಶುಪಾಲರಾದ ಡಾ.ಆರ್.ಎಸ್.ಅಶ್ವಿನಿ, ಕ್ರೀಡಾ ಸಂಚಾಲಕರಾದ ಜಿ.ಕೆ ದೀಪ್ತಿ, ಅಧ್ಯಾಪಕರು ಹಾಗೂ ಉಪನ್ಯಾಸಕರು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

### ಗುಡಿಬಂಡೆಯಲ್ಲಿ ತರಗತಿಗಳಿಗೆ ಚಾಲನೆ

**ಗುಡಿಬಂಡೆ:** ಭಾರತದ ಬಲಿಷ್ಠ ಯುವಶಕ್ತಿಗೆ ಶಿಕ್ಷಣವೇ ಅಡಿಪಾಯವಾಗಿದ್ದು, ವಿದ್ಯಾರ್ಥಿಗಳು ಶಿಸ್ತು ಮತ್ತು ಕಠಿಣ ಪರಿಶ್ರಮವನ್ನು ಮೈಗೂಡಿಸಿಕೊಂಡಾಗ ಮಾತ್ರ ಉಜ್ವಲ ಭವಿಷ್ಯ ನಿರ್ಮಿಸಿಕೊಳ್ಳಲು ಸಾಧ್ಯ ಎಂದು ಜಿಲ್ಲಾಧಿಕಾರಿ ಡಾ. ಜಿ. ಪ್ರಭು ಅವರು ಅಭಿಪ್ರಾಯ ಪಟ್ಟರು. ಪಟ್ಟಣದ ಸರ್ಕಾರಿ ಬಾಲಕೀಯರ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದ್ದ 2025-26ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳ ''ಪ್ರೇರಣಾ'' ಶಿಬಿರ ಹಾಗೂ ಸಂಜೆ ತರಗತಿಗಳ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ಸರಕಾರವು ಶೈಕ್ಷಣಿಕ ಕ್ಷೇತ್ರಕ್ಕೆ ನೀಡುತ್ತಿರುವ ಅಭೂತ ಪೂರ್ವ ಸೌಲಭ್ಯಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಸದ್ಬಳಕೆ ಮಾಡಿಕೊಳ್ಳಬೇಕು. ಶಿಕ್ಷಣ ಎಂಬುದು ಕೇವಲ ಅಂಕಗಳಿಕೆಯಲ್ಲ, ಅದು ಜೀವನವನ್ನು ಬದಲಿಸುವ ಮಹಾನ್ ಶಕ್ತಿ ಎಂಬುದನ್ನು ವಿದ್ಯಾರ್ಥಿಗಳು ಅರಿಯಬೇಕು ಎಂದು ಅವರು ಮಾರ್ಮಿಕವಾಗಿ ನುಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಮಾತನಾಡಿದರು. ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಡಿಡಿಪಿಐ ರಮೇಶ್, ತಹಸೀಲ್ದಾರ್ಸಿಗ್ಬತ್ತುಲ್ಲಾ, ತಾಪಂ ಇಒ ನಾಗಮಣಿ ಸೇರಿದಂತೆ ವಿವಿಧ ಇಲಾಖೆಯ ಗಣ್ಯರು ಮತ್ತು ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

### 6ನೇ ತರಗತಿಗೆ ಪ್ರವೇಶಕ್ಕೆ ಅವಧಿ ವಿಸ್ತರಣೆ

**ಚಿಕ್ಕಬಳ್ಳಾಪುರ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಪೆರೇಸಂದ್ರ, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಅಲೀಪುರ, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬಾಗೇಪಲ್ಲಿ ಹಾಗೂ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ, (ಸಿಬಿಎಸ್.ಸಿ) ಮಸ್ತೇನಹಳ್ಳಿ ಇಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ 6ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಆನ್ ಲೈನ್ ಸೇವಾ ಸಿಂಧು ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿಗಳನ್ನು ಲಿಂಕ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಸದರಿ ಅರ್ಜಿ ಸಲ್ಲಿಸುವ ಅವಧಿಯನ್ನು ಫೆಬ್ರವರಿ 28 ರವರೆಗೆ ವಿಸ್ತರಿಸಲಾಗಿದೆ. ಈ ಶಾಲೆಗಳಲ್ಲಿ ಶೇ.75 ರಷ್ಟು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ (ಮುಸ್ಲಿಂ, ಕ್ರೈಸ್ತ, ಜೈನ್, ಸಿಖ್, ಪಾರ್ಸಿ,ಮತ್ತು ಬೌದ್ಧ) ಹಾಗೂ ಶೇ 25 ರಷ್ಟು ಹಿಂದುಳಿದ ವರ್ಗ,ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೀಸಲಿದ್ದು, ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆ ಅನುಗುಣವಾಗಿ ಹಾಗೂ ರೋಸ್ಟರ್ನಿಯಮದಂತೆ ಪ್ರವೇಶ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಅರ್ಜಿಗಳನ್ನು ಉಚಿತವಾಗಿ ಸಲ್ಲಿಸಲು ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳ ಕಚೇರಿ, ಜಿಲ್ಲಾಡಳಿತ ಭವನ, ಎಸ್.ಎ8, 2ನೇ ಮಹಡಿ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ. ದೂರವಾಣಿ: 08156-277049 ಗೆ ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**IN THE COURT OF THE SENIOR CIVIL JUDGE & J.M.F.C. AT MADHUGIRI**
**O.S. NO. 392/2023**

**Plaintiff: Smt.Rathnamma R w/o Ramaiah.G,** aged about 47 years, R/o # 24/25/1,2ND Corss. Thavarekere DRC post, Bengaloru south, Bengaluru-560029.

**V/S**

**Defendant; 1. Gangoji Roa s/o Late Appaji Roa,** aged about 60 years, **2. Mynabi w/o Appaji Roa,** aged about 56 years, **3. Ashwath Roa s/o Late Appaji Roa,** aged about 40 years, **4. Mohan s/o Late Appaji Roa,** aged about 38 years, **5.Raju s/o Gangaoji Roa,** aged about 36 years, All are r/o # 170/2, Sumith Granet behind MG School, Bilekalli, Bannerugatta Road Bengaluru south, Bengaluru-76

**Summons to Defendants no 1 to 5:;**
Whereas the plaintiff above named has instituted the above suit against all of you the defendant for specific performance of the contract of agreement dated 08-11-2021 and for such other relief. You are hereby summoned to appear in this court in person or by a pleader/advocate duly instructed and able to answer relating to the above case on 13-03-2026. At 11-00 a.m. in the forenoon, to answer the case and the day fixed for the final disposal of the case, you must be prepared to produce on that day all the witnesses and all the documents upon which you intend to rely in support of your case. Take notice that, in default if your appearancre on the day before mentioned, the above case will be heard and determined in your absence. Given under my hand and seal of this court on 12-02-2026.

**By order of the court**
**Sd/-,Shirastedar**
**Senior Civil judge & J.M.F.C.court Koratagere.**

**G.D.Devaraju. M.A.LLB.**
**Advocate**
**Main Road, Koratagere.**

### ಆಶಾ ಕಾರ್ಯಕರ್ತೆಯರ ಬೃಹತ್ ಪ್ರತಿಭಟನೆ : ಎಡಿಸಿಗೆ ಮನವಿ ಸಲ್ಲಿಕೆ

# ಸರಕಾರಿ ನೌಕರರಾಗಿ ಪರಿಗಣಿಸಿ

**ಚಿಕ್ಕಬಳ್ಳಾಪುರ:** ಆಶಾ ಕಾರ್ಯಕರ್ತೆಯರನ್ನು ಸರಕಾರಿ ನೌಕರರಾಗಿ ಪರಿಗಣಿಸಬೇಕು. ಭರವಸೆ ನೀಡಿದ್ದ 10 ಸಾವಿರ ರು. ಗೌರವಧನವನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿ ಗುರುವಾರ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ಜಿಲ್ಲಾಡಳಿತ ಭವನದ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಿ ಸರಕಾರವನ್ನು ಆಗ್ರಹಿಸಲಾಯಿತು.

ನಗರ ಹೊರವಲಯ ಜಿಲ್ಲಾಡಳಿತ ಭವನದ ಎದುರು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಭವನದ ಎದುರು ನಡೆಸಿದ ಪ್ರತಿಭಟನೆಯಲ್ಲಿ ನೂರಾರು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾಧ್ಯಕ್ಷೆ ಸರಸ್ವತಮ್ಮ, ಈ ಹಿಂದೆ ಸರಕಾರ ನಮಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ. ಕಳೆದ ವರ್ಷ ಜನವರಿಯಲ್ಲಿ ಗ್ಯಾರಂಟಿ ಯೋಜನೆಯಡಿ 10 ಸಾವಿರ ರು.ಗೌರವಧನ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದರು. ಆದರೆ ಇದುವರೆಗೆ ಅದನ್ನು ಜಾರಿಗೆ ತಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದೆ ನಾವು ದಿನಕ್ಕೆ 2 ಗಂಟೆಗಳ ಕೆಲಸ ಮಾಡುತ್ತಿದ್ದರೆ, ಈಗ ನಮ್ಮ ಕೆಲಸ ಪೂರ್ಣಾವಧಿ ಆಗಿದೆ. ಪ್ರಸ್ತುತ ದೊರೆಯುತ್ತಿರುವ ಗೌರವಧನವೂ ಸಮಯಕ್ಕೆ ಸಿಗುತ್ತಿಲ್ಲ. ಜೀವನ ನಡೆಸುವುದು ಬಹಳ ಕಷ್ಟವಾಗಿದೆ. ನಮ್ಮ ಶ್ರಮವನ್ನು ಪರಿಗಣಿಸಿ ಗೌರವಧನವನ್ನು ಹೆಚ್ಚಿಸಿ, ನಮ್ಮನ್ನೂ ಕೂಡ ಸರಕಾರಿ ನೌಕರರು ಎಂದು ಪರಿಗಣಿಸಬೇಕು ಎಂದು ಹೇಳಿದರು.

ಇನ್ನೂ ಕಾರ್ಮಿಕ ವಿರೋಧಿಯಾದ ನಾಲ್ಕು ಲೇಬರ್ ಕೋಡ್ಗಳನ್ನು ಹಿಂಪಡೆಯಬೇಕು. ವಿಬಿಜಿ ರಾಮ್ಜಿ ಕಾಯಿದೆ, ವಿದ್ಯುತ್ ತಿದ್ದುಪಡಿ ಮಸೂದೆ ಹಾಗೂ ಶಾಂತಿ ಕಾಯಿದೆಯನ್ನು ರದ್ದುಪಡಿಸಬೇಕು ಎಂದು ಕೂಡ ಆಗ್ರಹಿಸಲಾಯಿತು.

ಪ್ರತಿಭಟನೆ ಬಳಿಕ ಅಪರ ಜಿಲ್ಲಾಧಿಕಾರಿ ಡಾ.ಭಾಸ್ಕರ್ ಅವರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಆಶಾ ಕಾರ್ಯಕರ್ತೆಯರಾದ ರೆಷ್ಮ, ಮಂಜುಳಾ, ಸುಜಾತ, ಲಕ್ಷ್ಮಿ, ಸುಶೀಲಾ, ಜಯಮ್ಮ, ಲಲಿತಾ, ವೆಂಕಟಲಕ್ಷ್ಮಿ,ಪುಷ್ಪ, ಹನುಮೇಶ್ ಹಾಜರಿದ್ದರು.

ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ಜಿಲ್ಲಾಡಳಿತ ಭವನದ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಿದರು.

> ಕಡು ಬಿಸಿಲನ್ನು ಲೆಕ್ಕಿಸದೆ ಸೇರಿದ ಕಾರ್ಯಕರ್ತೆಯರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು ಪ್ರಸ್ತುತ ಸಾಲಿನ ಬಜೆಟ್ನಲ್ಲಿ ಗೌರವಧನವನ್ನು ನಿಗದಿ ಮಾಡುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕು.
> - ಸರಸ್ವತಮ್ಮ, ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾಧ್ಯಕ್ಷೆ

## 150 ಜೋಡಿ ಸರಳ ವಿವಾಹ ಇಂದು

**ರಾಮನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಸಾಮೂಹಿಕ ಸರಳ ವಿವಾಹ ಕಾರ್ಯಕ್ರಮ ಫೆ.13ರ ಸಂಜೆ 5 ಗಂಟೆಗೆ ನಡೆಯಲಿದ್ದು, ದಾಂಪತ್ಯ ಜೀವನಕ್ಕೆ ಕಾಲಿಡುವ 150ಕ್ಕೂ ಅಧಿಕ ಜೋಡಿಗಳಿಗೆ 50 ಸಾವಿರ ಪ್ರೋತ್ಸಾಹ ಧನ ಹಾಗೂ ವಿವಿಧ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ಶಾಸಕ ಇಕ್ಬಾಲ್ ಹುಸೇನ್ ತಿಳಿಸಿದರು.

ಯಾರಬ್ನಗರದ ಬಳಿ ಸಾಮೂಹಿಕ ಸರಳ ವಿವಾಹ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿ, ನಂತರ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಮಾರಂಭದಲ್ಲಿ ಕನಕಪುರ, ಮಾಗಡಿ, ಚನ್ನಪಟ್ಟಣ ಸೇರಿದಂತೆ ಜಿಲ್ಲೆಯಾದ್ಯಂತ 150ಕ್ಕೂ ಅಧಿಕ ಜೋಡಿಗಳು ಸರಳ ವಿವಾಹದ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ. ನಮ್ಮ ಸರಕಾರದಿಂದ ತಲಾ 50 ಸಾವಿರ ಪ್ರೋತ್ಸಾಹ ಧನವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಸೇರಲಿದೆ ಎಂದರು.

ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಸರಳ ವಿವಾಹ ಮಾಡಿಕೊಳ್ಳುವ ಜೋಡಿಗಳ ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಲಿದ್ದಾರೆ. ವಧು-ವರರ ವಯಸ್ಸಿನ ದಾಖಲೆಗಳು, ವರನಿಗೆ ಮೊದಲೇ ಮದುವೆ ಆಗಿದೆಯೇ, ವಿಚ್ಛೇದನ ಪಡೆಯಲಾಗಿದೆಯೇ ಎಂಬ ಕುರಿತು ಸಂಪೂರ್ಣ ಮಾಹಿತಿ ಪಡೆಯುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್,ಸ್ಪೀಕರ್ಯು.ಟಿ. ಖಾದರ್,ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗರೆಡ್ಡಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಸತಿ ಇಲಾಖೆ ಸಚಿವರಾದ ಜಮೀರ್ ಅಹಮ್ಮದ್ ಖಾನ್, ಬಮೂಲ್ ಅಧ್ಯಕ್ಷರಾದ ಡಿ.ಕೆ.ಸುರೇಶ್, ಪೌರಾಡಳಿತ ಇಲಾಖೆ ಸಚಿವರಾದ ರಹೀಂ ಖಾನ್, ರಿಸ್ವಾನ್, ಯಾರೀಸ್, ಎಚ್.ಸಿ.ಬಾಲಕೃಷ್ಣ, ಸಿ.ಪಿ.ಯೋಗೇಶ್ವರ್ಸೇರಿದಂತೆ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ನಮ್ಮ ಎಲ್ಲ ಮುಖಂಡರು, ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಪಂ ಸಿಇಒ ಸರಳ ವಿವಾಹ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕರು, ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷರಾದ ಕೆ.ರಾಜು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಎ.ಬಿ.ಚೇತನ್ ಕುಮಾರ್,ಪ್ರಾಧಿಕಾರದ ನಿರ್ದೇಶಕರಾದ ಫಯೀಜ್ ಪಾಷ, ನಗರಸಭೆ ಸದಸ್ಯರಾದ ನಿಜಾಮುದ್ದೀನ್ ಷರೀಫ್, ಅಜ್ಮತ್, ಆಯಿಷಾ ಖಾನಂ ಉಪಸ್ಥಿತರಿದ್ದರು.

ರಾಮನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶಾಸಕ ಇಕ್ಬಾಲ್ ಹುಸೇನ್ ಮಾತನಾಡಿದರು.

## ಪೆಟ್ಟಿಗೆ ಅಂಗಡಿ ಎತ್ತಂಗಡಿ ಮಾಡಿ


ಕರ್ನಾಟಕ ರಾಜ್ಯ ರೈತ ಕಾರ್ಮಿಕರ ಹಿತ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಬಸ್ ಡಿಪೋ ವ್ಯವಸ್ಥಾಪಕರಿಗೆ, ತಹಸೀಲ್ದಾರ್,ಪುರಸಭಾ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

**ಕೆ ಆರ್ಪೇಟೆ:** ಸರಕಾರಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಕುಳಿತುಕೊಳ್ಳುವ ಸ್ಥಳದಲ್ಲಿ ಅಂಗಡಿ ಕಬ್ಬಿಣ ಪೆಟ್ಟಿಗೆ ಪ್ರತ್ಯೇಕ್ಷವಾಗಿದೆ ಎಂದು ರೈತ ಸಂಘದವರು ಆರೋಪ ಮಾಡಿದರು.

ಪಟ್ಟಣದ ಸರಕಾರಿ ಬಸ್ ನಿಲ್ದಾಣದಲ್ಲಿರುವ ಹೋಟೆಲ್ ಹಾಗೂ ಟಿ ಸಿ ಕಚೇರಿಯ ನಡುವೆ ಅಂಗಡಿ ಪೆಟ್ಟಿಗೆಯನ್ನು ಇಡಲು ಟೆಂಡರ್ ಕರೆಯಲಾಗಿದೆ. ಆದರೆ ಸಾರ್ವಜನಿಕ ಪ್ರಯಾಣಿಕರು ಓಡಾಡುವ ಕುಳಿತುಕೊಳ್ಳುವ ಜಾಗದಲ್ಲಿ ಕಬ್ಬಿಣ ಅಂಗಡಿ ಪೆಟ್ಟಿಗೆ ಇಟ್ಟಿರುವುದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ ಎಂದು ಸಾರ್ವಜನಿಕರಿಂದ ದೂರು ಬಂದಿರುವ ಅಂಗವಾಗಿ ಕರ್ನಾಟಕ ರಾಜ್ಯ ರೈತ ಕಾರ್ಮಿಕರ ಹಿತ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಬಸ್ ಡಿಪೋ ವ್ಯವಸ್ಥಾಪಕರಿಗೆ, ತಹಸೀಲ್ದಾರ್ಅವರಿಗೆ, ಪುರಸಭಾ ಅಧಿಕಾರಿಗಳಿಗೆ ಅಂಗಡಿ ಪೆಟ್ಟಿಗೆಯನ್ನು ತೆರವು ಗೊಳಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಮನವಿ ಪತ್ರವನ್ನು ನೀಡಿದರು.

ಬಳಿಕ ಮಾತನಾಡಿದ ರಾಜ್ಯ ರೈತ ಕಾರ್ಮಿಕರ ಹಿತ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ಮಂಜೇಗೌಡ ಮಾತನಾಡಿ, ಈಗಾಗಲೇ ಟೆಂಡರ್ಪ್ರಕ್ರಿಯೆಯಲ್ಲಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ, ತಹಸೀಲ್ದಾರ್ ,ಪುರಸಭೆಯ ಅಧಿಕಾರಿಗಳಿಗೆ ಮನವಿ ಪತ್ರವನ್ನು ನೀಡಿದ್ದೇವೆ. ಒಂದು ವಾರದ ಒಳಗಡೆ ಕಬ್ಬಿಣದ ಅಂಗಡಿಯನ್ನು ತೆರವುಗೊಳಿಸದಿದ್ದರೆ ಇದೇ ಜಾಗದಲ್ಲಿ ಧರಣಿಯನ್ನು ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಕಾರ್ಮಿಕರ ಹಿತ ರಕ್ಷಣಾ ವೇದಿಕೆ ಹಾಸನ ಜಿಲ್ಲಾ ಗೌರವಾಧ್ಯಕ್ಷ ಪ್ರಕಾಶ್, ವೇದಿಕೆ ಸಂಸ್ಥಾಪಕ ಅಧ್ಯಕ್ಷಮಂಜೇಗೌಡ ಬಡಕನ ಹಳ್ಳಿ, ಜಿಲ್ಲಾಧ್ಯಕ್ಷ ಪುಟ್ಟೇಗೌಡ, ತಾಲೂಕು ಅಧ್ಯಕ್ಷ ಗಿರೀಶ್, ಪ್ರಕಾಶ್ ಹಾಜರಿದ್ದರು.

## ಕೇಂದ್ರದ ವಿರುದ್ಧ ಸಂಘಟನೆಗಳ ಪ್ರತಿಭಟನೆ

**ಮಡಿಕೇರಿ:** ದುಡಿಯುವ ವರ್ಗಕ್ಕೆ ಮಾರಕವಾಗಿರುವ ಕೇಂದ್ರ ಸರಕಾರದ ನಾಲ್ಕು ಕಾರ್ಮಿಕರ ಕೋಡ್ಗಳನ್ನು ಹಿಂದಕ್ಕೆ ಪಡೆಯಬೇಕು, ಮಹಾತ್ಮಾ ಗಾಂಧಿ ನರೇಗಾ ಯೋಜನೆಯನ್ನು ಮತ್ತೆ ಆರಂಭಿಸಬೇಕೆಂದು ಆಗ್ರಹಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಒಕ್ಕೂಟಗಳಿಂದ ನಗರದಲ್ಲಿಂದು ಬೃಹತ್ ಪ್ರತಿಭಟನೆ ನಡೆಯಿತು.

ಜಂಟಿ ಕ್ರಿಯಾ ಸಮಿತಿಯ ಪ್ರಮುಖರ ನೇತೃತ್ವದಲ್ಲಿ ಗುರುವಾರ ಬೆಳಗ್ಗೆ ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿಯಿಂದ ವಿವಿಧ ಕಾರ್ಮಿಕ ಸಂಘಟನೆಗಳ ನೂರಾರು ಮಂದಿ ಘೋಷಣೆಗಳ ಸಹಿತ ನಗರದ ಮುಖ್ಯ ಬೀದಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಗಾಂಧಿ ಮೈದಾನದಲ್ಲಿ ಸಮಾವೇಶಗೊಂಡು, ಕೇಂದ್ರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಪಕ್ಷದ ಪ್ರಮುಖ ಹಾಗೂ ರೈತ ಸಂಘದ ಮುಖಂಡ ನೆರವಂಡ ಉಮೇಶ್ ಮಾತನಾಡಿ, 2005ರಲ್ಲಿ ಮಹಾತ್ಮಾ ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಆಶಯದಂತೆ ಜಾರಿಗೆ ತರಲಾದ ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರ ಸರಕಾರ ಬಡ ವರ್ಗದ ಹಿತಕ್ಕೆ ಧಕ್ಕೆಯನ್ನುಂಟು ಮಾಡುವ ವಿಬಿ ರಾಮ್ ಜಿ ಯೋಜನೆಯನ್ನು ಏಕ ಪಕ್ಷೀಯವಾಗಿ ಜಾರಿಗೆ ತಂದಿದೆ ಎಂದರು.

ಪ್ರತಿಭಟನೆಯ ಸಂದರ್ಭ ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರಿಗೆ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಪ್ರಮುಖರು ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಎಐಟಿಯುಸಿ ಜಿಲ್ಲಾಧ್ಯಕ್ಷ ಎಚ್. ಎಂ.ಸೋಮಪ್ಪ, ಸಿಐಟಿಯು ಜಿಲ್ಲಾಧ್ಯಕ್ಷ ಎ.ಸಿ.ಸಾಬು, ಜಂಟಿ ಕ್ರಿಯಾ ಸಮಿತಿಯ ಡಿ.ಎಸ್.ನಿರ್ವಾಣಪ್ಪ, ಕಾಂಗ್ರೆಸ್ ಮುಖಂಡರಾದ ಟಿ.ಪಿ.ರಮೇಶ್, ಜಿಲ್ಲಾ ಕಾಂಗ್ರೆಸ್ನ ಕಾರ್ಮಿಕ ವಿಭಾಗದ ಅಧ್ಯಕ್ಷ ಕೆ.ಆರ್.ದಿನೇಶ್, ಗೌರವ ಕಾರ್ಯದರ್ಶಿ ಮಿನಾಜ್ ಪ್ರವೀಣ್, ಎಐಟಿಯುಸಿ ಜಿಲ್ಲಾ ಉಪಾಧ್ಯಕ್ಷರಾದ ಮಣಿ, ಐಎನ್ಟಿಯುಸಿ ಜಿಲ್ಲಾಧ್ಯಕ್ಷ ಅಣ್ಣಯ್ಯ, ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಮಹದೇವ್, ಅಂಗನವಾಡಿ ಕಾರ್ಯಕರ್ತೆಯರ ಸಂಘದ ಜಿಲ್ಲಾಧ್ಯಕ್ಷೆ ಸುಮಿತ್ರ, ಪ್ರಧಾನ ಕಾರ್ಯದರ್ಶಿ ಜಮುನ, ಬಿಸಿ ಊಟ ಕಾರ್ಮಿಕರ ಸಂಘದ ಅಧ್ಯಕ್ಷೆ ಕುಸುಮ, ಕಾಫಿ ಕ್ಯೂರಿಂಗ್ ವರ್ಕರ್ಸ್ ಯೂನಿಯನ್ ಅಧ್ಯಕ್ಷರಾದ ಮಂಜುನಾಥ್, ಆಸ್ಪತ್ರೆ ನೌಕರರ ಸಂಘದ ಅಧ್ಯಕ್ಷೆ ಜಾನಕಿ, ತೋಟ ಕಾರ್ಮಿಕ ಸಂಘದ ಪುಷ್ಪ, ಕಟ್ಟಡ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಶಾಜಿ ರಮೇಶ್, ರೈತ ಸಂಘದ ಮುಖಂಡರಾದ ಲಕ್ಷ್ಮಣ್, ಕರ್ನಾಟಕ ಪ್ರಾಂತ ರೈತ ಸಂಘಂದ ಪ್ರಮುಖ ಟಿ.ಟಿ.ಉದಯ ಕುಮಾರ್ ಪಾಲ್ಗೊಂಡಿದ್ದರು.

ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ಒಕ್ಕೂಟಗಳಿಂದ ನಗರದಲ್ಲಿಂದು ಬೃಹತ್ ಪ್ರತಿಭಟನೆ ನಡೆಯಿತು.

> ಹಲವು ದಶಕಗಳ ಹೋರಾಟಗಳಿಂದ ಕಾರ್ಮಿಕರಿಗೆ ನ್ಯಾಯ ಒದಗಿಸುವ 41 ಕಾನೂನುಗಳನ್ನು ದುಡಿಯುವ ವರ್ಗ ಪಡೆದುಕೊಂಡಿದೆ. ಇಂತಹ ಕಾನೂನುಗಳಲ್ಲಿ 21 ಕಾನೂನುಗಳನ್ನು ಇಂದಿನ ಕೇಂದ್ರ ಸರಕಾರ ನಾಲ್ಕು ಲೇಬರ್ಕೋಡಗಳನ್ನಾಗಿ ಬದಲಿಸುವ ಮೂಲಕ, ಕಾರ್ಮಿಕ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ. ಆ ಮೂಲಕ ಬಂಡವಾಳಶಾಹಿಗಳಿಗೆ ಅನುಕೂಲತೆಯನ್ನು ಕಲ್ಪಿಸಲು ಮುಂದಾಗಿದೆ.
> - ಪಿ.ಆರ್.ಭರತ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ

## ಆದಿವಾಸಿಗಳ ಬಗ್ಗೆ ವಿಚಾರ ಸಂಕಿರಣ

ಮೂರು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಜಿಲ್ಲಾಧಿಕಾರಿ ಶ್ರೀರೂಪ ಗಡಿ ಉದ್ಘಾಟಿಸಿದರು.

**ಚಾಮರಾಜನಗರ:** ಕೇರಳದ ವಯನಾಡ್ ಜಿಲ್ಲೆಯ ಸುಲ್ತಾನ್ ಬತ್ತೇರಿಯಲ್ಲಿ ನಡೆದ ಮಹತ್ವದ ಆದಿವಾಸಿ ಜಗತ್ತಿನಲ್ಲಿ ಸ್ವಾವಲಂಬನೆಯ ಕಲ್ಪನೆಗಳು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಚಾಮರಾಜನಗರ ಜಿಲ್ಲೆಯನ್ನು ಜಿಲ್ಲಾಧಿಕಾರಿ ಶ್ರೀರೂಪ ಪ್ರತಿನಿಧಿಸಿದರು.

ವಯನಾಡಿನ ಸುಲ್ತಾನ್ ಬತ್ತೇರಿಯಲ್ಲಿ ನಡೆದ ಮೂರು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿದ ಜಿಲ್ಲಾಧಿಕಾರಿ ಶ್ರೀರೂಪ ಗಡಿ ಪ್ರದೇಶದ ಆದಿವಾಸಿ ಸಮುದಾಯಗಳ ಕುರಿತು ಚರ್ಚೆಗಳಿಗೆ ಮೀಸಲಾಗಿರುವ ರಾಷ್ಟ್ರೀಯ ವೇದಿಕೆಯಲ್ಲಿ ಚಾಮರಾಜನಗರ ಜಿಲ್ಲೆಯನ್ನು ಪ್ರತಿನಿಧಿಸಿದರು.

ಕೇರಳದ ವಯನಾಡು, ತಮಿಳುನಾಡಿನ ನೀಲಗಿರಿ ಮತ್ತು ಕರ್ನಾಟಕ ರಾಜ್ಯದ ಚಾಮರಾಜನಗರ ಸಂಗಮದಲ್ಲಿ ನಡೆದ ಈ ವಿಚಾರ ಸಂಕಿರಣವು, ವಿದ್ವಾಂಸರು, ಸಂಶೋಧಕರು, ನೀತಿ ನಿರೂಪಕರು ಮತ್ತು ಆಡಳಿತಗಾರರನ್ನು ಒಟ್ಟುಗೂಡಿಸಿ ಸ್ಥಳೀಯ ಸಮುದಾಯಗಳು, ಆಡಳಿತ ಮತ್ತು ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿತು.

> ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯಗಳಾದ ಸೋಲಿಗ, ಜೇನು ಕುರುಬ ಮತ್ತು ಕಾಡು ಕುರುಬ ಜನರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳು, ಶೈಕ್ಷಣಿಕ ಸವಾಲುಗಳು, ಜೀವನೋಪಾಯದ ಕಾಳಜಿಗಳು ಮತ್ತು ಅರಣ್ಯ ಅವಲಂಬಿತ ಪ್ರದೇಶಗಳಲ್ಲಿ ವಾಸಿಸುವ ವಾಸ್ತವ ಕುರಿತು ವ್ಯಾಪಕ.
> - ಶ್ರೀರೂಪ, ಜಿಲ್ಲಾಧಿಕಾರಿ

ಆದಿವಾಸಿ ಅಭಿವೃದ್ಧಿಯ ಕುರಿತು ಅರ್ಥಪೂರ್ಣ ಚರ್ಚೆಗಳು ಕ್ಷೇತ್ರದಲ್ಲಿ ವಾಸ್ತವವಾಗಿ ಅನುಷ್ಠಾನವಾಗಬೇಕಿದೆ. ಆಡಳಿತಾತ್ಮಕ ಅನುಭವ ಮತ್ತು ಸಮುದಾಯದ ಧ್ವನಿಗಳಿಂದ ರೂಪುಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು. ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ರಾಷ್ಟ್ರೀಯ ವಿಚಾರ ಸಂಕಿರಣದ ಸಾರಾಂಶಗಳನ್ನೊಳಗೊಂಡ ಬುಕ್ ಆಫ್ ಅಬ್‌ಸ್ಟ್ರಾಕ್ಸ್ ಪುಸ್ತಕವನ್ನು ಬಿಡುಗಡೆ ಮಾಡಿದರು. ಇದು ಚರ್ಚೆಗಳ ಶೈಕ್ಷಣಿಕ ಅಡಿಪಾಯವನ್ನು ಗುರುತಿಸುತ್ತದೆ ಮತ್ತು ಸಂಶೋಧನೆ- ಬೆಂಬಲಿತ ನೀತಿ ಚರ್ಚೆಗಳ ಮಹತ್ವವನ್ನು ತಿಳಿಸಲಿದೆ. ಸುಲ್ತಾನ್ ಬತ್ತೇರಿಯ ಶಾಸಕರಾದ ಐ.ಸಿ. ಬಾಲಕೃಷ್ಣನ್, ಮುನ್ಸಿಪಾಲ್ಟಿ ಅಧ್ಯಕ್ಷರಾದ ರಸೀನ ಅಬ್ದುಲ್ ಖಾದರ್,ಬೆಂಗಳೂರಿನ ಎನ್.ಎಲ್.ಎಸ್.ಐ.ಯು ನ ಸಾಮಾಜಿಕ ಒಳಗೊಳ್ಳುವಿಕೆಯ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಸೋನಿ ಪೆಲ್ಲಿಸ್ಸೆರಿ, ಸುಲ್ತಾನ್ ಬತ್ತೇರಿಯ ಸೆಂಟ್ ಮೇರಿಸ್ ಕಾಲೇಜಿನ ವ್ಯವಸ್ಥಾಪಕರಾದ ಡಾ. ಜೀವರ್ಗಿಸ್ ಮಾರ್ಬಾರ್ನಬಾಸ್, ಸ್ಥಾನಿಕ ವ್ಯವಸ್ಥಾಪಕರಾದ ರೆ. ಬೇಬಿಜಾನ್, ಬುಡಕಟ್ಟು ಅಭಿವೃದ್ಧಿ ಅಧಿಕಾರಿ ಕೆ.ಕೆ. ಮೋಹನ್ ದಾಸ್, ಪ್ರೊ.ವರ್ಗೀನಿಯಸ್ ಉಪಸ್ಥಿತರಿದ್ದರು.

## ಶುದ್ಧ ಕುಡಿವ ನೀರಿನ ಘಟಕ ಉದ್ಘಾಟನೆ

**ಬಾಗೇಪಲ್ಲಿ:** ಶುದ್ಧ ಕುಡಿಯುವ ನೀರು ಸೇವನೆಯಿಂದ ಉತ್ತಮ ಆರೋಗ್ಯ ನಮ್ಮದಾಗುತ್ತದೆ ಎಂದು ಶಾಸಕ ಎಸ್. ಎನ್.ಸುಬ್ಬಾರೆಡ್ಡಿ ತಿಳಿಸಿದರು.

ತಾಲೂಕಿನ ಜೂಲಪಾಳ್ಯ ಗ್ರಾಪಂ ವ್ಯಾಪ್ತಿಯ ಬೋಡುಕದಿರೇಪಲ್ಲಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿದರು. ಕುಡಿಯುವ ನೀರಿನಿಂದ ಹೆಚ್ಚು ರೋಗ ಹರಡುತ್ತವೆ. ಹಾಗಾಗಿ ಪ್ರತಿ ಊರಿನಲ್ಲೂ ಒಂದು ನೀರಿನ ಘಟಕ ಸ್ಥಾಪಿಸಲಾಗು ವುದು. ಹಿಂದೆ ಖನಿಜಯುಕ್ತ ನೀರು ಶ್ರೀಮಂತರಿಗೆ ಮಾತ್ರ ಸೀಮಿತವಾಗಿತ್ತು. ಈಗ ಅದು ಎಲ್ಲ ವರ್ಗದ ಜನತೆಗೆ ದೊರಕುವಂತಾಗಿದೆ.

ಅತ್ಯಾಧುನಿಕ ಮತ್ತು ಹೈಟೆಕ್ ಮಾದರಿಯ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸಿ ಸಾರ್ವಜನಿಕರ ಸೇವೆಗೆ ಕಲ್ಪಿಸಿರುವುದು ಉತ್ತಮ ಬೆಳವಣಿಗೆ ಎಂದರು. ಈ ಸಂದರ್ಭದಲ್ಲಿ ಪಂಚಾಯತಿ ತಾಂತ್ರಿಕ ಇಲಾಖೆ ಎಇಇ ಮಹೇಶ್, ಕೆಡಿಪಿ ಸದಸ್ಯರಾದ ಪಿ.ಮಂಜುನಾಥ್ ರೆಡ್ಡಿ ದರಖಾಸ್ತು ಸಮಿತಿ ಸದಸ್ಯ ಲಕ್ಷ್ಮಿನರಸಿಂಹಪ್ಪ, ತಾಲೂಕು ಪಂಚಾಯತಿ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷ ಮಂಜುನಾಥ್ ಹಾಗೂ ಗ್ರಾಮದ ಸಾರ್ವಜನಿಕರು ಹಾಜರಿದ್ದರು.

### ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆವರಣ | ಯುವ ಬ್ರಿಗೇಡ್ ಜಿಲ್ಲಾಧ್ಯಕ್ಷ ಬಸವರಾಜ್ ಹೇಳಿಕೆ

# ನಾಳೆ ಚಂದ್ರಶೇಖರ ಶ್ರೀಗಳ ಅಭಿನಂದನಾ ಗ್ರಂಥ ಲೋಕಾರ್ಪಣೆ

**ಮಂಡ್ಯ:** ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಆಶ್ರಯದಲ್ಲಿ ಹಾಗೂ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಮಹಾಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ಭೈರವೈಕ್ಯ ಶ್ರೀಕುಮಾರ ಚಂದ್ರಶೇಖರನಾಥ ಮಹಾಸ್ವಾಮೀಜಿ ಯವರ ಅಭಿನಂದನಾ ಗ್ರಂಥ ಲೋಕಾರ್ಪಣೆ ಮತ್ತು ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಫೆ.14 ಮತ್ತು 15ರಂದು ಕೆಂಗೇರಿಯಲ್ಲಿನ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಯುವ ಬ್ರಿಗೇಡ್ನ ಜಿಲ್ಲಾಧ್ಯಕ್ಷ ಬಸವರಾಜ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಫೆ.14ರ ಬೆಳಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭವು ನಡೆಯಲಿದ್ದು, ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ. ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯದಲ್ಲಿ, ಕೈಲಾಸಾಶ್ರಮ ಮಹಾ ಸಂಸ್ಥಾನದ ಶ್ರೀ ಜಯೇಂದ್ರಪುರಿ ಮಹಾಸ್ವಾಮೀಜಿ ಘನ ಸಾನಿಧ್ಯವನ್ನು ಹಾಗೂ ಚಂದ್ರವನ ಆಶ್ರಮದ ಶ್ರೀಡಾ.ತ್ರಿನೇಂದ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಸಾಲೂರು ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕುಂಚಟಿಗರ ಮಹಾಸಂಸ್ಥಾನ ಮಠದ ಹನುಮಂತನಾಥ ಮಹಾಸ್ವಾಮೀಜಿ, ಸಾಯಿ ಸಂಸ್ಥಾನದ ಗುರುಮೂರ್ತಿ ಗುರೂಜಿ ಸಾನಿಧ್ಯ ವಹಿಸುವರು.

ಸುದ್ದಿಗೋಷ್ಠಿಯಲ್ಲಿ ಯುವ ಬ್ರಿಗೇಡನ ಜಿಲ್ಲಾಧ್ಯಕ್ಷ ಬಸವರಾಜ್ ಮಾತನಾಡಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅಧ್ಯಕ್ಷತೆ ವಹಿಸುವರು. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸಂಸ್ಮರಣಾ ಗ್ರಂಥ ಲೋಕಾರ್ಪಣೆ ಮಾಡಲಿದ್ದು, ಕುಣಿಗಲ್ ಶಾಸಕ ರಂಗನಾಥ್ ಮಲೆನಾಡು ಗಿಡ್ಡಗಳ ವಿತರಣೆ ಮಾಡುವರು, ಬೇಲೂರು ಶಾಸಕ ಹುಲ್ಲಹಳ್ಳಿ ಸುರೇಶ್ ಸಾವಯವ ಸಂತೆಯನ್ನು, ಮಾಜಿ ಸಚಿವ, ಶಾಸಕ ಎಸ್.ಟಿ.ಸೋಮಶೇಖರ್ಆರೋಗ್ಯ ತಪಾಸಣಾ ಶಿಬಿರ, ಮಂಡ್ಯ ಶಾಸಕ ಪಿ.ರವಿಕುಮಾರ್ಗೌಡ ಅವರು ರಾಜ್ಯ ಮಟ್ಟದ ಸರ್ವ ಜನಾಂಗದ ವಧು ವರರ ಸಮಾವೇಶ ಉದ್ಘಾಟಿಸಲಿದ್ದಾರೆ. ವೇದಿಕೆಯಲ್ಲಿ ಹಲವು ಗಣ್ಯರು ಭಾಗವಹಿಸಲಿದ್ದು, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಂಕೇಗೌಡರನ್ನು ಇದೇ ವೇಳೆ ಸನ್ಮಾನಿಸಲಾಗುವುದು ಎಂದು ಹೇಳಿದರು.

> ಕಾರ್ಯಕ್ರಮದಲ್ಲಿ ಸಾವಯವ ಸಂತೆ, ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತು ಪ್ರದರ್ಶನ, ಉಚಿತ ಆರೋಗ್ಯ ತಪಾಸಣಾ ಶಿಬಿರ, ಸರ್ವ ಜನಾಂಗದ ವಧು-ವರರ ಮುಖಾ-ಮುಖಿ ಅನ್ವೇಷಣೆ, ಹಾಗೂ ಮಲೆನಾಡು ಗಿಡ್ಡಗಳ ಉಚಿತ ವಿತರಣೆ ಮಾಡಲಾಗುವುದು.
> - ಬಸವರಾಜ್, ಯುವ ಬ್ರಿಗೇಡ ಜಿಲ್ಲಾಧ್ಯಕ್ಷ

ಫೆ.15ರಂದು ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಸ್ಪಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಮಹಾಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ, ಯಾದವ ಮಹಾಸಂಸ್ಥಾನ ಮಠದ ಶ್ರೀಕೃಷ್ಣಯಾದವನಂದ ಮಹಾಸ್ವಾಮೀಜಿ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವಿಶ್ವಮಾನವ ಕೇಂದ್ರದ ಶ್ರೀ ಪುರುಷೋತ್ತಮಾನಂದನಾಥ ಮಹಾಸ್ವಾಮೀಜಿ, ಶ್ರೀರಾಮಕೃಷ್ಣ ಸೇವಾ ಕೇಂದ್ರದ ಶ್ರೀನಾದಾನಂದನಾಥ ಸ್ವಾಮೀಜಿ, ಭಕ್ತಮುನೇಶ್ವರ ಕ್ಷೇತ್ರದ ಶ್ರೀರಂಗನಾಥಸ್ವಾಮೀಜಿ ಘನ ಸಾನಿಧ್ಯ ವಹಿಸುವರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಾರ್ಯಕ್ರಮ ಉದ್ಘಾಟಿಸುವರು. ಮಾಜಿ ಉಪಮುಖ್ಯಮಂತ್ರಿ, ಶಾಸಕ ಡಾ.ಅಶ್ವಥ್ ನಾರಾಯಣ ಅವರು ಕಂದಾಯ ಕಳಕಳಿ ಆವೃತ್ತಿ-2 ಕೃತಿಯ ಲೋಕಾರ್ಪಣೆ ಮಾಡುವರು. ಕೃತಿಯ ಕುರಿತು ವರಪ್ರಸಾದ್ ರೆಡ್ಡಿ ಮಾತನಾಡುವರು. ಸಂಸದ ಡಾ.ಸಿ.ಎನ್.ಮಂಜುನಾಥ್ ಅಧ್ಯಕ್ಷತೆ ವಹಿಸಲಿದ್ದು, ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಮಹಾರಾಷ್ಟ್ರ ಮ್ಯಾರಿಟೈಮ್ನ ಸಿಇಒ ಪ್ರದೀಪ್ ಪ್ರಭಾಕರ್ಅವರನ್ನು ಇದೇ ವೇಳೆ ಸನ್ಮಾನಿಸಲಾಗುವುದು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಯುವ ಬ್ರಿಗೇಡ್ನ ಮಹಿಳಾ ಜಿಲ್ಲಾಧ್ಯಕ್ಷೆ ಸುಶ್ಮಿತಗೌಡ, ಸಂಘಟನಾ ಪೋಷಕರಾದ ಡಿ.ಸಿ.ರಾಜೇಂದ್ರ ಪ್ರಸಾದ್, ವೆಂಕಟೇಶ್ ಇದ್ದರು.

## ಸಮಾಚಾರ ಸಣ್ಣದಲ್ಲ

### ಜ್ಞಾನ ಗಳಿಕೆಗಾಗಿ ಶಿಕ್ಷಣ ಬೇಕು

**ಮೈಸೂರು:** ಶಿಕ್ಷಣ ಎಂದರೆ ಕೇವಲ ಉದ್ಯೋಗಕ್ಕಾಗಿ ಮಾತ್ರವಲ್ಲ. ಜ್ಞಾನ ಗಳಿಕೆಗೂ ಶಿಕ್ಷಣ ಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಎನ್. ಕೆ. ಲೋಕನಾಥ್ ಹೇಳಿದರು. ಕಾಲೇಜು ಶಿಕ್ಷಣ ಇಲಾಖೆ ವತಿಯಿಂದ ಮಹಾರಾಣಿ ವಾಣಿಜ್ಯ ಕಾಲೇಜಿನ ಆಡಿಟೋರಿಯಂನಲ್ಲಿ ಮೈಸೂರು ಪ್ರಾದೇಶಿಕ ವಲಯದ ಒಂದು ದಿನದ ಸಾಮಾರ್ಥ್ಯಾಭಿವೃದ್ಧಿ ಕಾರ್ಯಾಗಾರ ಅವರು ಉದ್ಘಾಟಿಸಿ ಮಾತನಾಡಿದರು. ನಾವು ಬದಲಾಗಬೇಕು, ಈಗಿನ ಶಿಕ್ಷಣವೂ ಬದಲಾಗಬೇಕು. ಕಾಲ ಬದಲಾಗುತ್ತಿದೆ, ತಂತ್ರಜ್ಞಾನ ಬೆಳಯುತ್ತಿದೆ, ಮಾಹಿತಿಯು ಬೆಳೆಯುತ್ತಿದೆ. ನಾವು ಜೊತೆಗೆ ಬದಲಾಗುತ್ತಾ ಹೋಗಬೇಕಾಗಿದೆ. ನಾವು ಬದಲಾದರೆ ಎಲ್ಲರನ್ನೂ ಬದಲಾವಣೆ ಮಾಡಬಹುದು ಎಂದು ಹೇಳಿದರು. ಇತ್ತೀಚಿನ ಮಕ್ಕಳು ತಂತ್ರಜ್ಞಾನದ ಜೊತೆಗೆ ಅವಲಂಬನೆ ಆಗುತ್ತಿದ್ದಾರೆ ಎಂದರು. ಪ್ರಾದೇಶಿಕ ಜಂಟಿ ನಿರ್ದೇಶಕಿ ಡಾ. ಪ್ರತಿಮಾ ಮಾತನಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಚಂದ್ರಶೇಖರ ಕೆ, ಉದ್ಯೋಗ ಕೋಶದ ರಾಜ್ಯ ನೋಡಲ್ ಅಧಿಕಾರಿ ಪ್ರೊ.ಎ. ನಾರಾಯಣ ಪ್ರಸಾದ್, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಪ್ರಾಂಶುಪಾಲ ನಟರಾಜ್, ಆರ್ಜಡಿಸಿಇ ಸಹಾಯಕ ನಿರ್ದೇಶಕ ನಾಗೇಂದ್ರ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

### ಇಂಟರ್‌ನೆಟ್ ಸುರಕ್ಷತೆ ಕುರಿತು ಜಾಗೃತಿ ಅಗತ್ಯ

**ಚಾಮರಾಜನಗರ:** ಪ್ರಸ್ತುತ ದಿನಗಳಲ್ಲಿ ಇಂಟರ್ನೆಟ್ ಸುರಕ್ಷತೆ, ಬಳಕೆ, ಇದರಿಂದಾಗುವ ಅನುಕೂಲಗಳು, ಲೋಪ ದೋಷಗಳ ಬಗ್ಗೆ ಅಧಿಕಾರಿಗಳು ಸಿಬ್ಬಂದಿ ಹೆಚ್ಚು ತಿಳಿಯಬೇಕಾದ ಅಗತ್ಯವಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ಸಲಹೆ ಮಾಡಿದರು. ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಜಿಲ್ಲಾ ಮಹಿತಿ ಸೂಚನಾ ವಿಭಾಗದ (ಎನ್.ಐ.ಸಿ) ವತಿಯಿಂದ ಸುರಕ್ಷಿತ ಅಂತರ್ಜಾಲ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಜಾಗೃತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸೈಬರ್‌ಅಪರಾಧ ಪೊಲೀಸ್ ವಿಭಾಗದ ಡಿವೈಎಸ್ಪಿ ಎಂ.ಎಸ್. ಪವನ್ ಕುಮಾರ್,ಸರಕಾರಿ ಇಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಸಂದೀಪ್ ಅವರು ಮಾತನಾಡಿದರು. ಎನ್.ಐ.ಸಿ ಯ ಹಿರಿಯ ತಾಂತ್ರಿಕ ನಿರ್ದೇಶಕ ಕುಮಾರ್,ಜಿಲ್ಲಾ ಮಾಹಿತಿ ಸೂಚನಾ ಅಧಿಕಾರಿ ಅರವಿಂದ ಚಂದ್ರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ವಿದ್ಯುತ್ ಕ್ಷೇತ್ರದ ಖಾಸಗೀಕರಣ: ಖಂಡನೆ

**ಮೈಸೂರು:** ಕೇಂದ್ರ ಸರಕಾರ ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಮುಂದಾಗಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ನೌಕರರ ಯೂನಿಯನ್ ಹಾಗೂ ಸಂಘ ಸಂಸ್ಥೆಗಳ ಒಕ್ಕೂಟದ ಪದಾಧಿಕಾರಿಗಳು ಗುರುವಾರ ಸಾಂಕೇತಿಕ ಪ್ರತಿಭಟನೆ ನಡೆಸಿದರು. ವಿಜಯನಗರ 2ನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಪ್ರಧಾನ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಒಕ್ಕೂಟದ ಪದಾಧಿಕಾರಿಗಳು ಹಾಗೂ ಸದಸ್ಯರು, ವಿವಿಧ ಘೋಷಣೆಗಳನ್ನು ಕೂಗುವ ಮೂಲಕ ವಿದ್ಯುತ್ ಕ್ಷೇತ್ರದ ಖಾಸಗೀಕರಣ ಮಾಡಲು ಮುಂದಾಗಿರುವ ಕೇಂದ್ರ ಸರ್ಕಾರದ ನಿರ್ಧಾರಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿದರು. ಕೇಂದ್ರ ಸರಕಾರ ಇಂಧನ ಇಲಾಖೆಯನ್ನು ಖಾಸಗೀಕರಣಗೊಳಿಸುವ ಉದ್ದೇಶದಿಂದ 2026ರ ಅಧೀವೇಶನದಲ್ಲಿ ವಿದ್ಯುತ್ ಕಾಯಿದೆ ಪಾಸ್ ಮಾಡಲು ಹೊರಟಿರುವುದು ಖಂಡನೀಯ. ವಿದ್ಯುತ್ ಇಲಾಖೆಗಳನ್ನು ಖಾಸಗೀಕರಣ ಮಾಡಲು ಮುಂದಾಗಿರುವ ಕೇಂದ್ರದ ನಿರ್ಧಾರಕ್ಕೆ ನಮ್ಮ ಧಿಕ್ಕಾರವಿದೆ. ಇಂಧನ ಇಲಾಖೆ ಜನರ ಆಸ್ತಿಯಾಗಿದ್ದು, ಯಾವುದೇ ಕಾರಣಕ್ಕೂ ಇದನ್ನು ಖಾಸಗೀಕರಣಗೊಳಿಸಬಾರದು. ಅನ್ನದಾತರಾದ ರೈತರಿಗೆ ಹಾಗೂ ಗ್ರಾಹಕರಿಗೆ ಅನ್ಯಾಯ ಮಾಡಿ ಅಧಿವೇಶನದಲ್ಲಿ ವಿದ್ಯುತ್ ಕಾಯ್ದೆ ತಿದ್ದುಪಡಿ ಮಾಡುವ ನಿರ್ಧಾರವನ್ನು ಕೇಂದ್ರ ಸರ್ಕಾರ ಈ ಕೂಡಲೇ ಕೈಬಿಡಬೇಕಿದೆ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

### ಕಾನೂನು ಕಾಲೇಜಿಗೆ ಪುಸ್ತಕ ಕೊಡುಗೆ

**ಚಾಮರಾಜನಗರ:** ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರು ನಗರದ ಕಾನೂನು ಕಾಲೇಜು ಗ್ರಂಥಾಲಯಕ್ಕೆ 2 ಲಕ್ಷ ರೂ.ಮೌಲ್ಯದ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಇಂದು ಚಾಮರಾಜನಗರ ಕಲಾವಿದ ರಾಮಸಮುದ್ರ ರಾಜಪ್ಪ ಅವರು ಪುಸ್ತಕಗಳನ್ನು ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಎಂ.ಅಶ್ವಿನಿ ಅವರ ಮೂಲಕ ಕಾಲೇಜಿಗೆ ನೀಡಲಾಯಿತು. ಪುಸ್ತಕಗಳನ್ನು ಸ್ವೀಕರಿಸಿದ ಸಹಾಯಕ ಪ್ರಾಧ್ಯಾಪಕಿ ಎಂ.ಅಶ್ವಿನಿ ಮಾತನಾಡಿ, ಚಾಮರಾಜನಗರ ಮಾಜಿ ಸಂಸದ ದಿವಂಗತ ಆರ್. ಧ್ರುವನಾರಾಯಣ್ ಅವರ ಪುತ್ರರಾದ ನಂಜನಗೂಡು ವಿಧಾನಸಭಾ ಕ್ಷೇತ್ರದ ಶಾಸಕರಾದ ದರ್ಶನ್ ಧ್ರುವನಾರಾಯಣ್ ಅವರು ಕಾಲೇಜು ಪ್ರಾರಂಭೋತ್ಸವದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಡಿಸುವಂತೆ ಕಾಲೇಜು ವತಿಯಿಂದ ಮನವಿ ಮಾಡಲಾಯಿತು. ಮನವಿಗೆ ಸ್ಪಂದಿಸಿ ಅವರು ಇಂದು 2 ಲಕ್ಷ ರೂ.ವೆಚ್ಚದ ಮೌಲ್ಯದ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಅವರಿಗೆ. ಕಾಲೇಜು, ವಿದ್ಯಾರ್ಥಿಗಳ ವತಿಯಿಂದ ಹೃದಯಪೂರ್ವಕ ಅಭಿನಂದಿಸಲಾಗುವುದು ಎಂದರು.

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ,
Fortuner ಮತ್ತು Automatic
ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582

ಮೈಸೂರು ಜಿಲ್ಲಾ ಆರ್‌ಡಿಪಿಆರ್ ಕ್ರೀಡಾಕೂಟ | ಜಿಪಂ ಸಿಇಒ ಯುಕೇಶ್ ಕುಮಾರ್

# ಒತ್ತಡ ನಿವಾರಣೆಗೆ ಕ್ರೀಡೆ ಸಹಕಾರಿ

**ಮೈಸೂರು:** ಜನರಿಗೆ ತುಂಬಾ ಹತ್ತಿರದಲ್ಲಿದ್ದುಕೊಂಡು ಕೆಲಸ ಮಾಡುವ ಇಲಾಖೆ ನಮ್ಮದು. ಆದ್ದರಿಂದ ಜನರಿಗೂ ನಮ್ಮ ಮೇಲಿನ ನಿರೀಕ್ಷೆ ಹೆಚ್ಚಿರುತ್ತದೆ. ಅದರಂತೆ ಒತ್ತಡವೂ ಇರುತ್ತದೆ. ಅದರ ನಿವಾರಣೆಗಾಗಿ ಆಯೋಜಿಸಿರುವ ಕ್ರೀಡಾಕೂಟದಲ್ಲಿ ಪ್ರತಿಯೊಬ್ಬರೂ ಭಾಗವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್‌ ತಿಳಿಸಿದರು.

ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಜಿಲ್ಲಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಹಾಗೂ ನೌಕರರ ಸಹಯೋಗದಲ್ಲಿ ಗುರುವಾರ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 'ಮೈಸೂರು ಜಿಲ್ಲಾ ಆರ್.ಡಿ.ಪಿ.ಆರ್‌ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆರ್ಡಿಪಿಆರ್‌ಕುಟುಂಬ ಬಹಳ ದೊಡ್ಡದಿದೆ. ಸರಕಾರದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವುದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿ. ಪ್ರತಿನಿತ್ಯದ ಕಾರ್ಯದೊತ್ತಡ ಮರೆತು ಕ್ರೀಡೆಯಲ್ಲಿ ಪಾಲ್ಗೊಳ್ಳಿ. ಎಲ್ಲಾ ನೌಕರರು ತಮ್ಮ ಆರೋಗ್ಯ ಮತ್ತು ಕೌಟಂಬಿಕ ಜೀವನದ ಕಡೆಗೆ ಹೆಚ್ಚಿನ ಕಾಳಜಿವಹಿಸಿ ಎಂದು ಸಲಹೆ ನೀಡಿದರು.

ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್‌ಆಸಿಫ್ ಮಾತನಾಡಿ, ಸಹಬಾಳ್ವೆ ಮತ್ತು ಸೌಹಾರ್ದಯುತ ಬದುಕಿಗೆ ಕ್ರೀಡೆ ಉಪಯುಕ್ತ. ನಾವು ಮಾಡುವ ಕೆಲಸಕ್ಕೆ ಕ್ರೀಡೆಯು ಹೆಚ್ಚಿನ ಉತ್ಸಾಹ ಮತ್ತು ಸ್ಫೂರ್ತಿ ತಂದುಕೊಡುತ್ತದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಪ್ರತಿಯೊಬ್ಬರೂ ಉತ್ಸಾಹದಿಂದ ಕ್ರೀಡೆಯಲ್ಲಿ ಭಾಗವಹಿಸಬೇಕು. ಗ್ರಾಮ ಪಂಚಾಯಿತಿಯ ಎಲ್ಲಾ ವಯೋಮಾನದವರು ಪಾಲ್ಗೊಂಡಿರುವುದು ಸಂತೋಷದ ಸಂಗತಿ. ಅವರ ವಯಸ್ಸು ಹಾಗೂ ಫಿಟ್ನೆಸ್ಗೆ ತಕ್ಕಂತೆ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಿ. ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸದವರು ಕೂಡ ಕ್ರೀಡಾಂಗಣದಲ್ಲಿದ್ದು ಕ್ರೀಡಾಪಟುಗಳಿಗೆ ಉತ್ಸಾಹ ತುಂಬಬೇಕು ಎಂದು ಹೇಳಿದರು.

ಪಿಡಿಒ ಸಂಘದ ಜಿಲ್ಲಾಧ್ಯಕ್ಷ ಕೆ.ರುಕ್ಮಾಂಗದ, ಉಪಕಾರ್ಯದರ್ಶಿ ಬಿ.ಎಂ.ಸವಿತಾ, ಭೀಮಪ್ಪ ಕೆ.ಲಾಳಿ, ಮುಖ್ಯಲೆಕ್ಕಾಧಿಕಾರಿ ಸಿದ್ದಗಂಗಮ್ಮ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ, ಕಾರ್ಯನಿರ್ವಾಹಕ ಅಧಿಕಾರಿಗಳಾದ ಧರಣೀಶ್, ಪ್ರೇಮ್ ಕುಮಾರ್,ಕುಲದೀಪ್, ರವಿ, ಹೊಂಗಯ್ಯ, ಸಿ.ಕೃಷ್ಣ, ಸುನೀಲ್ ಕುಮಾರ್,ರಂಗಸ್ವಾಮಿ, ಜೆರಾಲ್ಡ್ ರಾಜೇಶ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್‌ನಾಯ್ಕ್, ಕಾರ್ಯಪಾಲಕ ಅಭಿಯಂತರರಾದ ಶೋಭಾ, ರಂಗಸ್ವಾಮಿ ಸೇರಿದಂತೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳ ಪಿಡಿಒ, ಕಾರ್ಯದರ್ಶಿ,ಎಸ್ಡಿಎ, ಡಿಇಒಗಳು, ನರೇಗಾ ಸಿಬ್ಬಂದಿ, ಜಿಲ್ಲಾ ಸಂಘದ ಪದಾಧಿಕಾರಿಗಳು ಹಾಜರಿದ್ದರು.




ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 'ಮೈಸೂರು ಜಿಲ್ಲಾ ಆರ್.ಡಿ.ಪಿ.ಆರ್‌ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್‌ಅವರು ಉದ್ಘಾಟಿಸಿದರು.

> ಪ್ರತಿನಿತ್ಯದ ಕಾರ್ಯದೊತ್ತಡ ಮರೆತು ಕ್ರೀಡೆಯಲ್ಲಿ ಪಾಲ್ಗೊಳ್ಳಿ. ಎಲ್ಲಾ ನೌಕರರು ತಮ್ಮ ಆರೋಗ್ಯ ಮತ್ತು ಕೌಟಂಬಿಕ ಜೀವನದ ಕಡೆಗೆ ಹೆಚ್ಚಿನ ಕಾಳಜಿವಹಿಸಿ.
> -ಯುಕೇಶ್ ಕುಮಾರ್,ಜಿಲ್ಲಾ ಪಂಚಾಯಿತಿ ಸಿಇಒ

# ಫೆ.15ರಂದು ದೇಗುಲದಲ್ಲಿ ಶಿವರಾತ್ರಿಯ ಸಂಭ್ರಮ

**ಮಡಿಕೇರಿ:** ನಗರದ ಶ್ರೀವೀರಭದ್ರ ಮುನೇಶ್ವರ ದೇವಾಲಯದಲ್ಲಿ ಫೆ.15ರಂದು ಮಹಾಶಿವರಾತ್ರಿಯ ವಿಶೇಷ ಪೂಜಾ ಕಾರ್ಯಕ್ರಮ ಹಾಗೂ ವಾರ್ಷಿಕೋತ್ಸವ ಶ್ರದ್ಧಾಭಕ್ತಿಯಿಂದ ನಡೆಯಲಿದೆ ಎಂದು ದೇವಾಲಯ ಸಮಿತಿಯ ಅಧ್ಯಕ್ಷ ಪಿ.ಜಿ.ಸುಕುಮಾರ್‌ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಶಿವರಾತ್ರಿಯಂದು ಬೆಳಿಗ್ಗೆ 7 ಗಂಟೆಗೆ ಮಹಾಗಣಪತಿ ಹೋಮ, 9 ಗಂಟೆಗೆ ಶ್ರೀವೀರಭದ್ರ ದೇವರ ಉತ್ಸವ ಮೂರ್ತಿಯ ನಗರ ಪ್ರದಕ್ಷಿಣೆಯ ಶೋಭಾಯಾತ್ರೆ ನಡೆಯಲಿದೆ. ಶೋಭಾಯಾತ್ರೆಯಲ್ಲಿ ಡೊಳ್ಳುಕುಣಿತ ಭಜನೆ ತಂಡ ಸೇರಿದಂತೆ ವಿವಿಧ ಕಲಾ ತಂಡಗಳು ಭಾಗವಹಿಸಲಿವೆ ಎಂದರು.

ಶೋಭಾಯಾತ್ರೆ ದೇವಾಲಯದಿಂದ ಪ್ರಾರಂಭಗೊಂಡು ದಾಸವಾಳ ರಸ್ತೆಗಾಗಿ, ಗಣಪತಿ ಬೀದಿಯನ್ನು ಹಾದು, ಬನ್ನಿಮಂಟ ಪದಲ್ಲಿ ಪೂಜೆ ಸಲ್ಲಿಸಿ ನಂತರ ಮಹದೇವ ಪೇಟೆಗಾಗಿ ಚೌಕಿ ವೃತ್ತದಿಂದ ಹಳೆ ಬಸ್ ನಿಲ್ದಾಣಕ್ಕಾಗಿ ಜೂನಿಯರ್‌ಕಾಲೇಜು ರಸ್ತೆಗಾಗಿ ಮರಳಿ ದೇವಾಲಯಕ್ಕೆ ಬರಲಿದೆ. ಅಂದು ಮಧ್ಯಾಹ್ನ 1 ಗಂಟೆಗೆ ಭಕ್ತಾದಿಗಳಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿದೆ. ಸಂಜೆ 6 ಗಂಟೆಗೆ ಮಹಾಮೃತ್ಯುಂಜಯ ಹೋಮ ನಡೆಯಲಿದೆ. ಮೃತ್ಯುಂಜಯ ಹೋಮಕ್ಕೆ ಹೆಸರು, ನಕ್ಷತ್ರ ನೋಂದಾಯಿಸುವವರು ಮೊ. 9343819138 ಗೆ ಸಂಪರ್ಕಿಸಬೇಕೆಂದರು.

ರಾತ್ರಿ 9 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅಂದು ರಾತ್ರಿಯಿಂದ ಮರುದಿನ ಬೆಳಗ್ಗೆ 5 ಗಂಟೆಯವರೆಗೆ ವಿಶೇಷ ಪೂಜಾ ಕಾರ್ಯಗಳು ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ದೇವಸ್ಥಾನ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಂ.ಬಿ.ವಿಷ್ಣು, ಪಿ.ಜಿ.ಮಂಜುನಾಥ, ಪಿ.ಜಿ.ಕಮಲ್ ಹಾಗೂ ಸಂದೀಪ್ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ದೇವಾಲಯ ಸಮಿತಿಯ ಅಧ್ಯಕ್ಷ ಪಿ.ಜಿ.ಸುಕುಮಾರ್‌ಅವರು ಮಾತನಾಡಿದರು.

# ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ

**ರಾಮನಗರ:** ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡಿ, ಸಣ್ಣ ವಯಸ್ಸಿನಲ್ಲಿಯೇ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಿದರೆ ಅವರ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿದಂತೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ಶಶಿ ತಿಳಿಸಿದರು.

ನಗರದ ಬ್ಲಾಸಂ ಇಂಟರ್ನ್ಯಾಷನ್ ಶಾಲೆಯಲ್ಲಿ ನರ್ಸರಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದ್ದ ಗ್ರಾಜ್ಯುಯೇಷನ್ ಡೇ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಉತ್ತಮ ವಿದ್ಯಾಭ್ಯಾಸಕ್ಕೆ ಬುನಾದಿ ಹಾಕಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಬಾಲ್ಯದಲ್ಲಿ ಸಂಸ್ಕಾರ ಹಾಗೂ ವಿದ್ಯೆ ನೀಡಿದರೆ ದೇಶಕ್ಕೆ ಬಹುದೊಡ್ಡ ಕೊಡುಗೆ ನೀಡಿದಂತೆ ಆಗಲಿದೆ. ವಿದ್ಯಾರ್ಥಿಗಳು ತಾವು ಕಲಿತ ವಿದ್ಯೆಯನ್ನು ಮುಂದೆ ಜೀವನದಲ್ಲಿ ಅಳವಡಿಸಿಕೊಳ್ಳಲಿದ್ದಾರೆ. ಜೊತೆಗೆ, ವಿದ್ಯಾಭ್ಯಾಸದ ಕ್ರೀಡೆ ಸೇರಿದಂತೆ ಇತರೆ ಚುಟುವಟಿಕೆಗಳಲ್ಲಿ ಮಕ್ಕಳು ತೊಡಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಯುಕೆಜಿ ಮಕ್ಕಳಿಗೆ ಗ್ರಾಜ್ಯುಯೇಷನ್ ಪ್ರಮಾಣ ಪತ್ರವನ್ನು ವಿತರಣೆ ಮಾಡಲಾಯಿತು. ಈ ವೇಳೆ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ಅವರ ಪೋಷಕರಿಗೆ ಬಹುಮಾನ ವಿತರಣೆ ಮಾಡಲಾಯಿತು. ಇದಾದ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ವೇಳೆ ಪೋಷಕರೊಂದಿಗೆ ಮಕ್ಕಳ ನೃತ್ಯವೂ ಎಲ್ಲರ ಗಮನ ಸೆಳೆಯಿತು. ಇದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಇಶಾಂತ್ (ಸುನಿಲ್) ಶಾಲೆಯ ಪ್ರಾಂಶುಪಾಲೆ ಸಹನಾ ಸೇರಿದಂತೆ ಶಾಲೆಯ ಆಡಳಿತ ಮಂಡಳಿ ಸಿಬ್ಬಂದಿ ಶಿಕ್ಷಕರು ಹಾಗೂ ಬೋಧಕೇತರರು ಹಾಗೂ ಪೋಷಕರು ಹಾಜರಿದ್ದರು.

# ಫೆ.15ರಂದು ಸೊಸೈಟಿ ಮೂರ್ನಾಡು ಶಾಖೆ ಉದ್ಘಾಟನೆ

**ಮಡಿಕೇರಿ:** ಸುಳ್ಯ ಶ್ರೀ ವೆಂಕಟರಮಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಮೂರ್ನಾಡು ಶಾಖೆ ಫೆ.15 ರಂದು ಉದ್ಘಾಟನೆಗೊಳ್ಳಲಿದೆ ಎಂದು ಸೊಸೈಟಿಯ ಅಧ್ಯಕ್ಷ ಕೆ.ಸಿ.ಸದಾನಂದ ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಭಾನುವಾರ ಬೆಳಗ್ಗೆ 10.30 ಗಂಟೆಗೆ ಮೂರ್ನಾಡಿನಲ್ಲಿ 24ನೇ ಶಾಖೆಯನ್ನು ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂತರ್‌ಗೌಡ ಅವರು ಉದ್ಘಾಟಿಸಲಿದ್ದಾರೆ ಎಂದರು.

ತಮ್ಮ ಅಧ್ಯಕ್ಷತೆಯಲ್ಲಿ ನಡೆಯುವ ಸಭಾ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಉದ್ಘಾಟಿಸಲಿದ್ದಾರೆ. ಭದ್ರತಾ ಕೊಠಡಿಯನ್ನು ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಆನಂದ ಕರಂದ್ಲಾಜೆ ಹಾಗೂ ಗಣಕೀಕರಣವನ್ನು ಮೂರ್ನಾಡು ವರ್ತಕರ ಸಂಘದ ಅಧ್ಯಕ್ಷ ಅರುಣ್ ಅಪ್ಪಚ್ಚು ಬಡವಂಡ ಉದ್ಘಾಟಿಸಲಿದ್ದಾರೆ.

ಪ್ರಥಮ ಪಾಲುಪತ್ರವನ್ನು ಮೂರ್ನಾಡು ಗೌಡ ಸಮಾಜದ ಅಧ್ಯಕ್ಷ ಪಾಣತ್ತಲೆ ಟಿ.ಹರೀಶ್, ಠೇವಣಿ ಪತ್ರವನ್ನು ಕೊಡಗು ಜಿಲ್ಲಾ ಚೇಂಬರ್‌ಆಫ್ ಕಾಮರ್ಸ್ನ ಉಪಾಧ್ಯಕ್ಷ ನವೀನ್ ಅಂಬೆಕಲ್ಲು ವಿತರಿಸಲಿದ್ದಾರೆ. ಪ್ರಥಮ ಉಳಿತಾಯ ಖಾತೆ ಪುಸ್ತಕವನ್ನು ಕಾಂತೂರು ಮೂರ್ನಾಡು ಗ್ರಾ.ಪಂ ಅಧ್ಯಕ್ಷ ಕುಶನ್ ರೈ ವಿತರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿದ್ಯಾ ಇಲಾಖಾ ನೌಕರರ ಸೌಹಾರ್ದ ಸಹಕಾರ ಸಂಘದ ಮಾಜಿ ಅಧ್ಯಕ್ಷ ಕಂಬೀರಂಡ ಬಿ.ಕಾಳಪ್ಪ ಹಾಗೂ ಶ್ರೀ ವೆಂಕಟೇಶ್ವರ ಕಾಂಪ್ಲೆಕ್ಸ್ ನ್ನ ಮಾಲೀಕ ಕುಂತೋಡಿರ ದೇವಯ್ಯ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸಂಘವು ಪ್ರಾರಂಭದಿಂದಲೂ ಲಾಭದಲ್ಲಿ ನಡೆಯುತ್ತಿದ್ದು, ಈ ಸಹಕಾರಿ ವರ್ಷದಲ್ಲಿ ಸಂಘ ಹೆಚ್ಚಿನ ಪ್ರಗತಿ ಸಾಧಿಸಿದೆ. ಪ್ರಸ್ತುತ ಸಂಘದಲ್ಲಿ ರು.270 ಕೋಟಿ ಠೇವಣಿ ಇದ್ದು, ರು.256 ಕೋಟಿ ಸದಸ್ಯರುಗಳಿಗೆ ಸಾಲ ವಿತರಿಸಲಾಗಿದೆ. ರು.300 ಕೋಟಿ ದುಡಿಯುವ ಬಂಡವಾಳವಿದ್ದು, ಒಟ್ಟು ರು.1,300 ಕೋಟಿಗೂ ಮಿಕ್ಕಿ ವಾರ್ಷಿಕ ವ್ಯವಹಾರವನ್ನು ನಡೆಸುತ್ತಿದ್ದೇವೆ ಎಂದು ಕೆ.ಸಿ.ಸದಾನಂದ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ದಿನೇಶ ಮಡಪ್ಪಾಡಿ, ನಿರ್ದೇಶಕರಾದ ಸದಾನಂದ ಮಾವಜಿ, ದಾಮೋದರ, ಹಿರಿಯ ಶಾಖಾ ವ್ಯವಸ್ಥಾಪಕ ಅಶೋಕ ಟಿ. ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಟಿ.ವಿಶ್ವನಾಥ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಸೊಸೈಟಿಯ ಅಧ್ಯಕ್ಷ ಕೆ.ಸಿ.ಸದಾನಂದ ಅವರು ಮಾತನಾಡಿದರು.

# ಗುತ್ತಿಗೆದಾರರ ಬಾಕಿ 37 ಸಾವಿರ ಕೋಟಿ ಪಾವತಿಸಲು ಆಗ್ರಹ

**ಮಡಿಕೇರಿ:** ರಾಜ್ಯದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಸರಕಾರದ ಭ್ರಷ್ಟಾಚಾರಕ್ಕಿಂತಲೂ ಈಗಿನ ಸರಕಾರದ ಭ್ರಷ್ಟಾಚಾರದ ಪ್ರಮಾಣ ಹೆಚ್ಚಾಗಿದೆ ಮತ್ತು 'ಮಧ್ಯವರ್ತಿ'ಗಳ ಮೂಲಕ ಸರಕಾರದ ಆಡಳಿತ ನಡೆಯುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್..ಮಂಜುನಾಥ್ ಗಂಭೀರ ಆರೋಪ ಮಾಡಿದ್ದಾರೆ.

ನಗರದ ಸುದರ್ಶನ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಗುತ್ತಿಗೆದಾರರ ಸಂಘದ ಹಿಂದಿನ ಅಧ್ಯಕ್ಷರಾಗಿ ಕೆಂಪಣ್ಣ ಅವರು ಕಾರ್ಯನಿರ್ವಹಿಸುತ್ತಿದ್ದ ಸಂದರ್ಭ ವಿರೋಧ ಪಕ್ಷದಲ್ಲಿದ್ದ ಸಿದ್ದರಾಮಯ್ಯ ಅವರು, ಅಂದಿನ ಸಂದರ್ಭಗಳನ್ನು ಬಳಸಿಕೊಂಡು ಅಧಿಕಾರಕ್ಕೆ ಬಂದರು. ಹೀಗಿದ್ದೂ ಇಂದು ಗುತ್ತಿಗೆದಾರರ ಸಂಕಷ್ಟಗಳಿಗೆ ಸ್ಪಂದಿಸುತ್ತಿಲ್ಲ ಎಂದರು.

ರಾಜ್ಯವ್ಯಾಪಿ ಗುತ್ತಿಗೆದಾರರ ಕೆಲಸಗಳಿಗೆ 37 ಸಾವಿರ ಕೋಟಿ ರು. ಇಂದಿಗೂ ಪಾವತಿಯಾಗಿಲ್ಲ. ಹೀಗಾಗಿ, ಬಾಕಿ ಮೊತ್ತವನ್ನು ತಕ್ಷಣ ಪಾವತಿಸುವಂತೆ ಆಗ್ರಹಿಸಿ ಮಾ.5ರಂದು ಬೆಂಗಳೂರಿನ ಫ್ರೀಡಂ ಪಾರ್ಕ ನಲ್ಲಿ ಗುತ್ತಿಗೆದಾರರು ಬೃಹತ್ ಮುಷ್ಕರ ನಡೆಸಲಿದ್ದಾರೆ ಎಂದರು.

ರಾಜ್ಯವ್ಯಾಪಿ ಗುತ್ತಿಗೆದಾರರಿಗೆ ನೀಡಲು ಬಾಕಿ ಇರುವ ಹಣ ಮತ್ತು ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ರಾಜ್ಯ ಮುಖ್ಯ ಕಾರ್ಯದರ್ಶಿಗಳು, ವಿವಿಧ ಇಲಾಖೆಗಳ ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳ ಸಭೆ ನಡೆಸಿ ಪರಿಹಾರ ಸೂಚಿಸಬೇಕೆಂದು ಒತ್ತಾಯಿಸಿದರು.

ಗುತ್ತಿಗೆದಾರರಿಗೆ ನೀಡಲು ಬಾಕಿ ಇರುವ 37 ಸಾವಿರ ಕೋಟಿ ರು.ಗಳನ್ನು ತಕ್ಷಣ ಬಿಡುಗಡೆ ಮಾಡಬೇಕು. ಗುತ್ತಿಗೆದಾರರು ಸಾಲ ಸೋಲ ಮಾಡಿ ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ. ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ 190 ಕೋಟಿ ರು. ಪಾವತಿಸದೆ ಬಾಕಿ ಉಳಿಸಿಕೊಂಡಿದೆ. ಇದರಲ್ಲಿ ಲೋಕೋಪಯೋಗಿ ಇಲಾಖೆಯದ್ದೆ 96 ಕೋಟಿಯಷ್ಟಿದೆ ಎಂದು ಆರ್.ಮಂಜುನಾಥ್ ತಿಳಿಸಿದರು.

ಕೊಡಗಿನಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪಕ್ಕೆ ಸಂಬಂಧಿಸಿದಂತೆ 2018-19, 2019-20ನೇ ಅವಧಿಯಲ್ಲಿ ಇಲ್ಲಿನ ಗುತ್ತಿಗೆದಾರರು ಸಾಕಷ್ಟು ಸಂಕಷ್ಟಗಳ ನಡುವೆಯೂ ಹತ್ತು ಹಲವು ಕಾಮಗಾರಿಗಳನ್ನು ನಿರ್ವಹಿಸಿದ್ದಾರೆ. ಇದರ ಬಾಪ್ತು 7 ಕೋಟಿ ರು. ಪಾವತಿಯಾಗಲು ಬಾಕಿ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಎನ್.ಡಿ.ಕೃಷ್ಣ, ಉಪಾಧ್ಯಕ್ಷ ಎ.ಜಿ.ಸುರೇಶ್, ಸಂಘಟನಾ ಕಾರ್ಯದರ್ಶಿ ನಾಗರಾಜ್, ಕೊಡಗು ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕಿಮ್ಮುಡಿರ ರವಿ ಚಂಗಪ್ಪ, ಜಿಲ್ಲಾ ಕಾರ್ಯದರ್ಶಿ ಲಾರೆನ್ಸ್, ಗೌರವಾಧ್ಯಕ್ಷ ಸಣ್ಣೇಗೌಡ, ಉಪಾಧ್ಯಕ್ಷ ಎಂ.ಕೆ.ಚಂಗಪ್ಪ, ನಗರ ಉಪಾಧ್ಯಕ್ಷ ರಾಜೀವಲೋಚನ, ಸಂಘಟನಾ ಕಾರ್ಯದರ್ಶಿ ಕೆ.ಬಾಬು ಹಾಗೂ ಖಜಾಂಚಿ ರವೀಂದ್ರ ರೈ ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್.ಮಂಜುನಾಥ್ ಅವರು ಮಾತನಾಡಿದರು.

# ಡಿ.ಸಿ.ತಮ್ಮಣ್ಣ ಆರೋಪದ ವಿರುದ್ಧ ಶಾಸಕ ಉದಯ್ ಕಿಡಿ

**ಮದ್ದೂರು:** ತಾವು ಶಾಸಕರಾದ ಬಳಿಕ ಕ್ಷೇತ್ರದ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುವ ಜತೆಗೆ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಬಡವರ್ಗದವರು, ಹಿಂದುಳಿದ ವರ್ಗದ ಜನರ ಪರ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುತ್ತಿರುವುದು ಸರ್ವಾಧಿಕಾರಿ ಧೋರಣೆಯೇ ಎಂದು ಪ್ರಶ್ನಿಸಿದ ಶಾಸಕ ಕೆ.ಎಂ.ಉದಯ, ಮಾಜಿ ಸಚಿವ ಡಿ.ಸಿ.ತಮ್ಮಣ್ಣ ವಿರುದ್ಧ ಹರಿಹಾಯ್ದರು.

ತಾಲೂಕಿನ ಸೋಮನಹಳ್ಳಿ ಜಿ.ಪಂ. ವ್ಯಾಪ್ತಿಯ ಅಗರಲಿಂಗನದೊಡ್ಡಿ, ಡಿ.ಹೊಸೂರು, ಹಳ್ಳಿಕೆರೆ, ಅಂಕೇಗೌಡನದೊಡ್ಡಿ ಹಾಗೂ ಕೆಂಪೇಗೌಡನದೊಡ್ಡಿ ಗ್ರಾಮಗಳ ಅಭಿವೃದ್ಧಿಗೆ ಬಿಡುಗಡೆಯಾಗಿರುವ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಅಭಿವೃದ್ಧಿ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು ಯಾರಾದರೂ ಬಂದು ಕೆಲಸ ಮಾಡಿದರೆ ಅವರಿಗೆ ರೆಡ್ ಕಾರ್ಪೆಟ್ ಹಾಕಿ ಸ್ವಾಗತ ಮಾಡಲಿದ್ದು ಅದು ಬಿಟ್ಟು ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ನನ್ನ ವಿರುದ್ಧ ಸರ್ವಾಧಿಕಾರಿ ಧೋರಣೆ ಎಂದರೆ ಅವರಿಗೆ ಶೋಭೆ ತುರುವುದಿಲ್ಲವೆಂದು ಕಿಡಿಕಾರಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸಿ.ಆರ್.ಎಸ್ ಅನುದಾನ ತಂದು ಕೆ.ಬೆಳ್ಳೂರು ಗ್ರಾಮದಲ್ಲಿ ಶಾಲಾ ಕಟ್ಟಡ ನಿರ್ಮಾಣಕ್ಕೆ ತಡೆಯೊಡ್ಡುವಂತೆ ಬಿ.ಇ.ಓ ಅವರಿಗೆ ಯಾವುದೇ ರೀತಿಯ ಸೂಚನೆ ನೀಡಿಲ್ಲವೆಂದ ಅವರು ಅಂತಹ ಬುದ್ಧಿ ತಮ್ಮ ಜಾಯಮಾನದಲ್ಲಿ ಬಂದಿಲ್ಲವೆಂದ ಅವರು ಎರಡು ಕೊಠಡಿಗಳನ್ನು ನಿರ್ಮಿಸಲು ಮುಂದಾಗಿದ್ದು ಮತ್ತಷ್ಟು ಅನುದಾನವನ್ನು ತಂದು ಕ್ಷೇತ್ರದ ಅಭಿವೃದ್ಧಿಗೆ ಮುಂದಾದರೆ ಅದಕ್ಕೆ ತಮ್ಮ ಅಭ್ಯಂತರವಿಲ್ಲ ಎಂದರು.

ಈ ವೇಳೆ ಕೆ.ಬೆಳ್ಳೂರು ಗ್ರಾ.ಪಂ. ಮಾಜಿ ಅಧ್ಯಕ್ಷ ಕೆಂಪರಾಜು, ಮುಖಂಡರಾದ ಜಯರಾಮು, ಪುಟ್ಟಪ್ಪ, ಅಪ್ಪೇಗೌಡ, ಮಾದೇಶ್, ಶಿವಚರಣ್, ಅಭಿ, ಮಹೇಶ್, ತಿಮ್ಮಣ್ಣ, ಸತೀಶ್, ರವಿ, ಮಲ್ಲೇಶ್, ತಿಮ್ಮಪ್ಪ ಇತರರಿದ್ದರು.

ಕಾಮಗಾರಿಗಳಿಗೆ ಶಾಸಕ ಕೆ.ಎಂ.ಉದಯ ಗುದ್ದಲಿ ಪೂಜೆ ನೆರವೇರಿಸಿದರು.

# ವಿಬಿ-ಜಿ ರಾಮ್ ಜಿ ಯೋಜನೆ ಶ್ರಮಿಕರ ಬದುಕಿಗೆ ಪೂರಕ

**ಮದ್ದೂರು:** ಕೇಂದ್ರ ಸರಕಾರ ಜಾರಿಗೆ ತಂದಿರುವ ''ವಿ.ಬಿ-ಜಿ ರಾಮ್ಜಿ'' ಯೋಜನೆ ಬಡವರ್ಗದ ಮತ್ತು ಶ್ರಮಿಕರ ಬದುಕಿಗೆ ಪೂರಕವಾಗಿದ್ದು ಇದರಿಂದಾಗಿ ಉದ್ಯೋಗ ಕಲ್ಪಿಸುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬಹುದೆಂದು ಬಿ.ಜೆ.ಪಿ ಮುಖಂಡ ಎಸ್.ಪಿ.ಸ್ವಾಮಿ ತಿಳಿಸಿದರು.

ಪಟ್ಟಣದ ತಾಲೂಕು ಬಿ.ಜೆ.ಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿ ವೇಳೆ ಮಾತನಾಡಿದ ಅವರು ಹಳ್ಳಿಗಳು ಉದ್ಧಾರವಾಗಬೇಕೆಂಬ ಮತ್ತು ಗ್ರಾಮಗಳಿಗೂ ಅಧಿಕಾರ ಸಿಗಬೇಕೆಂಬ ಉದ್ದೇಶದಿಂದ ಪ್ರಧಾನಿ ನರೇಂದ್ರಮೋದಿಯವರು ಶ್ರಮಿಕರ ಬದುಕಿಗೆ ಭರವಸೆಯನ್ನು ಮೂಡಿಸಬೇಕೆಂಬ ಉದ್ದೇಶದಿಂದ ವಿ.ಬಿ.-ಜಿ ರಾಮ್ಜಿ ಯೋಜನೆಯನ್ನು ಜಾರಿಗೊಳಿಸಿದ್ದಾರೆಂದು ತಿಳಿಸಿದರು. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ತಮ್ಮ ಅಧಿಕಾರಕ್ಕಾಗಿ ನರೇಗಾ ಮತ್ತು ಗಾಂಧಿಯವರ ವಿಚಾರಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದು ಆದರೆ ಅವರು ಕಂಡ ಗ್ರಾಮ ಸ್ವರಾಜ್ಯ ಕನಸನ್ನು ಅಳಿಸಿಹಾಕಲು ತಾಲೂಕಿನಲ್ಲಿ ಹಲವು ಹಳ್ಳಿಗಳನ್ನು ನಗರಸಭೆಗೆ ಸೇರ್ಪಡೆಗೊಳಿಸಲು ಮುಂದಾಗುತ್ತಿರುವುದು ನ್ಯಾಯಸಮ್ಮತವೇ ಎಂದು ಪ್ರಶ್ನಿಸಿದರು. ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸಬೇಕೆಂಬ ಉದ್ದೇಶದಿಂದ ಹಾಗೂ ಪ್ರತಿಯೊಬ್ಬ ಕಾರ್ಮಿಕನಿಗೂ ನೇರವಾಗಿ ಅವರ ಖಾತೆಗೆ ಹಣ ಜಮಾವಾಗಲೆಂಬ ಉದ್ದೇಶದಿಂದ ಕೇಂದ್ರ ಸರಕಾರ ನೂತನ ಯೋಜನೆಯನ್ನು ಜಾರಿಗೊಳಿಸಿದ್ದು ಇದರಿಂದಾಗಿ ಕಾರ್ಮಿಕರು ಮತ್ತಷ್ಟು ಆರ್ಥಿಕವಾಗಿ ಸದೃಢವಾಗಲು ಕಾರಣವಾಗಲಿದೆ ಎಂದರು. ಈ ವೇಳೆ ರೈತಮೋರ್ಚ ರಾಜ್ಯ ಸಂಚಾಲಕ ಅಶೋಕ್ಕುಮಾರ್, ರವಿಕುಮಾರ್, ಸಿ.ಕೆ.ಸತೀಶ್, ನಂಜೇಗೌಡ ಇತರರಿದ್ದರು.

ಜನವಿರೋಧಿ ಕೇಂದ್ರ ಬಜೆಟ್‌ಗೆ ಧಿಕ್ಕಾರ ಎಂಬ ಭಿತ್ತಿ ಪತ್ರಕ್ಕೆ ಸಿಐಟಿಯುನಿಂದ ಬೆಂಕಿ ಹಚ್ಚಿ ಆಕ್ರೋಶ

# ಕೇಂದ್ರ ಸರಕಾರದ ನೂತನ ಶ್ರಮ ಶಕ್ತಿ ನೀತಿ ವಾಪಸಾತಿಗೆ ಒತ್ತಾಯಿಸಿ ಪ್ರತಿಭಟನೆ

**ಚಾಮರಾಜನಗರ:** ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಂಗನವಾಡಿ ನೌಕರರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಬೆಂಬಲಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಘಟಕ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ, ಮುಖಂಡ ರಾಮಕೃಷ್ಣ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾ ನಿರತರು ಅಲ್ಲಿಂದ ಮೆರವಣಿಗೆ ಹೊರಟು ಅಗ್ರಹಾರ ಬೀದಿಯ ಮೂಲಕ ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ನಿರ್ಮಿಸಿ ಕೆಲಕಾಲ ರಸ್ತೆ ತಡೆ ನಡೆಸಿ, ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿ, ಜನವಿರೋಧಿ ಕೇಂದ್ರ ಬಜೆಟ್ ಗೆ ಧಿಕ್ಕಾರ ಎಂದು ಬರೆದಿದ್ದ ಭಿತ್ತಿಪತ್ರಕ್ಕೆ ಬೆಂಕಿಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ ಮಾತನಾಡಿ, ಶಿಕ್ಷಣ ಇಲಾಖೆ ಎಲ್ ಕೆಜಿ, ಯುಕೆಜಿ ನಡೆಸುವುದನ್ನು ನಿಲ್ಲಿಸಿ, ಅಂಗನವಾಡಿ ಕೇಂದ್ರಗಳಲ್ಲಿಯೇ ನಡೆಸಬೇಕು. ಮತ್ತು ಅಗತ್ಯವಿರುವ ಬಜೆಟ್ ಕೊಡಬೇಕು.

ಅಂಗನವಾಡಿ ನೌಕರರಿಗೆ ದ್ರೋಹ ಬಗೆದ 4 ಕಾರ್ಮಿಕ ಸಂಹಿತೆಗಳು ರದ್ದುಪಡಿಸಬೇಕು ಶಾಸನ ಬದ್ದ ಸವಲತ್ತುಗಳನ್ನು ನೀಡದ ''ಶ್ರಮಶಕ್ತಿ ನೀತಿ' 2025 ಬೇಡವೇ ಬೇಡ,. ಅಂಗನವಾಡಿ ನೌಕರರಿಗೂ ಮುಟ್ಟಿನ ರಜೆ ನೀಡಬೇಕು. 456 ಲಕ್ಷ ಸ್ಕಿಮ್ ಕಾರ್ಮಿಕರ ಸೇವಾ ಷರತ್ತುಗಳ ಸುಧಾರಣೆಗೆ ಪ್ರತ್ಯೇಕ ವೇತನ ಆಯೋಗ ರಚಿಸಬೇಕು ಎಂದು ಒತ್ತಾಯಿಸಿದರು. ಐಸಿಡಿಎಸ್ ಯೋಜನೆಯನ್ನು ಖಾಯಂ ಮಾಡಬೇಕು, ಖಾಯಂ ಮಾಡುವ ತನಕ ಪ್ರತ್ಯೇಕ ನಿರ್ದೇಶಾನಾಲಯವನ್ನು ರಚಿಸಬೇಕು. 2018 ಫಲಾನುಭವಿಗಳ ಘಟಕ ವೆಚ್ಚ ಹೆಚ್ಚಳ ಮಾಡಿಲ್ಲ, ಕೂಡಲೇ ಘಟಕ ವೆಚ್ಚ ಹೆಚ್ಚಳ ಮಾಡಬೇಕು ಮತ್ತು ಸ್ಥಳೀಯ ಆಹಾರ-ಪದಾರ್ಥಗಳನ್ನು ನೀಡಬೇಕು.

2018 ರಿಂದ ಅಂಗನವಾಡಿ ನೌಕರರಿಗೆ ಕೇಂದ್ರ ಸರಕಾರ ವೇತನ ಹೆಚ್ಚಳ ಮಾಡಲಿಲ್ಲ, ಇಂದಿಗೂ ಅಂಗನವಾಡಿ ಕಾರ್ಯಕರ್ತೆಗೆ 2700 ರು., ಸಹಾಯಕಿಗೆ 1350 ರೂಗಳನ್ನು ಮಾತ್ರವೇ ನೀಡುತ್ತಿದೆ. ಆದ್ದರಿಂದ ಕೇಂದ್ರ ಸರಕಾರ ಕೂಡಲೇ ಕನಿಷ್ಠ ವೇತನವನ್ನಾದರೂ ಜಾರಿ ಮಾಡಬೇಕು ಎಫ್ ಆರ್‌ಎಸ್ ನ್ನು ರದ್ದು ಮಾಡಬೇಕು ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ವೈಫೈ ವ್ಯವಸ್ಥೆ ನೀಡಬೇಕು.

ಅಂಗನವಾಡಿ ನೌಕರರನ್ನು ಚುನಾವಣಾ ಕೆಲಸಗಳಿಂದ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು. ಚುನಾವಣಾಧಿಕಾರಿಗಳು ಅಂಗನವಾಡಿ ಕಾರ್ಯಕರ್ತರ ಮೇಲೆ ಶಿಸ್ತುಕ್ರಮ ಜರುಗಿಸಬಾರದು. ಖಾಸಗಿ ಅಂಗನವಾಡಿ ವಿಚಾರಗಳಲ್ಲಿ ನೌಕರರ ಬಂದನವಾದಗ ವಿಚಾರಣೆ ನಡೆಸದೆ ಏಕಮುಖವಾಗಿ ಕೆಲಸದಿಂದ ವಜಾ ಮಾಡುವುದನ್ನು ನಿಲ್ಲಿಸಬೇಕು. ಅಂಗನವಾಡಿ ನೌಕರರನ್ನು 3 ಮತ್ತು 4ನೇ ದರ್ಜೆಯ ನೌಕರರನ್ನಾಗಿ ಪರಿಗಣಿಸಬೇಕು. ಅಂಗನವಾಡಿ ನೌಕರರನ್ನು ಖಾಯಂ ಮಾಡುವ ತನಕ 26 ಸಾವಿರ ಕನಿಷ್ಠ ವೇತನ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗುಂಡ್ಲುಪೇಟೆ ತಾಲೂಕು ಅಧ್ಯಕ್ಷೆ ಗುರುಮಲ್ಲಮ್ಮ, ಕಾರ್ಯದರ್ಶಿ ದೇವಮಣಿ, ಚಾಮರಾಜನಗರ ತಾಲೂಕು ಕಾರ್ಯದರ್ಶಿ ಶಾಹಿದಾಬಾನು, ಖಜಾಂಚಿ ಗುರುಲಿಂಗಮ್ಮ, ಸಂತೇಮರಹಳ್ಳಿ ಅಧ್ಯಕ್ಷ ಪಾರ್ವತಮ್ಮ, ಕಾರ್ಯದರ್ಶಿ ತೊಳಸಮ್ಮ ಕೊಳ್ಳೇಗಾಲ ತಾಲೂಕು ಅಧ್ಯಕ್ಷೆ ಶಾಂತಮ್ಮ ಯಳಂದೂರು ತಾಲೂಕು ಅಧ್ಯಕ್ಷೆ ಮೀನಾಕ್ಷೆ, ಬಿಸಿಯೂಟ ಜಿಲ್ಲಾಧ್ಯಕ್ಷೆ, ಶಿವಮ್ಮ ಇತರರು ಭಾಗವಹಿಸಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಂಗನವಾಡಿ ನೌಕರರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಬೆಂಬಲಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಘಟಕ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

> ಅಂಗನವಾಡಿ ನೌಕರರಿಗೆ ದ್ರೋಹ ಬಗೆದ 4 ಕಾರ್ಮಿಕ ಸಂಹಿತೆಗಳು ರದ್ದುಪಡಿಸಬೇಕು ಶಾಸನ ಬದ್ದ ಸವಲತ್ತುಗಳನ್ನು ನೀಡದ ''ಶ್ರಮಶಕ್ತಿ ನೀತಿ' 2025 ಬೇಡವೇ ಬೇಡ,. ಅಂಗನವಾಡಿ ನೌಕರರಿಗೂ ಮುಟ್ಟಿನ ರಜೆ ನೀಡಬೇಕು. 456 ಲಕ್ಷ ಸ್ಕಿಮ್ ಕಾರ್ಮಿಕರ ಸೇವಾ ಷರತ್ತುಗಳ ಸುಧಾರಣೆಗೆ ಪ್ರತ್ಯೇಕ ವೇತನ ಆಯೋಗ ರಚಿಸಬೇಕು.
> -ಎ.ನಾಗಮಣಿ, ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ಚಿಕ್ಕಬಳ್ಳಾಪುರದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ರಾಜ್ಯ ರೈತ ಸಂಘಟನೆಗಳ ಒಕ್ಕೂಟದಿಂದ ರೈತ ಜಾಗೃತಿ ಯಾತ್ರೆ | ಜಗಜೀತ್‌ಸಿಂಗ್ ದಲ್ಲೇವಾಲಾ ಹೇಳಿಕೆ

# ವ್ಯಾಪಾರ ಒಪ್ಪಂದ ರೈತರ ಪಾಲಿಗೆ ಮರಣ ಶಾಸನ

**ಚಿಕ್ಕಬಳ್ಳಾಪುರ:** ಇತ್ತೀಚೆಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊಸದಾಗಿ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡಿರುವುದು ರೈತಾಪಿ ವರ್ಗದ ಪಾಲಿಗೆ ಆಘಾತಕಾರಿ ವಿಚಾರವಾಗಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಜಗಜೀತ್ ಸಿಂಗ್ ದಲ್ಲೇವಾಲಾ ಆತಂಕ ವ್ಯಕ್ತಪಡಿಸಿದರು.

ನಗರದ ಅಂಬೇಡ್ಕರ್‌ಭವನದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ವತಿಯಿಂದ ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಂಬಲ ಬೆಲೆ ಕಾನೂನು ಜಾರಿಗಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ತಾವು ನಡೆಸುತ್ತಿರುವ ರೈತ ಜಾಗೃತಿ ಯಾತ್ರೆಗೆ ಚಿಕ್ಕಬಳ್ಳಾಪುರದಲ್ಲಿ ರೈತಮುಖಂಡರು ನೀಡಿದ ಅಭೂತಪೂರ್ವ ಸ್ವಾಗತವನ್ನು ಸ್ವೀಕರಿಸಿದ ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚೆಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊಸದಾಗಿ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡಿರುವುದು ಆಘಾತಕಾರಿ ವಿಚಾರವಾಗಿದೆ.ಈ ಒಪ್ಪಂದ ರೈತವರ್ಗದ ಬೆನ್ನು ಮೂಳೆ ಮುರಿಯುವ ಶಾಸನವಾಗಿದ್ದು ದೇಶವಾಸಿಗಳನ್ನು ಅಪಾಯಕಾರಿ ಆಹಾರ ಸಂಸ್ಕೃತಿಗೆ ಒಗ್ಗಿಸಲು ಹೊರಟಿರುವ ರೈತರ ಪಾಲಿನ ಮರಣ

ಚಿಕ್ಕಬಳ್ಳಾಪುರ ಅಂಬೇಡ್ಕರ್‌ಭವನದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ರಾಜ್ಯ ರೈತ ಸಂಘಟನೆಗಳ ಒಕ್ಕೂಟದಿಂದ ಆಯೋಜಿಸಲಾಗಿದ್ದ ರೈತ ಜಾಗೃತಿ ಯಾತ್ರೆ ಕಾರ್ಯ ಕ್ರಮವನ್ನು ಜಗಜೀತ್ ಸಿಂಗ್ ದಲ್ಲೇವಾಲಾ ಅವರು ಉದ್ಘಾಟಿಸಿದರು.

ಶಾಸನವಾಗಿದೆ.ಇದನ್ನು ವಿರೋಧಿಸಿ ದೇಶದ ರೈತರು ಫೆ- 15 ನೇ ತಾರೀಕು ಹಳ್ಳಿ ಹಳ್ಳಿಗಳಲ್ಲಿ ಅಮೆಕಾದ ಒಪ್ಪಂದ ಪತ್ರ ಸುಡುವ ಚಳುವಳಿ ನಡೆಸಬೇಕು ಎಂದು ಕರೆ ನೀಡಿದರು.

ರಾಜಕೀಯೇತರ ರೈತ ಸಂಘಟನೆಯಾದ ಸಂಯುಕ್ತ ಕಿಸಾನ್ ಮೋರ್ಚಾ( ಎಸ್ಕೆಎಂ)ದ ರಾಷ್ಟ್ರೀಯ ನೇತಾರ ಜಗಜಿತ್

ಸಿಂಗ್ ದಲ್ಲೆವಾಲ ಮಾತನಾಡಿದರು.

ಮಾ.19ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಪ್ರಮಾಣದಲ್ಲಿ ರೈತರ ಸಮಾವೇಶ

> **ಇತ್ತೀಚೆಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊಸದಾಗಿ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡಿರುವುದು ಆಘಾತಕಾರಿ ವಿಚಾರವಾಗಿದೆ.**
> –ಜಗಜೀತ್ ಸಿಂಗ್ ದಲ್ಲೇವಾಲಾ, ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ

ನಡೆಸಿ ದೇಶದ ಉದ್ದಗಲಕ್ಕೂ ರೈತರು ಸಹಿ ಮಾಡಿ ನೀಡಿರುವ ಮನವಿ ಪತ್ರವನ್ನು ಪ್ರಧಾನಿಗಳಿಗೆ ಸಲ್ಲಿಸಿ ಎಂಎಸ್ಪಿ ಕಾನೂನು ಜಾರಿ ಮಾಡಲು ಒತ್ತಾಯಿಸಲಾಗುವುದು. ಈ ಹೋರಾಟದಲ್ಲಿ ದೇಶದ ಎಲ್ಲಾ ರೈತರು ಭಾಗಿಯಾಗಬೇಕು ಎಂದು ಮನವಿ ಮಾಡಿದರು.

ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್‌ಮಾತನಾಡಿ, ಸ್ವಾತಂತ್ರ್ಯ ಬಂದು 78 ವರ್ಷ ಕಳೆದರೂ ರೈತಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳಲಾಗದೆ ಕೃಷಿಯಿಂದ ವಲಸೆ ಹೋಗುತ್ತಿದ್ದಾರೆ. ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆದೊರೆಯದೆ ಸಾಲಗಾರನಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರ ಮಕ್ಕಳಿಗೆ ಹೆಣ್ಣು ಸಿಗುತ್ತಿಲ್ಲ.ಇವೆಲ್ಲಾ ಬೆಳವಣಿಗೆ ನೋಡಿದರೆ ಕೃಷಿ ಕ್ಷೇತ್ರ ಅವನತಿಯತ್ತ ಸಾಗುತ್ತಿದೆ ಎಂದು ಹೇಳಲು ನೋವಾಗುತ್ತಿದೆ ಎಂದರು.

ಕಾರ್ಯಕ್ರಮಕ್ಕೂ ಮೊದಲು ದಲ್ಲೆವಾಲಾ ಅವರನ್ನು ನಾದಸ್ವರದೊಂದಿಗೆ ಅಂಬೇಡ್ಕರ್‌ಭವನದವರೆಗೆ ಮೆರವಣಿಗೆಯಲ್ಲಿ ಪೂರ್ಣಕುಂಭ ಸ್ವಾಗತದೊಂದಿಗೆ ಕರೆತರಲಾಯಿತು.

ಈ ವೇಳೆ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜು, ಬರಡನಪುರ ನಾಗರಾಜ್, ಸಂಘಟನೆಯ ಜಿಲ್ಲಾಧ್ಯಕ್ಷ ಶ್ರೀನಿವಾಸಲು, ಉಪಾಧ್ಯಕ್ಷ ಸತ್ಯನಾರಾಯಣ, ಕಾರ್ಯದರ್ಶಿ ಬೈರೆಡ್ಡಿ, ಕಾರ್ಯಾಧ್ಯಕ್ಷ ರಾಜಣ್ಣ ಮಂಡಿಬೆಲೆ, ಮಹಿಳ ಸಂಘದ ಅಧ್ಯಕ್ಷೆ ಶಾಂತಮ್ಮ, ಗೌರವಾಧ್ಯಕ್ಷ ಟಿ.ಆರ್.ಕೃಷ್ಣಪ್ಪ, ದಾವಣಗೆರೆ ಬಲ್ಲೂರು ರವಿಕುಮಾರ್,ಬೆಳಗಾವಿ ಸುರೇಶ್ ಪಾಟೀಲ್, ತುಮಕೂರು ಶಿವಕುಮಾರ್,ಶಿವಮೊಗ್ಗ ದೇವಕುಮಾರ್,ಅಭಿಮನ್ಯು ಕೋಹರ್,ಇಂದ್ರಜಿತ್, ಎಂ.ಪಿ.ಸಹರನ್, ಸೋನು ಪಂಜಾಬ್, ಅರುಣ್ಪಟೇಲ್, ಸಲಂದರ್‌ಸಿಂಗ್, ಚಿಂತಾಮಣಿ ತಾಲೂಕು ಅಧ್ಯಕ್ಷ ವೆಂಕಟರಾಮಯ್ಯ, ಕಾರ್ಯದರ್ಶಿ ಶ್ರೀರಾಮರೆಡ್ಡಿ,ಮಹಿಳಾ ಸಂಘದ ಅಧ್ಯಕ್ಷೆ ಗುಟ್ಟಂಪಲ್ಲಿ ಶಾಂತಮ್ಮ, ಪ್ರಭಾವತಿ, ಗಡಿನಾಡು ರೈತ ಸಂಘದ ಜಿಲ್ಲಾಧ್ಯಕ್ಷ ವೆಂಕಟೇಶ್, ತಾಲೂಕು ಅಧ್ಯಕ್ಷ ರಾಮಕೃಷ್ಣ, ಗೌರವಾಧ್ಯಕ್ಷ ಮೈಲಪನಹಳ್ಳಿ ರಾಜಶೇಖರ್‌ಮತ್ತಿತರರು ಇದ್ದರು.

## ನಾಳೆ ನೀಟ್ ಕುರಿತ ಜಾಗೃತಿ ಕಾರ್ಯಾಗಾರ

ಸುದ್ದಿಗೋಷ್ಠಿಯಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ.ಆರ್.ಹುಲಿನಾಯ್ಕರ್‌ಅವರು ಮಾತನಾಡಿದರು.

**ತುಮಕೂರು:** ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಫೆ.14 ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಪಿಯುಸಿ ವಿಭಾಗದೊಂದಿಗೆ ಸೇರಿ ನೀಟ್ ಕುರಿತ ಜಾಗೃತಿ ಕಾರ್ಯಾಗಾರವನ್ನು ಪಿಯು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಎಂ.ಆರ್. ಹುಲಿನಾಯ್ಕರ್‌ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದ್ವಿತೀಯ ಪಿಯುಸಿ ಓದುತ್ತಿರುವ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಮೇ 03ರಂದು ಎನ್.ಟಿ.ಎ ನಿಂದ ನೀಟ್ ಪರೀಕ್ಷೆ ಆಯೋಜಿಸಿದ್ದು, ಪರೀಕ್ಷೆ ತೆಗದುಕೊಳ್ಳುವ ವಿಧಾನ, ಪರೀಕ್ಷೆ ತಯಾರಿ, ಪ್ರಶ್ನೆ ಪತ್ರಿಕೆಗಳ ಮಾದರಿ, ಉತ್ತನ ನೀಡುವ ವಿಧಾನ ಸೇರಿದಂತೆ ನೀಟ್ಗೆ ಸಂಬಂಧಿಸಿದ ಸಮಗ್ರ ವಿಚಾರಗಳ ಕುರಿತು ನುರಿತತಜ್ಞರಿಂದ ವಿಶೇಷ ಬೋಧನೆ, ಸಂವಾದ ಹಾಗೂ ಮಾರ್ಗದರ್ಶನ ಕಾರ್ಯಾಗಾರ ನಡೆಯಲಿದೆ ಎಂದರು.

ನೀಟ್ ಜಾಗೃತಿ ಕಾರ್ಯಗಾರದಲ್ಲಿ ಸುಮಾರು 1500 ರಿಂದ 1800ಜನ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ. ಈಗಾಗಲೇ ಪಿಯು ಡಿಡಿಪಿಐ ಮೂಲಕ ಜಿಲ್ಲೆಯ ಎಲ್ಲಾ ಪಿಯು ಕಾಲೇಜುಗಳಿಗೆ ಮಾಹಿತಿ ನೀಡಲಾಗಿದೆ.2000 ವಿದ್ಯಾರ್ಥಿ ಗಳಿಗೆ ಬೇಕಾದ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಊಟ, ತಿಂಡಿ, ಜತೆಗೆ ಸ್ಟಡಿ ಮೆಟಿರಿಯಲ್, ಹಳೆಯ ಪ್ರಶ್ನೆ ಪತ್ರಿಕೆ ಒಳಗೊಂಡ ಕಿರು ಹೊತ್ತಿಗೆಗಳನ್ನು ನೀಡುವ ಮೂಲಕ ಮಕ್ಕಳು ನೀಟ್ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

ಅಲ್ಲದೆ ಶ್ರೀದೇವಿ ಶಿಕ್ಷಣ ಸಂಸ್ಥೆಯಿಂದ ಹೆಲ್ಪ್ ಲೈನ್ತೆರೆದು, ಅವಶ್ಯವಿರುವ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸುವುದರಿಂದ ಹಿಡಿದು,ಕೋರ್ಸುಗಳ ಆಯ್ಕೆ ಸೇರಿದಂತೆ ಎಲ್ಲ ರೀತಿಯ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ನಿರ್ದೇಶಕ ಡಾ.ಎಂ.ಎಸ್ ಪಾಟೀಲ್, ಟ್ರಸ್ಟಿಗಳಾದ ಅಂಬಿಕಾ , ಡಾ.ಲಾವಣ್ಯ, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ.ನರೇಂದ್ರ , ಶಿಕ್ಷಣ ಸಂಸ್ಥೆಯ ವಿವಿಧ ಕಾಲೇಜುಗಳ ಮುಖ್ಯಸ್ಥರಾದ ಡಾ.ಕೃಷ್ಣ, ಡಾ.ರಾಧಾಕೃಷ್ಣ, ಚಂದ್ರಶೇಖರ್‌ಮತ್ತಿತರರು ಉಪಸ್ಥಿತರಿದ್ದರು.

## ವಿದ್ಯುತ್ ಖಾಸಗೀಕರಣ: ನೌಕರರ ಪ್ರತಿಭಟನೆ

**ಚಿಕ್ಕನಾಯಕನಹಳ್ಳಿ:** 'ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಕೇಂದ್ರ ಸರಕಾರದ ನಿರ್ಧಾರ ಜನವಿರೋಧಿಯಾಗಿದ್ದು, ಈ ಕೂಡಲೇ ಈ ಪ್ರಕ್ರಿಯೆಯನ್ನು ಕೈಬಿಡಬೇಕು' ಎಂದು ಆಗ್ರಹಿಸಿ ಗುರುವಾರ ಚಿಕ್ಕನಾಯಕನಹಳ್ಳಿ ಬೆಸ್ಕಾಂ ಕಚೇರಿ ಮುಂದೆ ನೌಕರರು ಪ್ರತಿಭಟನೆ ನಡೆಸಿದರು.

ಕುಟುಂಬಗಳ ಬೀದಿ ಹೋರಾಟದ ಎಚ್ಚರಿಕೆ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬೆಸ್ಕಾಂ ನೌಕರರ ಸಂಘದ ಅಧ್ಯಕ್ಷ ಗೂಳೂರು ನಾಗರಾಜ್ ಮಾತನಾಡಿ, 'ಸರಕಾರವು ಬೆಸ್ಕಾಂ ಅನ್ನು ಖಾಸಗಿಯವರಿಗೆ ಧಾರೆ ಎರೆಯಲು ಮುಂದಾಗಿರುವುದು ನೌಕರರ ಬದುಕಿನ ಮೇಲೆ ಗದಾಪ್ರಹಾರ ಮಾಡಿದಂತೆ. ಈ ನಿರ್ಧಾರದಿಂದಾಗಿ ನೌಕರರ ಉದ್ಯೋಗ ಭದ್ರತೆ ಮಾತ್ರವಲ್ಲದೆ, ಸಂವಿಧಾನಬದ್ಧ ಮೀಸಲಾತಿಗೂ ಧಕ್ಕೆ ಬರಲಿದೆ. ಕಾರ ಹಠ ಮುಂದುವರಿಸಿದರೆ ಮುಂದಿನ ದಿನಗಳಲ್ಲಿ ನೌಕರರ ಹೆಂಡತಿ-ಮಕ್ಕಳು ಬೀದಿಗಿಳಿದು ಹೋರಾಟ ಮಾಡುವುದು ಅನಿವಾರ್ಯವಾಗಲಿದೆ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಜೆಇ ಆನಂದ್ ಮಾತನಾಡಿ, 'ವಿದ್ಯುಚ್ಛಕ್ತಿ ಎಂಬುದು ಕೇವಲ ವ್ಯವಹಾರವಲ್ಲ,

ಅದು ಸರ್ವಜನಿಕ ಸೇವೆ. ಇದು ಖಾಸಗಿಯವರ ಕೈ ಸೇರಿದರೆ ದರ ದುಪ್ಪಟ್ಟಾಗಲಿದ್ದು, ಬಡವರು ಮತ್ತು ರೈತರು ಕತ್ತಲಲ್ಲಿ ಬದುಕಬೇಕಾಗುತ್ತದೆ. ಸಂಸ್ಥೆಯ ಉಳಿವಿಗಾಗಿ ನಮ್ಮ ಹೋರಾಟ ನಿರಂತರ' ಎಂದರು. ಪ್ರತಿಭಟನೆಯಲ್ಲಿ ಎಇ ಮಂಜುನಾಥ್, ಎಸ್.ಒ ಫರ್ಹಾನ್, ಮರ್ತಿ,ಯೋಗೇಂದ್ರ, ರಘು, ಸಹಾಯಕ ಲೆಕ್ಕಾಧಿಕಾರಿ ಸುರೇಶ ಮರ್ತಿ, ಮುನಿಸಿದ್ದಪ್ಪ, ಚಂದ್ರಕಿರಣ್, ದಿವ್ಯಾ, ನಾಗರತ್ನ ಹಾಗೂ ಸಿಬ್ಬಂದಿಗಳಾದ ಪ್ರಸನ್ನಕುಮಾರ್,ಲಕ್ಕಣ್ಣ, ಪ್ರಕಾಶ್ ಸೇರಿದಂತೆ ನೂರಾರು ಸಿಬ್ಬಂದಿಗಳು ಭಾಗವಹಿಸಿ, 'ವಿದ್ಯುಚ್ಛಕ್ತಿ ಖಾಸಗೀಕರಣ ಬೇಡ' ಎಂಬ ಘೋಷಣೆಗಳೊಂದಿಗೆ ಕಾರದ ನೀತಿಯನ್ನು ಖಂಡಿಸಿದರು.

ವಿದ್ಯುಚ್ಛಕ್ತಿ ಖಾಸಗೀಕರಣ ಮಾಡುತ್ತಿರುವುದನ್ನು ವಿರೋಧಿಸಿ ಬೆಸ್ಕಾಂ ಕಚೇರಿ ಮುಂದೆ ನೌಕರರು ಪ್ರತಿಭಟನೆ ನಡೆಸಿದರು.

## ಸಹಕಾರಿ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಅಗತ್ಯ

**ಶಿರಾ:** ಸಹಕಾರಿ ಕ್ಷೇತ್ರದಲ್ಲಿ ನಿಷ್ಠೆ ಪ್ರಾಮಾಣಿಕತೆ ಇದ್ದರೆ ಯಶಸ್ಸು ಸಾಧಿಸಲು ಸಾಧ್ಯ ಎಂದು ಮಾಜಿ ಸಹಕಾರಿ ಸಚಿವ, ತುಮಕೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್.ರಾಜಣ್ಣ ಹೇಳಿದರು.

ಅವರು ಗುರುವಾರ ಶಿರಾ ತಾಲೂಕಿನ ತರೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಗೋದಾಮು ಕಟ್ಟಡ ಉದ್ಘಾಟನೆ ಹಾಗೂ ಕೆಸಿಸಿ ಸಾಲ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರೈತರನ್ನು ಆರ್ಥಿಕವಾಗಿ ಸದೃಢನಾಗಿ ಮಾಡುವಲ್ಲಿ ಸಹಕಾರಿ ಸಂಘಗಳ ಪಾತ್ರ ಅತ್ಯಂತ ಮಹತ್ವದ್ದು ಎಂದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಜಿ.ಎಸ್.ರವಿ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಿ.ಜೆ.ರಾಜಣ್ಣ ಮಾತನಾಡಿದರು.

ತರೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಿಕ್ಕಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಕಾರಿ ಸಂಘಗಳ ಉಪ ನಿಬಂಧಕ ಎಚ್. ಮೂರ್ತಿ,ನಬಾರ್ಡನ ಸಾಯಿ ಗಣೇಶ್, ಮಹಾಪ್ರಬಂದಕ ಪಿ.ಎಸ್.ರಾಮಕೃಷ್ಣ ನಾಯಕ, ಶಿರಾ ಡಿ ಡಿ ಸಿ ಸಿ ಬಿ ಮೇಲ್ವಿಚಾರಕರಾದ ಎನ್. ಸಿ. ವಿಠಲ, ಎಚ್. ಎಂ. ಜನಾರ್ಧನ , ಡಿಸಿಸಿ ಬ್ಯಾಂಕ್ ಆರ್ಥಿಕ ಸಲಹೆಗಾರ ರಮಣ ರೆಡ್ಡಿ, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಎನ್. ಮೂರ್ತಿ,ತರೂರು ಪ್ರಾಥಮಿಕ ಕೃಷಿ ಪತ್ತಿನ ಸಂಘದ ಉಪಾಧ್ಯಕ್ಷ ಬಿ.ಎನ್.ರಾಮಸ್ವಾಮಿ, ನಿರ್ದೇಶಕರಾದ ಎಚ್. ಎನ್. ನಾರಾಯಣಪ್ಪ, ಗಂಗಾಧರಯ್ಯ, ಸೋಮಣ್ಣ, ರಂಗನಾಥಪ್ಪ, ದೊಡ್ಡ ಹೊನ್ನಪ್ಪ, ಅಶ್ವತ್ಥಯ್ಯ, ಟಿ.ಲಿಂಗಯ್ಯ ರಂಗಮ್ಮ, ಇಂದಿರಮ್ಮ, ಜಯಲಕ್ಷ್ಮೀ, ಕಾರ್ಯದರ್ಶಿ ಬಿ.ಕೆ.ತಿಮ್ಮಣ್ಣ, ಮುಖಂಡ ಮುಕುಂದಪ್ಪ ಹಾಜರಿದ್ದರು.


ಸಂಘದ ನೂತನ ಗೋದಾಮು ಕಟ್ಟಡ ಉದ್ಘಾಟಿಸಿ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರು ಮಾತನಾಡಿದರು.

## ವಸತಿಗಳ ಹಕ್ಕುಪತ್ರ ವಿತರಣೆಗೆ ಪಪಂ ಕ್ರಮ

**ಕೋಲಾರ:** ಶಾಸಕರು ಮತ್ತು ಜನಪ್ರತಿನಿಧಿಗಳ ಜತೆಗೆ ಚರ್ಚೆ ಮಾಡಿ ಸ್ವಾಧೀನದಲ್ಲಿರುವ ಜನತೆಗೆ ಹಕ್ಕುಪತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುವುದೆಂದು ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಸಿ.ಎಸ್.ವೆಂಕಟೇಶ್ ಹೇಳಿದರು. ಚನ್ನಪ್ಪನಹಳ್ಳಿ,ವೇಮಗಲ್,ಪುರಹಳ್ಳಿ,ಪರ್ಜೇನಹಳಿ ,ಶಿಂಗೇಹಳ್ಳಿ, ಕಲ್ವ, ಚಿಕ್ಕವಲ್ಲಬ್ಬಿ, ಮಂಜಲಿ ಮತ್ತು ಬೆಟ್ಟಹೊಸಪುರದಲ್ಲಿ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ, ಎರಡ್ಮೂರು ತಲೆಮಾರುಗಳಿಂದ ಮನೆಗಳಲ್ಲಿ ವಾಸ ಆಗಿದ್ದರೂ ಹಕ್ಕುಪತ್ರ ಇಲ್ಲದೆ ಸರ್ಕಾರ ಮತ್ತು ಬ್ಯಾಂಕ್ನಿಂದ ಸೌಲಭ್ಯ ಪಡೆದುಕೊಳ್ಳಲು ಸಾಧ್ಯವಾಗದಿರುವ ಕುರಿತು ದೂರುಗಳು ಬಂದಿದ್ದು ಹೀಗಾಗಿ ಸದರಿ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಜನಪ್ರತಿನಿಧಿಗಳ ಜತೆಗೆ ಚರ್ಚೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆಂದರು. 17 ವಾರ್ಡ್ ಗಳ ಅಭಿವೃದ್ಧಿಗೆ 1.60 ಕೋಟಿ ರು. ವಿನಿಯೋಗಿಸಲಾಗುತ್ತಿದ್ದು ಮೂಲ ಸೌಲಭ್ಯಕ್ಕೆ ಒತ್ತು ನೀಡಲಾಗುತ್ತಿದೆ. ಅಭಿವೃದ್ಧಿಯಲ್ಲಿ ರಾಜಕೀಯ ಬೆರೆಸದೆ ಎಲ್ಲ ಸದಸ್ಯರೂ ಒಗ್ಗೂಡಿ ಪಟ್ಟಣ ಪಂಚಾಯತಿ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ ಎಂದು ಉಪಾಧ್ಯಕ್ಷ ಸಿ.ಎಸ್.ವೆಂಕಟೇಶ್ ತಿಳಿಸಿದರು.

ಕಾಮಗಾರಿಗಳಿಗೆ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಸಿ.ಎಸ್.ವೆಂಕಟೇಶ್ ಚಾಲನೆ ನೀಡಿದರು.

ಮುಖ್ಯಾಧಿಕಾರಿ ವೆಂಕಟೇಶ್ ಮಾತನಾಡಿ, ಹೊಸದಾಗಿ ಪಟ್ಟಣ ಪಂಚಾಯತಿ ಆಗಿರುವುದರಿಂದಾಗಿ ಜನರ ನಿರೀಕ್ಷೆ ಹೆಚ್ಚಾಗಿದ್ದು ಹೀಗಾಗಿ ಆದ್ಯತೆಯ ಮೇರೆಗೆ ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ. ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿಶೇಷ ಅನುದಾನವನ್ನು ತರುವ ಮೂಲಕ ಪಟ್ಟಣ ಪಂಚಾಯತಿಯನ್ನು ರಾಜ್ಯದಲ್ಲೇ ಪ್ರಥಮ ಸ್ಥಾನಕ್ಕೆ ತರಲು ಪ್ರಯತ್ನಿಸಲಾಗುತ್ತಿದೆ. ಸಾರ್ವಜನಿಕರೂ ಸಹಾ ಸಮರ್ಪಕವಾಗಿ ತೆರಿಗೆಯನ್ನು ಪಾವತಿ ಮಡುವ ಮೂಲಕ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮುಖ್ಯಾಧಿಕಾರಿ ವೆಂಕಟೇಶ್ ಮನವಿ ಮಾಡಿದರು.

ಅಧ್ಯಕ್ಷೆ ಡಿ.ಅನುಷಾ, ಸದಸ್ಯರಾದ ಅಂಜಲಿ, ಬಿ.ಎನ್.ರಾಮು, ಕೆ.ಎಂ.ರವಿಚಂದ್ರ, ಎಂ. ಲೋಕೇಶ್, ಜಿ.ಮಂಜುಳಾ, ವಿ.ಕೆ.ಸುಬ್ರಮಣ್ಯಂ, ಕೆ.ಎಸ್.ರಮೇಶ್, ತಾಸುಫ್ಞಾನ್, ಗಂಗಪ್ಪ, ಎಸ್ .ವಿ.ಮುನಿರಾಜ್, ಎಂ.ಶಿಲ್ಪ, ವಿ.ಎಂ.ನಾಗೇಶ್, ಪಿ.ದೀಪ, ಎಸ್.ಸುಜಾತಮ್ಮ, ಎಂ.ಶಶಿಕಲಾ, ವಿ.ಎನ್.ನಟರಾಜ್, ಸನಾವುಲ್ಲಾ ಖಾನ್ ಮತ್ತು ತಿರುಮಳಪ್ಪ ಇದ್ದರು.

## ಸರಕಾರಿ ಶಾಲೆ ಮುಚ್ಚುವುದನ್ನು ವಿರೋಧಿಸಿ ಪ್ರತಿಭಟನೆ

**ತುಮಕೂರು:** ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಸರಕಾರಿ ಶಾಲೆ ಮುಚ್ಚುವುದನ್ನು ವಿರೋಧಿಸಿ ತಾಲ್ಲೂಕಿನ ಕೊತ್ತಿಹಳ್ಳಿ, ಅಗಳಕೋಟೆ ಗ್ರಾಮಸ್ಥರು ಎಐಡಿಎಸ್ಒ ನೇತೃತ್ವದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಊರಿನಲ್ಲಿ ಒಂದು ಶಾಲೆ ಇದ್ದಾಗ ಮಾತ್ರ ಆ ಊರು ಪರಿಪೂರ್ಣ ಆಗುತ್ತದೆ. ಹಿರಿಯರ ಹೋರಾಟದ ಫಲವಾಗಿ ಇಲ್ಲಿ ಸರಕಾರಿ ಶಾಲೆ ಆರಂಭಿಸಲಾಗಿದೆ. ಈಗ ಯಾವುದೇ ಕಾರಣಕ್ಕೂ ಮುಚ್ಚಲು ಬಿಡುವುದಿಲ್ಲ ಎಂದು ಕೊತ್ತಿಹಳ್ಳಿಯ ಕೆ.ವಿ.ಶಶಿಕಲಾ ಹೇಳಿದರು.

ಅಗಳಕೋಟೆಯ ವಿ.ಮಮತಾ ಮಾತನಾಡಿ, ಹೆಂಚಿನ ಶಾಲೆಯನ್ನು ತುಂಬಾ ಕಷ್ಟಪಟ್ಟು ಅಭಿವೃದ್ಧಿ ಪಡಿಸಲಾಗಿದೆ ಎಂದು ಅವರು ತಿಳಿಸಿದರು. ಎಐಡಿಎಸ್ಒ ಜಿಲ್ಲಾ ಕಾರ್ಯದರ್ಶಿ ಸಿ.ಬಿ.ಲಕ್ಕಪ್ಪ ಇತರರು ಹಾಜರಿದ್ದರು.

## ಜೆಡಿಎಸ್ ತಾ.ಅಧ್ಯಕ್ಷ ಸ್ಥಾನಕ್ಕೆ ಸತ್ಯಪ್ರಕಾಶ್ ರಾಜೀನಾಮೆ

**ಶಿರಾ:** ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ಬಿ.ಎಸ್.ಸತ್ಯಪ್ರಕಾಶ್ ರಾಜೀನಾಮೆ ನೀಡಿದ್ದಾರೆ. ಮಾಜಿ ಸಚಿವ ಬಿ.ಸತ್ಯನಾರಾಯಣ ಅವರ ಪುತ್ರ ಬಿ.ಎಸ್.ಸತ್ಯಪ್ರಕಾಶ್ ಅವರನ್ನು 2024ರ ವಿಧಾನಸಭೆ ಚುನಾವಣೆ ವೇಳೆ ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. ವೈಯಕ್ತಿಕ ಕಾರಣ ಹಾಗೂ ಪಕ್ಷದಲ್ಲಿನ ಆಂತರಿಕ ವಿಚಾರಗಳಿಂದ ಬೇಸತ್ತು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಸತ್ಯಪ್ರಕಾಶ್ ಖಚಿತ ಪಡಿಸಿದ್ದಾರೆ. ಜೆಡಿಎಸ್ ಜಿಲ್ಲಾ ಘಟಕದ ನೂತನ ಅಧ್ಯಕ್ಷ ಎಚ್.ನಿಂಗಪ್ಪ ಅವರಿಗೆ ರಾಜೀನಾಮೆ ಪತ್ರ

ಕಳುಹಿಸಿದ್ದು, ಎರಡು ದಿನದೊಳಗೆ ಖುದ್ದಾಗಿ ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸುವುದಾಗಿ ತಿಳಿಸಿದ್ದಾರೆ. ತಾಲ್ಲೂಕಿನಲ್ಲಿ ಜೆಡಿಎಸ್ ಬೆಳವಣಿಗೆಗೆ ಮಾಜಿ ಸಚಿವ ಬಿ.ಸತ್ಯನಾರಾಯಣ ಅವರ ಕೊಡುಗೆ ಅಪಾರ. ಪಕ್ಷ ನಿಷ್ಠರಾಗಿದ್ದ ಅವರು ಜೀವಿತಾವಧಿ ಯವರೆಗೂ ಎಚ್.ಡಿ.ದೇವೇಗೌಡರಿಗೆ ನಿಷ್ಠರಾಗಿದ್ದರು. ಇವರ ನಿಧನ ನಂತರ ನಡೆದ 2020ರ ಉಪಚುನಾವಣೆಯಲ್ಲಿ ಸತ್ಯನಾರಾಯಣ ಅವರ ಪತ್ನಿ ಅಮ್ಮಾಜಮ್ಮ ಅವರಿಗೆ ಜೆಡಿಎಸ್ ಟಿಕೆಟ್ ನೀಡಿತ್ತು.

## ನಂದಿ ಜಾತ್ರೆಗೆ ಉಚಿತ ಆಟೋ ಸೇವೆ

**ಚಿಕ್ಕಬಳ್ಳಾಪುರ:** ತಾಲ್ಲೂಕಿನ ಐತಿಹಾಸಿಕ ಧಾರ್ಮಿಕ ಕ್ಷೇತ್ರ ನಂದಿ ಗ್ರಾಮದ ಭೋಗನಂದೀಶ್ವರ ರಥೋತ್ಸವವು ಇದೇ ತಿಂಗಳ 16ರಂದು ನಡೆಯಲಿದ್ದು, ಭಕ್ತರಿಗೆ ಹೋಗಿಬರಲು ಅನುಕೂಲವಾಗುವಂತೆ ನಂದಿ ಗ್ರಾಮಕ್ಕೆ ಉಚಿತ ಆಟೋ ಸೇವಾ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂದು ಶ್ರೀ ಹರಿಕೃಷ್ಣ ಫೌಂಡೇಶನ್ ಅಧ್ಯಕ್ಷ ಹಾಗೂ ಸಮಾಜಸೇವಕ ಬಿಜೆಪಿ ಯುವ ಮುಖಂಡ ಆನೆಮಡುಗು ಹರೀಶ್ರೆಡ್ಡಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಹಾ ಶಿವರಾತ್ರಿ ಹಾಗೂ ನಂದಿ ಜಾತ್ರೆ ಅಂಗವಾಗಿ ಉಚಿತ ಆಟೋ ಸೇವೆ ಕುರಿತು ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲೇ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಭೋಗನಂದೀಶ್ವರ ಜೋಡಿ ಬ್ರಹ್ಮ ರಥೋತ್ಸವವು ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಭಕ್ತಿಭಾವದಿಂದ ನಡೆಯುತ್ತದೆ.ಸುತ್ತಮುತ್ತಲಿನ ಪ್ರದೇಶಗಳಷ್ಟೇ ಅಲ್ಲದೆ ಇತರೆ ಜಿಲ್ಲೆಗಳಿಂದಲೂ ಸಹಸ್ರಾರು ಮಂದಿ ಭಕ್ತರು ಆಗಮಿಸಿ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಭಕ್ತಿ ಪ್ರದರ್ಶಿಸುತ್ತಾರೆ.

ಚಿಕ್ಕಬಳ್ಳಾಪುರ ನಗರದ ಜನರಿಗೆ ಅನುಕೂಲವಾಗುವ ಉದ್ದೇಶದಿಂದ ಖಾಸಗಿ ಬಸ್ ನಿಲ್ದಾಣದಿಂದ 10 ಆಟೋಗಳು, ಜೂನಿಯರ್‌ಕಾಲೇಜು ನಿಲ್ದಾಣದಿಂದ 10 ಆಟೋಗಳು ಹಾಗೂ ನಂದಿ ಕ್ರಾಸ್ನಿಂದ 5 ಆಟೋಗಳನ್ನು ವ್ಯವಸ್ಥೆ ಮಾಡಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಶ್ರೀ ಹರಿಕೃಷ್ಣ ಫೌಂಡೇಶನ್ ಅಧ್ಯಕ್ಷ ಹಾಗೂ ಸಮಾಜಸೇವಕ ಬಿಜೆಪಿ ಯುವ ಮುಖಂಡ ಆನೆಮಡುಗು ಹರೀಶ್ರೆಡ್ಡಿ ಅವರು ಮಾತನಾಡಿದರು.

ಮಹಾಶಿವರಾತ್ರಿಯ ಭಾನುವಾರ ಮತ್ತು ಮರುದಿನದ ಸೋಮವಾರದ ರಥೋತ್ಸವದವರೆಗೆ ಎರಡು ದಿನಗಳ ಕಾಲ ಈ ಉಚಿತ ಆಟೋ ಸೇವೆ ಲಭ್ಯವಿರುತ್ತದೆ. ಶಿವರಾತ್ರಿ ದಿನ ಸಂಜೆ 6 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಹಾಗೂ ಮರುದಿನ ಜಾತ್ರಾ ಮಹೋತ್ಸವದಂದು ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಆಟೋ ಸೌಲಭ್ಯ ಲಭ್ಯವಿರುತ್ತದೆ ಎಂದು ಮಾಹಿತಿ ನೀಡಿದರು.

ಶಿವನು ಸತ್ಯ,ನ್ಯಾಯ ಮತ್ತು ನಿರ್ಭಯತೆಯ ಪ್ರತೀಕ. ಸಂಕಷ್ಟದ ಸಂದರ್ಭದಲ್ಲಿಯೂ ಶಾಂತವಾಗಿರಲು ಮತ್ತು ಎಲ್ಲರ ಮೇಲೂ ಕರುಣೆ ತೋರಿಸಲು ಶಿವನ ಆದರ್ಶಗಳು ನಮಗೆ ಪಾಠ ಕಲಿಸುತ್ತವೆ. ಸಮಾಜದ ಕಲ್ಯಾಣ ಮತ್ತು ಸೌಹಾರ್ದತೆಗೆ ಶಿವನ ಸಂದೇಶಗಳು ಪ್ರೇರಣೆಯಾಗಿವೆ ಎಂದರು.

ನಿಜವಾದ ದೈವಭಕ್ತಿ ಎಂದರೆ ಮಾನವಸೇವೆ.ಆ ನಿಟ್ಟಿನಲ್ಲಿ ನಂದಿ ರಥೋತ್ಸವದ ಅಂಗವಾಗಿ ಜನಸೇವೆಯ ರೂಪದಲ್ಲಿ ನನ್ನ ಅಳಿಲು ಸೇವೆಯನ್ನು ಸಲ್ಲಿಸುತ್ತಿದ್ದೇನೆ ಎಂದು ಹರೀಶ್ ರೆಡ್ಡಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮುರಳಿ,ಕೇಶವ ರೆಡ್ಡಿ,ವಿನಯ್,ನಾಗಾರ್ಜುನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕಾರ್ಮಿಕ ವಿರೋಧಿ ಕಾನೂನು ಹಿಂಪಡೆಯಿರಿ

**ಗೌರಿಬಿದನೂರು:** ಕೇಂದ್ರ ಸರಕಾರ ತಂದಿರುವ ನಾಲ್ಕು ಕಾರ್ಮಿಕ ವಿರೋಧಿ ಕಾನೂನುಗಳನ್ನು ಹಿಂಪಡಿಯಬೇಕು ಎಂದು ಕಾಮ್ರೇಡ್ ಸಿದ್ದಗಂಗಪ್ಪ ಕೇಂದ್ರ ಸರಕಾರವನ್ನು ಆಗ್ರಹಿಸಿದರು.

ಅವರು ನಗರದ ಅಂಬೇಡ್ಕರ್‌ವೃತ್ತದಲ್ಲಿ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು,ರೈತರು ಕಾರ್ಮಿಕರನ್ನು ಒಳಗೊಂಡ ಸಿಐಟಿಯು ಕಾರ್ಯಕರ್ತರು ಸರ್ಕಾರಗಳ ವಿರುದ್ಧ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು. ಕೇಂದ್ರ ಸರ್ಕಾರ ಕಾರ್ಮಿಕರ ಸ್ವತಂತ್ರ ಹರಣ ಮಾಡಲು 1948 ಕಾರ್ಮಿಕರ ಕಾನೂನುಗಳಿಗೆ ನಾಲ್ಕು ಕೋಡ್ ಗಳನ್ನು ಹೊಸದಾಗಿ ಸೇರಿಸುವ ಮೂಲಕ ಕಾರ್ಮಿಕರ ಸ್ವತಂತ್ರ ಹರಣ ಮಾಡಲು ಮುಂದಾಗಿದೆ.ಸದರಿ ನಾಲ್ಕು ಕೋಡ್ ಗಳನ್ನು ಈ ಕೂಡಲೆ ರದ್ದು ಪಡಿಸಬೇಕೆಂದು ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ಕೇಂದ್ರ ಸರ್ಕಾರ ಬೀಜ,ವಿದ್ಯುತ್ ಮುಂತಾರ ರಂಗಗಳಲ್ಲಿ ಮಾಡುತ್ತಿರುವ ಅನ್ಯಾಯವನ್ನು ಖಂಡಿಸಿ ಇಂದು ಸುಮಾರು ಹದಿನಾಲ್ಕು ಕೇಂದ್ರ ಕಾರ್ಮಿಕ ಸಂಘಟನೆಗಳು ದೇಶ ವ್ಯಾಪ್ತಿ ಪ್ರತಿಭಟನೆಗೆ ಕರೆ ನೀಡಿದೆ, ಅಂಗನವಾಡಿ, ಆಶಾ,ಪಂಚಾಯಿತಿ ಕಾರ್ಯಕರ್ತರೊಂದಿಗೆ ಸುಮಾರು 35 ಕೋಟಿಗೂ ಹೆಚ್ಚು ಮಂದಿ ಇಂದಿನ ಮುಷ್ಕರದಲ್ಲಿ ಭಾಗವಹಿಸುತ್ತಿದ್ದಾರೆ. ಮಹಾತ್ಮ ಗಾಂದೀ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಜಿ ರಾಂಜಿ ಯೋಜನೆ ಮಾಡುತ್ತಿರುವುದು ಗ್ರಾಮೀಣ ಕೂಲಿ ಕಾರ್ಮಿಕರಿಗೆ ಮಾಡುತ್ತಿರುವ ಅನ್ಯಾಯ ಎಂದರು. ಮೋದೀಜಿ ಸರ್ಕಾರ ರೈತರ ಫಲವತ್ತಾದ ಭೂಮಿಯನ್ನು ಕಬಳಿಸಿ ಕಡಿಮೆ ಬೆಲೆಗೆ ಮೋದಿ ಆಪ್ತರಾದ ಅಂಬಾನಿ,ಅದಾನಿ ಮುಂತಾದ ಉದ್ಯಮಿಗಳಿಗೆ ನೀಡುತ್ತಿರುವುದು ಖಂಡನೀಯ ಎಂದರು.

## ಸಮಾಚಾರ ಸಣ್ಣದಲ್ಲ

### ಉಚಿತ ಕಾನೂನು ನೆರವು ಕಾರ್ಯಕ್ರಮ

**ತುಮಕೂರು:** ನಗರದ ಕೋತಿ ತೋಪು ರಸ್ತೆಯಲ್ಲಿರುವ ಪಾವನ ಆಸ್ಪತ್ರೆಯಲ್ಲಿ ಬುಧವಾರದಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ತುಮಕೂರು ವತಿಯಿಂದ ಉಚಿತ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಪ್ಯಾರಾ ಲೀಗಲ್ ವಾಲೆಂಟಿಯರ್ ಕೆ ಎಂ ರಾಮಕೃಷ್ಣಯ್ಯ ರವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಪತಿ-ಪತ್ನಿ ಗಲಾಟೆ, ಜಮೀನು ವ್ಯಾಜ್ಯ, ಅಪಘಾತ, ಇನ್ನು ಅನೇಕ ಸಮಸ್ಯೆಗಳಿಗೆ ಕಾನೂನು ಸೇವೆ ಪ್ರಾಧಿಕಾರ ಉಚಿತ ಕಾನೂನು ನೆರವನ್ನು ನೀಡುತ್ತಿದೆ ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ಆಸ್ಪತ್ರೆಯಲ್ಲಿರುವ ಸಿಬ್ಬಂದಿಗಳಿಗೆ ತಿಳಿಸಲಾಯಿತು. ಈ ಸಂದರ್ಭದಲ್ಲಿ ಪಾವನ ಆಸ್ಪತ್ರೆಯ ಮುಖ್ಯಸ್ಥ ಡಾ. ಡಿ ಮುರುಳೀಧರ್ ಸೇರಿದಂತೆ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

### ಯುಗಾದಿ ಹಾಸ್ಯಗೋಷ್ಠಿ ಹಾಸ್ಯಪಟುಗಳಿಗೆ ಆಹ್ವಾನ

**ತುಮಕೂರು:** ಪ್ರತಿ ವರ್ಷ ಎಪ್ರಿಲ್ 1ರಂದು ಮೂರ್ಖರ ದಿನಾಚರಣೆ ನಡೆಸಿಕೊಂಡು ಬರುತ್ತಿರುವ ಹಾಸ್ಯ ಸಾಹಿತಿ ದಿ.ಗೌಡನಕಟ್ಟೆ ತಿಮ್ಮಯ್ಯನವರು ಸ್ಥಾಪಿಸಿರುವ ನಗೆಮಲ್ಲಿಗೆ ಸಂಸ್ಥೆಯು ಈ ಬಾರಿ ಮೂರ್ಖರ ದಿನಾಚರಣೆಗೆ ಮುನ್ನ ಯುಗಾದಿ ಹಾಸ್ಯಗೋಷ್ಠಿ ಸ್ಪರ್ಧೆ ಏರ್ಪಡಿಸಿದೆ ಎಂದು ಸಂಸ್ಥೆ ಅಧ್ಯಕ್ಷೆ ಬಾ.ಹ.ರಮಾಕುಮಾರಿ ತಿಳಿಸಿದ್ದಾರೆ. ಸ್ಥಳೀಯ ಹಾಸ್ಯ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ನಗೆಮಲ್ಲಿಗೆ ಸಂಸ್ಥೆ ವೇದಿಕೆ ಕಲ್ಪಿಸಲಿದೆ. ಹಾಸ್ಯ ಕವನ, ಹನಿಗವನ, ಅಣಕವಾಡು, ಹಾಸ್ಯ ಪ್ರಸಂಗ, ಉತ್ತಮ ನಗೆಹನಿ, ಹಾಸ್ಯ ಅಭಿನಯ ಹೀಗೆ ಪ್ರೇಕ್ಷಕರನ್ನು ರಂಜಿಸಬಹುದಾದ ಯಾವುದೇ ನಗೆ ಪ್ರಾಕಾರಗಳನ್ನು ಸ್ಪರ್ಧೆಯಲ್ಲಿ ವಾಚನ ಅಥವಾ ಪ್ರದರ್ಶನ ಮಾಡಬಹುದು. ವಯೋಮಿತಿಯ ನಿಬಂಧವಿಲ್ಲ, ಪ್ರೇಕ್ಷಕರನ್ನು ನಗಿಸಬಲ್ಲೆ ಎಂಬ ವಿಶ್ವಾಸದ ಎಲ್ಲಾ ವಯಸ್ಸಿನ ಹಾಸ್ಯಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಆಸಕ್ತರು ಹೆಚ್ಚಿನ ವಿವರ ಹಾಗೂ ಹೆಸರು ನೋಂದಾವಣೆಗೆ ಅಧ್ಯಕ್ಷೆ ಬಾ.ಹ. ರಮಾಕುಮಾರಿ-9448694323, ಕಾರ್ಯದರ್ಶಿ ಅಬ್ಬಿನಹೊಳೆ ಸುರೇಶ್-9845118303 ಇವರನ್ನು ಇದೇ ಫೆಬ್ರವರಿ 25ರೊಳಗೆ ಸಂಪರ್ಕಿಸಬಹುದು.

### ಫೆ.16ರಂದು ಜನಸ್ಪಂದನ

**ತುಮಕೂರು:** ಜಿಲ್ಲಾಡಳಿತ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕು ಆಡಳಿತದ ವತಿಯಿಂದ ಫೆಬ್ರವರಿ 16ರಂದು ಬೆಳಿಗ್ಗೆ 8.30 ಗಂಟೆಗೆ ಚಿಕ್ಕನಾಯಕನಹಳ್ಳಿ ಸರಕಾರಿ ಪ್ರೌಢಶಾಲೆ ಮೈದಾನದಲ್ಲಿ ಜನಸ್ಪಂದನದ ಯಶಸ್ವಿ 100ನೇ ವಾರದ ಆಚರಣಾ ಸಮಾರಂಭ, ಸರಕಾರಿ ವಿವಿಧ ಸವಲತ್ತುಗಳ ವಿತರಣೆ ಹಾಗೂ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಆದಿಚುಂಚನಗಿರಿ ಮಠದ ಜಗದ್ಗುರು ಡಾ: ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ದಿವ್ಯ ಸಾನಿಧ್ಯ ವಹಿಸಲಿದ್ದು, ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕಾ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸುವರು. ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಸರಕಾರಿ ವಿವಿಧ ಸವಲತ್ತುಗಳ ವಿತರಣೆ ಮಾಡುವರು. ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಕಾರ್ಯಕ್ರಮವನ್ನು ಉದ್ಘಾಟಿಸುವರು. ಚಿಕ್ಕನಾಯಕನಹಳ್ಳಿ ಶಾಸಕ ಸುರೇಶ್ ಬಾಬು ಸಿ.ಬಿ. ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

### ಕ್ರೀಡೆಯಿಂದ ಶಾರೀರಿಕ ಸದೃಢತೆ ಸಾಧ್ಯ

**ತುಮಕೂರು:** ಕ್ರೀಡೆ ಮನುಷ್ಯನಲ್ಲಿ ಸ್ಫೂರ್ತಿಯನ್ನು ನೀಡುತ್ತಿದೆ. ಕ್ರೀಡೆಯಿಂದ ಹೊಸ ಹುಮ್ಮಸ್ಸು ಬರುವುದಲ್ಲದೆ, ಎಲ್ಲರೂ ಸೇರಿ ಒಂದು ತಂಡವಾಗಿ ಕೆಲಸ ಮಾಡಲು ಸಹಕಾರಿಯಾಗಲಿದೆ ಎಂದು ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್.ಕೆ.ವಿ. ತಿಳಿಸಿದರು. ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಬೆಂಗಳೂರು ವಿಭಾಗೀಯ ಮಟ್ಟದ ಸಮಾಜ ಕಲ್ಯಾಣ ಇಲಾಖೆ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿ ಮಾತನಾಡುತಿದ್ದ ಅವರು, ಇತ್ತೀಚಿನ ದಿನಗಳಲ್ಲಿ ಕ್ರೀಡಾ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿವೆ. ನಮ್ಮ ಇಲಾಖೆಯಲ್ಲಿ ಪ್ರತಿವರ್ಷ ಕ್ರೀಡಾಕೂಟ ಏರ್ಪಡಿಸಲಾಗುತ್ತಿದೆ. ಇದು ನಿಮಗೆ ಎರಡನೇ ವರ್ಷದ ಕ್ರೀಡಾಕೂಟ. ನಿಮ್ಮಲ್ಲಿರುವ ಪ್ರತಿಭೆ ಪ್ರದರ್ಶನಕ್ಕೆ ಇದು ಒಳ್ಳೆಯ ವೇದಿಕೆ ಇದನ್ನು ಬಳಕೆ ಮಾಡಿಕೊಂಡು, ಮತ್ತಷ್ಟು ಉತ್ಸಾಹದಿಂದ ವೃತ್ತಿ ಜೀವನದಲ್ಲಿ ಮೇಲೆ ಬರಲು ಪ್ರಯತ್ನಿಸಿ ಎಂದರು. ಅಪರ ಜಿಲ್ಲಾಧಿಕಾರಿ ಡಾ.ಎನ್.ತಿಪ್ಪೇಸ್ವಾಮಿ ಮಾತನಾಡಿದರು. ವೇದಿಕೆಯಲ್ಲಿ ತುಮಕೂರು ಉಪವಿಭಾಗಾಧಿಕಾರಿ ನಾಹಿದ್ ಜಮ್ಜ್ ಜಮ್ಜ್,ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಲಕ್ಷ್ಮಣರೇಖಿ, ಕೃಷ್ಣಪ್ಪ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು,ನೌಕರರು ಪಾಲ್ಗೊಂಡಿದ್ದರು.

ವಿರಾಮ
ಪ್ರತಿ ಭಾನುವಾರ

{ ಆರ್.ಅಶೋಕ್ } ಪ್ರತಿಪಕ್ಷದ ನಾಯಕ

**ಶಾಸಕರು ವಿದೇಶ ಪ್ರವಾಸ ಮಾಡುತ್ತಿದ್ದಾರೆ. ಸಿಎಂ ಕುರ್ಚಿ ಮ್ಯೂಸಿಕಲ್ ಚೇರ್‌ನಡುವೆ ವಿದೇಶ ಪ್ರವಾಸ. ಸರಕಾರ ದಿವಾಳಿ ಆಗಿದೆ, ತಮಗೇನೂ ಕೆಲಸ ಇಲ್ಲ ಅಂತ ವಿದೇಶಕ್ಕೆ ಶಾಸಕರು ಹೊರಟಿದ್ದಾರೆ. ಯಾರ ಪರವಾಗಿ ಈ ಫಾರೀನ್ ಟ್ರೂ?. ಸಿದ್ದರಾಮಯ್ಯ ಮುಂದುವರೆಸೋಕ್ಕೋ, ಇಳಿಸೋಕ್ಕೋ? ಡಿಕೆಶಿ ಕೂರಿಸೋಕ್ಕೋ?.**

### ಹಾರ್ದಿಕ್ ಪಾಂಡ್ಯ ಆಲ್‌ರೌಂಡ್ ಪ್ರದರ್ಶನ | ಇಶಾನ್ ಕಿಶನ್ ಅರ್ಧ ಶತಕ

# ನಮೀಬಿಯಾ ಮೇಲೆ ಭಾರತದ ಸವಾರಿ

**ದೆಹಲಿ:** ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಅತಿಥೇಯ ಭಾರತವು ನಮೀಬಿಯಾವನ್ನು 93 ರನ್‌ಗಳ ಅಂತರದಲ್ಲಿ ಸೋಲಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 209 ರನ್‌ಗಳನ್ನು ಗಳಿಸಿದರೆ, ಆ ಗುರಿ ಬೆಂಬತ್ತಿದ ನಮೀಬಿಯಾ 18.2 ಓವರ್‌ಗಳಲ್ಲಿ 116 ರನ್‌ಗಳನ್ನಷ್ಟೇ ಗಳಿಸಲು ಶಕ್ತವಾಯಿತು.

ಟಾಸ್ ಗೆದ್ದ ನಮೀಬಿಯಾ ಫೀಲ್ಡಿಂಗ್ ಆಯ್ದುಕೊಂಡಿತು. ಭಾರತದ ಆರಂಭಿಕ ಆಟಗಾರ ಸಂಜು ಸ್ಯಾಮ್ಸನ್ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಆದರೆ ತಂಡದ ಮೊತ್ತ 25 ಆದಾಗ 8 ಬಾಲ್‌ಗಳಲ್ಲಿ 22 ರನ್ ಗಳಿಸಿದ್ದ ಸಂಜು ತಮ್ಮ ವಿಕೆಟ್ ಕಳೆದುಕೊಂಡರು. ಬಳಿಕ ಇಶಾನ್ ಕಿಶನ್-ತಿಲಕ್ ವರ್ಮಾ 2ನೇ ವಿಕೆಟ್‌ಗೆ 79 ರನ್‌ಗಳನ್ನು ಪೇರಿಸಿದರು. ಇಶಾನ್ ಕಿಶನ್ 24 ಬಾಲ್‌ಗಳಲ್ಲಿ 61 ರನ್‌ಗಳ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನಿರ್ವಹಿಸಿದರೆ, ತಿಲಕ್ 21 ಬಾಲ್‌ನಲ್ಲಿ 25 ರನ್ ಗಳಿಸಿ ಎರಾಸ್ಮಸ್ ಬೌಲಿಂಗ್‌ನಲ್ಲಿ ಔಟ್ ಆದರು.

ಬಳಿಕ ಬಂದ ಸೂರ್ಯಕುಮಾರ್ ಯಾದವ್ 13 ಬಾಲ್‌ಗಳಲ್ಲಿ 12 ರನ್ ಗಳಿಸಿದರು. ಆದರೆ ಹಾರ್ದಿಕ್ ಪಾಂಡ್ಯ 28 ಬಾಲ್‌ಗಳಲ್ಲಿ 52 ರನ್ ಗಳಿಸುವ ಮೂಲಕ ಭಾರತವು 200 ರನ್‌ಗಳ ಗಡಿ ದಾಟಲು ನೆರವಾದರು. ಅಕ್ಷರ್ ಪಟೇಲ್ ಯಾವುದೇ ರನ್ ಗಳಿಸಲು ವಿಫಲರಾದರೆ, ಅರ್ಷದೀಪ್ ಸಿಂಗ್ ಕೇವಲ

2 ರನ್ ಗಳಿಸಿದರು. ವರುಣ್ ಚಕ್ರವರ್ತಿ 1 ರನ್ ಮಾಡಿ ಅಜೇಯರಾಗುಳಿದರು.

ಗುರಿ ಬೆಂಬತ್ತಿದ ನಮೀಬಿಯಾ ಆರಂಭದ ವಿಕೆಟ್‌ಗೆ 31 ರನ್ ಕಲೆ ಹಾಕಿತು. ಜಾನ್ ಫ್ರೈಲಿಂಕ್ 22 ರನ್ ಗಳಿಸಿ ಅರ್ಷ್‌ದೀಪ್ ಬೌಲಿಂಗ್‌ನಲ್ಲಿ ಔಟ್ ಆದರು. ಬಳಿಕ ಲೌರೆನ್ ಸ್ಟೀನ್‌ಕ್ಯಾಂಪ್ 13 ರನ್ ಗಳಿಸಿದ್ದಾಗ ವರುಣ್ ಚಕ್ರವರ್ತಿಗೆ ವಿಕೆಟ್ ಒಪ್ಪಿಸಿದರು. ನಿಕಲ್ ಲೋಫ್ಟಿ ಈಟನ್ 13 ರನ್ ಗಳಿಸಿ ಪೆವಿಲಿಯನ್ ಸೇರದರೆ, ತಂಡದ ನಾಯಕ ಗೆಹಾರ್ಡ್ ಎರಾಸ್ಮಸ್ 11 ಬಾಲ್‌ಗಳಲ್ಲಿ 18 ರನ್ ಗಳಿಸಿ ಅಕ್ಷರ್ ಪಟೇಲ್‌ಗೆ ವಿಕೆಟ್ ಒಪ್ಪಿಸಿದರು.

ಆ ನಂತರ ಕ್ರೀಸ್‌ಗೆ ಬಂದ ಜೋಹಾನ್ಸ್ ಸ್ಮಿತ್ ಯಾವುದೇ ರನ್ ಗಳಿಸದೆ ಔಟ್ ಆದರೆ, ಮಲನ್ ಕ್ರುಗರ್ ಕೇವಲ 5 ರನ್ ಗಳಿಸಿದರು.

ಭಾರತದ ಪರ ವರುಣ್ ಚಕ್ರವರ್ತಿ 7 ರನ್ ನೀಡಿ 3 ವಿಕೆಟ್ ಗಳಿಸಿದರೆ, ಹಾರ್ದಿಕ್ ಪಾಂಡ್ಯ ಮತ್ತು ಅಕ್ಷರ್ ಪಟೇಲ್ 2 ವಿಕೆಟ್ ಪಡೆದರು.

**ಅಭಿಷೇಕ್, ರೋಹಿತ್ ದಾಖಲೆ ಸರಿಗಟ್ಟಿದ ಇಶಾನ್:** ಗುರುವಾರದ ಪಂದ್ಯದಲ್ಲಿ ಪವರ್‌ಪ್ಲೇಯ ಕೊನೆಯ ಎಸೆತದಲ್ಲಿ ಬೌಂಡರಿ ಬಾರಿಸುವ ಮೂಲಕ ಇಶಾನ್ ಕಿಶನ್ ಅರ್ಧಶತಕವನ್ನು ತಲುಪಿದರು. ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅವರು ಪವರ್ ಪ್ಲೇನಲ್ಲಿ ಅರ್ಧಶತಕವನ್ನು ತಲುಪಿದ್ದು ಇದು ಎರಡನೇ ಬಾರಿ. ಭಾರತದ ಮಾಜಿ ನಾಯಕ ರೋಹಿತ್ ಶರ್ಮಾ ಜತೆಗೆ ಅಭಿಷೇಕ್ ಶರ್ಮಾ ಕೂಡ ಪವರ್‌ಪ್ಲೇನಲ್ಲಿ ಎರಡು ಬಾರಿ ಅರ್ಧಶತಕ ತಲುಪಿದ್ದಾರೆ. ಕೆಎಲ್ ರಾಹುಲ್ ಮತ್ತು ಯಶಸ್ವಿ ಜೈಸ್ವಾಲ್ ತಲಾ ಒಮ್ಮೆ ಪವರ್‌ಪ್ಲೇನಲ್ಲಿ ಅರ್ಧಶತಕವನ್ನು ಬಾರಿಸಿದ್ದಾರೆ.

### ಕುಸಾಲ್ ಮೆಂಡಿಸ್, ದಸುನ್ ಶನಕ ಮತ್ತು ಪವನ್ ರತ್ನಾಯಕೆ ಅರ್ಧ ಶತಕ

# ಒಮಾನ್ ವಿರುದ್ಧ ಲಂಕಾಗೆ ಜಯ

**ಕೊಲಂಬೊ:** ಇಲ್ಲಿನ ಪಲ್ಲೆಕೆಲೆ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಗುರುವಾರ ನಡೆದ ಟಿ20 ವಿಶ್ವಕಪ್ ಟೂರ್ನಮೆಂಟ್‌ನ ಗ್ರೂಪ್-ಬಿ ಪಂದ್ಯದಲ್ಲಿ ಶ್ರೀಲಂಕಾ ತಂಡವು ಒಮಾನ್ ತಂಡವನ್ನು 105 ರನ್‌ಗಳಿಂದ ಸೋಲಿಸಿತು. ಲಂಕಾ ತಂಡಕ್ಕೆ ಇದು, ಈ ಟೂರ್ನಮೆಂಟ್‌ನಲ್ಲಿ ಸತತ ಎರಡನೇ ಗೆಲುವಾಗಿದೆ. ಮೊದಲ ಪಂದ್ಯದಲ್ಲಿ ನೇಪಾಳ ತಂಡವನ್ನು ಸೋಲಿಸಿದ್ದ ಅತಿಥೇಯ ತಂಡ, ಓಮನ್ ಮೇಲೆ ಭರ್ಜರಿ ಗೆಲುವು ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಲಂಕಾ 20 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ 225 ರನ್ ಗಳಿಸಿತು. ಇದು ಈ ಆವೃತ್ತಿಯ ಟಿ20 ವಿಶ್ವಕಪ್ ಇತಿಹಾಸದಲ್ಲಿ ಅತ್ಯಧಿಕ ಸ್ಕೋರ್ ಮತ್ತು ಶ್ರೀಲಂಕಾ ತಂಡದ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಎರಡನೇ ಅತ್ಯಧಿಕ ಸ್ಕೋರ್ ಆಗಿದೆ. ಒಮಾನ್ ತಂಡವು ಗುರಿ ಬೆನ್ನತ್ತಿ 20 ಓವರ್‌ಗಳಲ್ಲಿ 9 ವಿಕೆಟ್‌ಗಳ ನಷ್ಟಕ್ಕೆ ಕೇವಲ 120 ರನ್ ಗಳಿಸಿ ಹೀನಾಯವಾಗಿ ಸೋತಿತು. ಒಮಾನ್‌ನ ಮೊಹಮ್ಮದ್ ನದೀಮ್ (56 ಎಸೆತಗಳಲ್ಲಿ 53 ರನ್) ಮಾತ್ರ ತಕ್ಕಮಟ್ಟಿಗಿನ ಹೋರಾಟ ನೀಡಿದರು. ಅವರನ್ನು ಹೊರತುಪಡಿಸಿ ವಾಸಿಮ್ ಅಲಿ(27) ಮಾತ್ರ ತಂಡದಲ್ಲಿ ಎರಡಂಕಿ ಮೊತ್ತ ದಾಟಿದರು. ಈ ಗೆಲುವಿನಿಂದಾಗಿ ಲಂಕಾ ತಂಡದ ನೆಟ್ ರನ್‌ರೇಟ್ ಗಣನೀಯವಾಗಿ ಹೆಚ್ಚಾಗಿದೆ.

ಶ್ರೀಲಂಕಾ ಪರ ದುಷ್ಮಂತ ಚಮೀರಾ 19ರನ್‌ಗೆ 2 ವಿಕೆಟ್, ಮತೀಶ ತೀಕ್ಷಣ 11 ರನ್‌ಗೆ 2 ವಿಕೆಟ್, ದುನಿತ್ ವೆಲ್ಲಲಗೆ 17ಕ್ಕೆ 1, ದುಶಾನ್ ಹೇಮಂತ 45ಕ್ಕೆ 1, ಕಮಿಂಡು

ಮೆಂಡಿಸ್ 10ಕ್ಕೆ 1 ವಿಕೆಟ್ ಪಡೆದು ಮಿಂಚಿದರು.

**ಲಂಕಾ ತಂಡದ ಇನ್ನಿಂಗ್ಸ್:** ಒಮಾನ್ ತಂಡದ ನಾಯಕ ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿದರು. ಲಂಕಾ ತಂಡವು ಬ್ಯಾಟಿಂಗ್ ಆರಂಭಿಸಿ ಆಕ್ರಮಣಕಾರಿ ಆಟ ಪ್ರದರ್ಶಿಸಲ ಮುಂದಾದರೂ, 2ನೇ ಓವರ್‌ನಲ್ಲೇ ಕಮಿಲ್ ಮಿಶಾರಾ (8) ಹಾಗೂ 6ನೇ ಓವರ್‌ನಲ್ಲಿ ಪಾತುಮ್ ನಿಸ್ಸಾಂಕ(13) ವಿಕೆಟ್ ಕಳೆದುಕೊಂಡು ಆಘಾತ ಎದುರಿಸಿತ್ತು, ಆದರೆ ಆ ನಂತರ ಲಂಕಾ ಬ್ಯಾಟರ್ಸ್ ಸಿಡಿಲಬ್ಬರದ ಬ್ಯಾಟಿಂಗ್ ತೋರಿದರು.

> **ಬಿ ಗ್ರೂಪಿನಲ್ಲಿ ಲಂಕಾ ಮೇಲುಗೈ**
>
> ಈ ಸಲದ ವಿಶ್ವಕಪ್‌ನಲ್ಲಿ ಲಂಕಾ ತಂಡ ಬಿ-ಗುಂಪಿನಲ್ಲಿದ್ದು, ಈ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಆಸ್ಟ್ರೇಲಿಯಾ ಇದೇ ಗುಂಪಿನಲ್ಲಿದ್ದು, 2ನೇ ಸ್ಥಾನದಲ್ಲಿದೆ. ಜಿಂಬಾಬ್ವೆ ಕೂಡ ಆಡಿರುವ ಏಕೈಕ ಪಂದ್ಯದಲ್ಲಿ ಗೆಲುವು ಪಡೆದಿದ್ದು, 3ನೇ ಸ್ಥಾನದಲ್ಲಿದೆ. ಲಂಕಾ ತನ್ನ ಮುಂದಿನ ಪಂದ್ಯವನ್ನು ಫೆಬ್ರವರಿ 16ರಂದು ಆಸ್ಟ್ರೇಲಿಯಾ ವಿರುದ್ಧ ಆಡಲಿದೆ.

ನಾಯಕ ದಸುನ್ ಶನಕಾ ಅವರು ಕೇವಲ 20 ಎಸೆತಗಳಲ್ಲಿ 2 ಬೌಂಡರಿ, 5 ಸಿಕ್ಸರ್‌ಗಳ ಸಹಿತ 50 ರನ್ ಗಳಿಸಿ ಸ್ಫೋಟಕ ಅರ್ಧಶತಕ ಬಾರಿಸಿದರು. ಕುಸಾಲ್ ಮೆಂಡಿಸ್ ಅವರು 45 ಎಸೆತಗಳಲ್ಲಿ 7 ಬೌಂಡರಿಗಳ ಸಹಿತ 61 ರನ್ ಮತ್ತು ಪವನ್ ರತ್ನನಾಯಕೆ 28 ಎಸೆತಗಳಲ್ಲಿ 8 ಬೌಂಡರಿ, 1 ಸಿಕ್ಸರ್ ಸಹಿತ 60 ರನ್ ಗಳಿಸಿ ತಂಡದ ಸ್ಕೋರ್ 200ರ ಗಡಿ ದಾಟಲು ನೆರವಾದರು. ಕೊನೆಯಲ್ಲಿ ಕಮಿಂಡು ಮೆಂಡಿಸ್ 7 ಎಸೆತಗಳಲ್ಲಿ ಅಜೇಯ 19 ರನ್ ಗಳಿಸಿದರು. ಈ ಮೂವರೂ ಆಟಗಾರರ ಉತ್ತಮ ಪ್ರದರ್ಶನದಿಂದ ಲಂಕಾ 5 ವಿಕೆಟ್‌ಗೆ 225 ರನ್‌ಗಳ ಬೃಹತ್ ಮೊತ್ತ ಪೇರಿಸಿತ್ತು.

## ಇಟಲಿಗೆ ನೇಪಾಳ ವಿರುದ್ಧ ಭರ್ಜರಿ ಜಯ

**ಮುಂಬೈ:** ಇದೇ ಮೊದಲ ಬಾರಿಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಇಟಲಿ, ಗುರುವಾರ ತನ್ನ ಮೊದಲ ಜಯವನ್ನು ದಾಖಲಿಸಿದೆ. ಸ್ಕಾಟ್ಲೆಂಡ್ ವಿರುದ್ಧ ಸೋತ ನಂತರ, ಎರಡನೇ ಪಂದ್ಯದಲ್ಲಿ ನೇಪಾಳ ವಿರುದ್ಧ 10 ವಿಕೆಟ್‌ಗಳ ಭರ್ಜರಿ ಗೆಲುವನ್ನು ದಾಖಲಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ್ದ ನೇಪಾಳ 19.3 ಓವರ್‌ಗಳಿಗೆ 123 ರನ್‌ಗಳನ್ನು ಗಳಿಸಿತ್ತು. ಆ ಗುರಿಯನ್ನು ಹಿಂಬಾಲಿಸಿದ ಇಟಲಿ ಪರ ಜಸ್ಟಿನ್ ಮೊಸ್ಕಾ ಮತ್ತು ಆಂಥೋನಿ ಮೊಸ್ಕಾ ಸಹೋದರರು ಬ್ಯಾಟಿಂಗ್ ಆರಂಭಿಸಿ 13ನೇ ಓವರ್‌ನಲ್ಲಿ ತಮ್ಮ ತಂಡವನ್ನು ಗೆಲ್ಲಿಸಿದರು.

ಮೊದಲ ಓವರ್‌ನಲ್ಲಿ ಕರಣ್ ಕೆಸಿ ಬೌಲಿಂಗ್‌ನಲ್ಲಿ ಆಂಥೋನಿ ಸಿಕ್ಸ್ ಬಾರಿಸಿದರು. ಮೂರನೇ ಓವರ್‌ನಲ್ಲಿ ಜಸ್ಟಿನ್ ಒಂದು ಸಿಕ್ಸ್ ಮತ್ತು ಎರಡು ಬೌಂಡರಿಗಳನ್ನು ಬಾರಿಸಿದರು. ಪವರ್‌ಪ್ಲೇನಲ್ಲಿ ಈ ಸಹೋದರರು ತಂಡವನ್ನು 68 ರನ್‌ಗಳಿಗೆ ಕೊಂಡೊಯ್ದರು. ಜಸ್ಟಿನ್ 11ನೇ ಓವರ್‌ನ ನಾಲ್ಕನೇ ಎಸೆತದಲ್ಲಿ ಅರ್ಧಶತಕ ಬಾರಿಸಿದರೆ, ಆಂಥೋನಿ ಐದನೇ ಎಸೆತದಲ್ಲಿ ಅರ್ಧಶತಕ ಬಾರಿಸಿದರು. 13ನೇ ಓವರ್‌ನ ನಾಲ್ಕನೇ ಎಸೆತದಲ್ಲಿ ಇಟಲಿ ಯಾವುದೇ ವಿಕೆಟ್ ನಷ್ಟವಿಲ್ಲದೆ ಪಂದ್ಯವನ್ನು ಗೆದ್ದುಕೊಂಡಿತು. ಜಸ್ಟಿನ್ ಮೊಸ್ಕಾ

44 ಎಸೆತಗಳಲ್ಲಿ 5 ಬೌಂಡರಿ ಮತ್ತು 3 ಸಿಕ್ಸರ್‌ಗಳೊಂದಿಗೆ 60 ರನ್ ಗಳಿಸಿದರೆ, ಆಂಥೋನಿ 32 ಎಸೆತಗಳಲ್ಲಿ 3 ಬೌಂಡರಿ ಮತ್ತು 6 ಸಿಕ್ಸರ್‌ಗಳೊಂದಿಗೆ 62 ರನ್ ಗಳಿಸಿದರು.

**ನೇಪಾಳದ ಬ್ಯಾಟಿಂಗ್ ವೈಫಲ್ಯ:** ಟಾಸ್ ಗೆದ್ದ ಇಟಲಿ ಫೀಲ್ಡಿಂಗ್ ಆಯ್ದುಕೊಂಡು, ನೇಪಾಳವನ್ನು ಮೊದಲು ಬ್ಯಾಟಿಂಗ್‌ಗೆ ಕಳುಹಿಸಿತು. ಕುಶಾಲ್ ಭುರ್ತೆಲ್ (5) ತಂಡದ ಮೊತ್ತ 8 ರನ್ ಇರುವಾಗ ಔಟ್ ಆದರು. ನಂತರ ನಾಯಕ ರೋಹಿತ್ ಪೌಡೆಲ್, ಆಸಿಫ್ ಶೇಖ್ ಅವರೊಂದಿಗೆ ಎರಡನೇ ವಿಕೆಟ್‌ಗೆ 30 ಎಸೆತಗಳಲ್ಲಿ 41 ರನ್‌ಗಳ ಜತೆಯಾಟವನ್ನು ಹಂಚಿಕೊಂಡು ತಂಡವನ್ನು 49 ರನ್‌ಗಳತ್ತ ಕೊಂಡೊಯ್ದರು. ರೋಹಿತ್ 14 ಎಸೆತಗಳಲ್ಲಿ ಎರಡು ಸಿಕ್ಸರ್‌ಗಳೊಂದಿಗೆ 23 ರನ್ ಗಳಿಸಿ ಔಟ್ ಆದರೆ, ಆಸಿಫ್ 20 ಎಸೆತಗಳಲ್ಲಿ ಎರಡು ಬೌಂಡರಿಗಳೊಂದಿಗೆ 20 ರನ್ ಗಳಿಸಿದರು.

## ನಬಿಗೆ ಐಸಿಸಿಯಿಂದ ದಂಡ

**ಅಹಮದಾಬಾದ್:** ಬುಧವಾರ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದ ವೇಳೆ ಅಂಪೈರ್ ನಿರ್ಧಾರವನ್ನು ಪಾಲಿಸದಿದ್ದಕ್ಕಾಗಿ ಅಫಘಾನಿಸ್ತಾನದ ಆಲ್‌ರೌಂಡರ್ ಮೊಹಮ್ಮದ್ ನಬಿಗೆ ಪಂದ್ಯ ಶುಲ್ಕದ 15 ಪ್ರತಿಶತದಷ್ಟು ದಂಡ

ವಿಧಿಸಲಾಗಿದೆ. ಅಫ್ಘಾನ್ ಇನ್ನಿಂಗ್ಸ್‌ನ 14ನೇ ಓವರ್‌ನಲ್ಲಿ ಬೌಲರ್ ಲುಂಗಿ ಎನ್‌ಗಿಡಿ ಅವರ ಮಣಿಕಟ್ಟಿನ ಪಟ್ಟಿಯ ಕುರಿತು ನಬಿ ಅಂಪೈರ್‌ಗಳೊಂದಿಗೆ ದೀರ್ಘಕಾಲದ ವಾಗ್ವಾದದಲ್ಲಿ ತೊಡಗಿದಾಗ ಈ ಘಟನೆ ಸಂಭವಿಸಿದೆ. ಅಂಪೈರ್ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸುವ ಮೂಲಕ ಅವರು ಐಸಿಸಿ ನೀತಿ ಸಂಹಿತೆಯ ಹಂತ-1 ಉಲ್ಲಂಘಿಸಿದ್ದಾರೆ. ನಬಿ ಅಪರಾಧವನ್ನು ಒಪ್ಪಿಕೊಂಡು ಮ್ಯಾಚ್ ರೆಫರೀಸ್‌ನ ಡೇವಿಡ್ ಗಿಲ್ಬರ್ಟ್ ಪ್ರಸ್ತಾಪಿಸಿದ ಶಿಕ್ಷೆಯನ್ನು ಸ್ವೀಕರಿಸಿದರು. ಆ ಕಾರಣಕ್ಕೆ ಔಪಚಾರಿಕ ವಿಚಾರಣೆಯ ಅಗತ್ಯವಿಲ್ಲ ಎಂದು ಐಸಿಸಿ ಗುರುವಾರ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ತಿಳಿಸಿದೆ. 24 ತಿಂಗಳ ಅವಧಿಯಲ್ಲಿ ಇದು ಮೊಹಮ್ಮದ್ ನಬಿ ಅವರ ಮೊದಲ ಅಪರಾಧವಾಗಿರುವುದರಿಂದ ಅವರಿಗೆ ಒಂದು ಡಿಮೆರಿಟ್ ಪಾಯಿಂಟ್ ಅನ್ನು ಸಹ ನೀಡಲಾಗಿದೆ. ಎರಡೂ ತಂಡಗಳ ನಡುವಿನ ತೀವ್ರ ಪೈಪೋಟಿಯ ಪಂದ್ಯವು ಟೈನಲ್ಲಿ ಕೊನೆಗೊಂಡಿತು. ಅಂತಿಮವಾಗಿ ಎರಡು ಸೂಪರ್ ಓವರ್‌ಗಳ ಪೈಪೋಟಿಯಲ್ಲಿ ದಕ್ಷಿಣ ಆಫ್ರಿಕಾ ಪಂದ್ಯವನ್ನು ಗೆದ್ದುಕೊಂಡಿತ್ತು.

## ಭಾರತ-ಪಾಕಿಸ್ತಾನ ಪಂದ್ಯಕ್ಕೆ ಮಳೆ ಭೀತಿ

**ಕೊಲಂಬೊ:** ಟಿ20 ವಿಶ್ವಕಪ್‌ನಲ್ಲಿ ಭಾರತ ವಿರುದ್ಧ ಫೆ.15ರಂದು ನಿಗದಿಯಾಗಿರುವ ಭಾರತ-ಪಾಕ್ ಪಂದ್ಯಕ್ಕೆ ದಿನಗಣನೆ ಆರಂಭವಾಗಿದೆ. ಹೀಗಿದ್ದರೂ ಹವಾಮಾನ ವೈಪರೀತ್ಯದ ಕಾರಣದಿಂದ ಪಂದ್ಯ ನಡೆಯುವುದು ಅನುಮಾನ ಎಂದೂ ಹೇಳಲಾಗುತ್ತಿದೆ.

ಕೊಲಂಬೊದಲ್ಲಿ ಸತತವಾಗಿ ಮಳೆಯ ವಾತಾವರಣವಿದ್ದು, ಹಲವಾರು ಅಭ್ಯಾಸ ಪಂದ್ಯಗಳೂ ಸಹ ಮಳೆಯಿಂದ ರದ್ದಾಗಿವೆ. ಇದೀಗ ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯಕ್ಕೆ ಭಾರೀ ಮಳೆಯ ಭೀತಿ ಎದುರಾಗಿದೆ. ಭಾನುವಾರದ ಮೊದಲು ಕೊಲಂಬೊದಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ, ಹಾಗೆಯೇ ಪಂದ್ಯಕ್ಕೆ ಮುನ್ನಾದಿನ ಫೆಬ್ರವರಿ 14ರಂದು, ಭಾರೀ ಮಳೆಯಾಗುವ ಸಾಧ್ಯತೆ 65%ರಷ್ಟಿದೆ.

ಹವಾಮಾನ ಕೇಂದ್ರದ ಅಧಿಕಾರಿಗಳ ಪ್ರಕಾರ, ಫೆಬ್ರವರಿ 15 ರ ಭಾನುವಾರ ಕೊಲಂಬೊದಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಶೇ. 50ರಷ್ಟು ಇದೆ. ಸ್ಥಳೀಯ ಸಮಯ ಸಂಜೆ 6

ಗಂಟೆಗೆ ಗುಡುಗು ಸಹಿತ ಮಳೆ ಆರಂಭವಾಗುವ ಸಾಧ್ಯತೆ ರುವ ಕಾರಣಕ್ಕಾಗಿ, ಬಹುನಿರೀಕ್ಷಿತ ಪಂದ್ಯ ವಿಳಂಬವಾಗಿ ಆರಂಭವಾಗಬಹುದು. ಒಂದೊಮ್ಮೆ ಮಳೆ ಬಂದು ಪಂದ್ಯ ರದ್ದಾದರೆ ಉಭಯ ತಂಡಗಳಿಗೂ ತಲಾ ಒಂದೊಂದು ಅಂಕ ಹಂಚಲಾಗುತ್ತದೆ.

ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣವು ಈಗಾಗಲೇ ಶ್ರೀಲಂಕಾ-ಐರ್ಲೆಂಡ್ ಮತ್ತು ಆಸ್ಟ್ರೇಲಿಯಾ-ಐರ್ಲೆಂಡ್ ಪಂದ್ಯಗಳನ್ನು ಆಯೋಜಿಸಿದೆ. ಭಾನುವಾರ ಭಾರತ-ಪಾಕಿಸ್ತಾನ ವಿರುದ್ಧದ ಪಂದ್ಯಕ್ಕೂ ಮೊದಲು ಆಸ್ಟ್ರೇಲಿಯಾ-ಜಿಂಬಾಬ್ವೆ ಮುಖಾಮುಖಿಯನ್ನೂ ಆಯೋಜಿಸಲಿದೆ.

> **ವಿಶ್ವಕಪ್ ಗೆಲುವು ನಮ್ಮ ಗುರಿ: ತಿಲಕ್**
>
> ಭಾರತೀಯ ಕ್ರಿಕೆಟ್ ತಂಡ ಭಾನುವಾರ ಪಾಕಿಸ್ತಾನದ ಜತೆ ಪಂದ್ಯವಾಡಲು ಈಗಾಗಲೇ ಸಿದ್ಧವಾಗಿದೆ ಮಾತ್ರವಲ್ಲ, ಉತ್ಸುಕವಾಗಿದೆ ಎಂದು ಟೀಮ್ ಇಂಡಿಯಾ ಬ್ಯಾಟ್ಸ್‌ಮನ್ ತಿಲಕ್ ವರ್ಮಾ ಹೇಳಿದ್ದಾರೆ. ಗುರುವಾರ ನಮೀಬಿಯಾ ವಿರುದ್ಧದ ಭಾರತದ ಪಂದ್ಯಕ್ಕೂ ಮುನ್ನ ನಡೆದ ಪಂದ್ಯಪೂರ್ವ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವಕಪ್ ತಂಡಕ್ಕೆ ಮರಳಿರುವುದು ನನಗೆ ನಿಜವಾಗಿಯೂ ಸಂತೋಷವಾಗಿದೆ. ವಿಶ್ವಕಪ್ ಗೆಲ್ಲುವುದು ನಮ್ಮ ಗುರಿ ಎಂದೂ ತಿಳಿದ್ದಾರೆ.

# ಸ್ಯಾಂಡಲ್‌ವುಡ್‌ಗೆ ಸಾ ರಾ ಮಹೇಶ್

ಮಾಜಿ ಸಚಿವ ಸಾ ರಾ ಮಹೇಶ್ ಕನ್ನಡ ಚಿತ್ರರಂಗಕ್ಕೆ ಎಂಟ್ರಿಕೊಟ್ಟಿದ್ದಾರೆ. ಕಿರಣ್ ವಿಶ್ವನಾಥ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಹೊಸ ಚಿತ್ರಕ್ಕೆ ಸಾ ರಾ ಮಹೇಶ್ ಬಂಡವಾಳ ಹೂಡಿದ್ದು ಆ ಮೂಲಕ ನಿರ್ಮಾಪಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ದೊಡ್ಡ ತಾರಾಬಳಗವೇ ಇರುವ ಈ ಹೊಸ ಸಿನಿಮಾ ಅದಾಗಲೇ ಸೆಟ್ಟೇರಿದ್ದು ಚಿತ್ರೀಕರಣವೂ ಆರಂಭವಾಗಿದೆ. ಮಹಾನಟಿ ಖ್ಯಾತಿಯ ಪ್ರಿಯಾಂಕಾ ಆಚಾರ್ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸುತ್ತಿದ್ದು, ಮತ್ತೊಮ್ಮೆ ಬೆಳ್ಳಿತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಯಾರೇ ನೀನು ಚೆಲುವೆ ಖ್ಯಾತಿಯ ನಟಿ ಸಂಗೀತಾ ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು ಆ ಮೂಲಕ ಮತ್ತೆ ಕನ್ನಡ ಚಿತ್ರಂಗಕ್ಕೆ ಮರಳಿ ಬಂದಿದ್ದಾರೆ. ಚಿತ್ರದ ನಾಯಕ ಯಾರು ಎಂಬುದನ್ನು ಗುಟ್ಟಾಗಿಟ್ಟಿರುವ ಚಿತ್ರತಂಡ ಮುಂದಿನ ದಿನಗಳಲ್ಲಿ ರಿವಿಲ್ ಮಾಡುವುದಾಗಿ ಹೇಳಿದೆ. ಲವ್ ಸ್ಟೋರಿ ಜತೆಗೆ ಸೆಂಟಿಮೆಂಟ್ ಸ್ಟೋರಿಯೂ ಬೆರೆತಿರುವ ಈ ಚಿತ್ರ ಗೌರಿ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಅದ್ಧೂರಿಯಾಗಿ ನಿರ್ಮಾಣವಾಗುತ್ತಿದೆ. ಸಾ ರಾ ಮಹೇಶ್ ಪತ್ನಿ ಅನಿತಾ ಸಾ ರಾ ಮಹೇಶ್ ಅದಾಗಲೇ ಕನ್ನಡ ಚಿತ್ರರಂಗದಲ್ಲಿ ಗಾಯಕಿಯಾಗಿ ಗುರುತಿಸಿಕೊಂಡಿದ್ದಾರೆ.



# ಚಂದನವನಕ್ಕೆ ಉಪ್ಪಿ ಪುತ್ರ ಆಯುಷ್

ನಟ, ನಿರ್ದೇಶಕ ಉಪೇಂದ್ರ, ಭಾರತೀಯ ಚಿತ್ರರಂಗದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಈಗ ಅವರ ಪುತ್ರ, ಆಯುಷ್ ಉಪೇಂದ್ರ ಕೂಡ ಚಿತ್ರರಂಗಕ್ಕೆ ಎಂಟ್ರಿಕೊಟ್ಟಿದ್ದಾರೆ. ಆಯುಷ್ ನಾಯಕನಾಗಿ ನಟಿಸುತ್ತಿರುವ ಮೊದಲ ಚಿತ್ರಕ್ಕೆ ಕಾಶ್ಮೀರದಲ್ಲೇ ಮುಹೂರ್ತ ನೆರವೇರಿದ್ದು, ಅಲ್ಲಿಯೇ ಮೊದಲ ಹಂತದ ಚಿತ್ರೀಕರಣ ಕೂಡ ನಡೆದಿದೆ. ಯಶ್ ಅಭಿನಯದ ಮೊದಲಾಸಲ ಚಿತ್ರವನ್ನು ನಿರ್ದೇಶಿಸಿದ್ದ ಪುರುಷೋತ್ತಮ ಸೂರಿ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಶ್ರೀಕಲ್ಪವೃಕ್ಷ ಮೂವೀ ಮೇಕರ್ಸ್ ಲಾಂಛನದಲ್ಲಿ ಅಭಿಷೇಕ್.ಎನ್.ಸಿರಿವಂತ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಅಭಿಷೇಕ್ ಸಿರಿವಂತ್ ನಿರ್ಮಾಣದ ಚೊಚ್ಚಲ ಚಿತ್ರ ಇದಾಗಿದೆ. ಖ್ಯಾತ ಛಾಯಾಗ್ರಾಹಕ ಎಚ್.ಸಿ. ವೇಣು ಛಾಯಾಗ್ರಹಣದ ಜವಾಬ್ದಾರಿ ವಹಿಸಿ ಕೊಂಡಿದ್ದು, ಅರ್ಜುನ್ ಜನ್ಯ ಸಂಗೀತ ಸಂಯೋಜಿಸುತ್ತಿ ದ್ದಾರೆ. ಸದ್ಯದಲ್ಲಿಯೇ ಚಿತ್ರದ ಶೀರ್ಷಿಕೆ ರಿಲೀಸ್ ಆಗಲಿದೆ. ಆಯುಷ್ ನಟನಾಗಲೂ ಬೇಕಾದ ಅಗತ್ಯ ತರಬೇತಿ ಪಡೆದಿದ್ದು, ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ಕಾಶ್ಮೀರದಲ್ಲಿ ಮಗನ ಮೊದಲ ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ಉಪೇಂದ್ರ, ಹಾಗೂ ಪ್ರಿಯಾಂಕಾ ಉಪೇಂದ್ರ ಅವರು ಉಪಸ್ಥಿತರಿದ್ದು, ಆಯುಷ್ ಗೆ ಮಾರ್ಗದರ್ಶನ ನೀಡಿದ್ದಾರೆ. ಅಂತು ಮತ್ತೊಬ್ಬ ಸ್ಟಾರ್ ಪುತ್ರ ಸ್ಯಾಂಡಲ್‌ವುಡ್‌ಗೆ ಎಂಟ್ರಿಕೊಟ್ಟಿರುವುದು ಸಂತಸ ತಂದಿದೆ.